ಪುಟ 21 ಸಂಚಿಕೆ 23 ಮೇ 31-ಜೂನ್ 6, 1999 ರೂ 3.00 ದುಡಿವ ಜನರ ಪ್ರಾಣಮಿತ್ರ



ಐಕ್ಯರಂಗ

ಕಾರ್ಗಿಲ್‌ನಲ್ಲಿ ಯುದ್ಧ ಭೀತಿ ಯಾರು ಹೊಣೆ?


ಡೊನೇಷನ್ ಮಾಫಿಯಾ



ಬಡವರಿಗೆ ಶಿಕ್ಷಣ ನಿರಾಕರಿಸುವ ಸಂಚು



ಕಮ್ಆನ್ ಇಂಡಿಯಾ ದಿಖಾದೋ!!



ಜ್ಯೋತಿಬಸು ಆತ್ಮಕಥನ ಧಾರಾವಾಹಿ ಆರಂಭ

ಬಿಜೆಪಿ-ಲೋಕಶಕ್ತಿ ಕಲಹ

ರಾಷ್ಟ್ರದ ರಾಜಕಾರಣಕ್ಕೇರಿದ ರಾಮಕೃಷ್ಣಹೆಗಡೆಯವರು ರಾಜ್ಯದಲ್ಲಿ ಮುಂಬರುವ ಚುನಾವಣೆಗಳಿಗಾಗಿ ರಂಗತಾಲೀಮು ಆರಂಭಿಸಿದ್ದಾರೆ. ಇತ್ತೀಚಿಗಿನವರೆಗೂ ವಾಜಪೇಯಿ ಬಿಜೆಪಿಯ ಗುಣಗಾನ ಮಾಡುತ್ತಿದ್ದ ಹೆಗಡೆಯವರು ಇದೀಗ ಪ್ರಾದೇಶಿಕ ಪಕ್ಷಗಳ ಒಕ್ಕೂಟ ರಚನೆಯ ಸೂತ್ರ ಮುಂದಿರಿಸಿದ್ದಾರೆ. ಶರದ್ ಪವಾರ್ ಕಾಂಗ್ರೆಸ್‌ನಿಂದ ಹೊರಬಂದುದು ಹೆಗಡೆಯವರಿಗೆ ಉತ್ಸಾಹ ಮೂಡಿಸಿರುವಂತಿದೆ. ಬಿಜೆಪಿಯಂತಹ ಪಕ್ಷದ ಜೊತೆಗೆ ಹೇಗುವುದು ಹೆಗಡೆಯವರಿಗೆ ಬಹುಶಃ ಆಯಾಸಕರವಾಗಿರಬಹುದು. ಮುಂದೊಂದು ದಿನ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ಪುನಃ ಲಾಭದಾಯಕ ಮಂತ್ರಿಗಿರಿಯ ಸ್ಥಾನ ಗಟ್ಟಿಗೊಳಿಸಿಕೊಳ್ಳಲು ಈ ಶಕ್ತಿ ಆಗಬಹುದು, ಅಥವಾ ಯಾರಿಗೂ ಬಹುಮತ ಬರದೇ ಒಂದು ವೇಳೆ ಅದೃಷ್ಟ ಖುಲಾಯಿಸಿದರೆ ಪ್ರಧಾನಿಯ ಪಟ್ಟವೂ ತಮಗೆ ಸಿಗಬಹುದು ಅಥವಾ ಇತರೆ ಪ್ರಾದೇಶಿಕ ಪಕ್ಷಗಳ ಬೆಂಬಲದಿಂದ ಬೇಕಾದ ವ್ಯವಹಾರ ಕುದುರಿಸಿಕೊಳ್ಳಬಹುದು - ಹೀಗೆ ಅನೇಕ ಗುಳ್ಳೇನರಿಯ 'ಚಿಂತನೆ' ಯಲ್ಲಿ ಹೆಗಡೆಯವರೀಗ ಮಗ್ನರು.

ಜನತಾದಳದಿಂದ ಉಚ್ಚಾಟನೆಗೊಂಡ ಬಳಿಕ ಇನ್ನೇನು ಕರ್ನಾಟಕದಲ್ಲಿ ಹೊಸ ಸರ್ಕಾರವನ್ನು ರಚಿಸಿ ಬಿಡುತ್ತಾರೆಂಬಂತೆ ಹೆಗಡೆಯವರು ಓಡಾಡಿದರು. ಆದರೆ ಆ ನಡುವೆಯೇ ಬಿಜೆಪಿ - ಲೋಕಶಕ್ತಿ ಮೈತ್ರಿ ಮೂಲಕ ವಾಜಪೇಯಿ ಸರ್ಕಾರದಲ್ಲಿ ಮಂತ್ರಿಸ್ಥಾನ ಗಿಟ್ಟಿಸಿಕೊಂಡರು. ವರ್ಷಗಳು ಉರುಳಿದರೂ ಜನತಾದಳ ಸರ್ಕಾರವನ್ನು ಹೋಳು ಮಾಡಲಿಲ್ಲ. ಹೆಗಡೆಯವರ ಬಲಗೈ ಬಂಟರಾಗಿದ್ದ ದೇಶಪಾಂಡೆ ಮತ್ತಿತರರನ್ನು ಮುಖ್ಯಮಂತ್ರಿ, ಮಂತ್ರಿಗಳನ್ನು ಮಾಡಲಿಲ್ಲ. ಎಲ್ಲದಕ್ಕೂ ಕಾಯಬೇಕೆಂಬ ಮುತ್ಸದ್ದಿತನದ ನಗು ಉಳಿದವರನ್ನು ತಣಿಸಲಿಲ್ಲ. ಹೆಗಡೆಯವರಿಗೆ ಅಂತಹ ಶಕ್ತಿಯೂ, ಮನಸ್ಸೂ ಇಲ್ಲದ್ದನ್ನು ಮನಗಂಡು ಅವರ ಕಟ್ಟಾ ಬೆಂಬಲಿಗರಾದ ಆರ್.ವಿ.ದೇಶಪಾಂಡೆ, ಬಿ.ಆರ್.ಯಾವಗಲ್, ಪಿ.ಸಿ.ಸಿದ್ದನಗೌಡರ್ ಮುಂತಾದ ಏಳು ಪ್ರಮುಖ ನಾಯಕರು ಹೆಗಡೆಯವರ ಸಂಗಕ್ಕೆ ಸಲಾಮು ಹೊಡೆದು ಕಾಂಗ್ರೆಸ್ ಸೇರಿದ್ದು ಗಮನಾರ್ಹ ಬೆಳವಣಿಗೆ.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅಭೇಧ್ಯವೆಂದೆಲ್ಲಾ ಕರೆದುಕೊಳ್ಳುತ್ತಿದ್ದ ಬಿಜೆಪಿ-ಲೋಕಶಕ್ತಿಯ ಸಂಬಂಧದಲ್ಲಿ ಒಡಕು ಧ್ವನಿ ಕೇಳಿಸತೊಡಗಿದೆ. ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸುವುದರಲ್ಲಿ ನಿಪುಣರಾದ ಬಿಜೆಪಿಗಳು ಯಡಿಯೂರಪ್ಪನವರೇ ಮುಂದಿನ ಮುಖ್ಯಮಂತ್ರಿಗಳೆಂದು ಸಂಕಲ್ಪ ಯಾತ್ರೆಯುದ್ದಕ್ಕೂ ಸಾರಿಕೊಂಡು ಬಂದದ್ದು ಲೋಕಶಕ್ತಿಯ ನಾಯಕರನ್ನು ಕೆರಳಿಸಿದೆ. ಅಲ್ಲದೇ ಪ್ರಧಾನಿ ವಾಜಪೇಯಿಯವರು ಉದ್ಘಾಟಿಸಿದ ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದ

ಸಂಪಾದಕೀಯ

ಕಾರ್ಯಕ್ರಮಕ್ಕೆ ಹೆಗಡೆಯವರನ್ನು 'ಆಹ್ವಾನಿಸಿಯೇ ಇರಲಿಲ್ಲ' ಎಂಬುದು ವಿಶೇಷ ಅಂಶ. ಈ ಒಡಲಲ್ಲೇ 'ಹೆಗಡೆಯವರು ರಾಷ್ಟ್ರ ಮುಖಂಡರು ಅವರು ರಾಷ್ಟ್ರದ ರಾಜಕರಣದಲ್ಲೇ ಇರಲಿ' ಎಂದು ಹೇಳುವ ಮೂಲಕ ಸಚಿವ ಅನಂತಕುಮಾರ್ ಮುಚ್ಚಿಟ್ಟುಕೊಂಡಿದ್ದ ಅಜೆಂಡಾವನ್ನು ಸ್ವಲ್ಪವೇ ಹೊರತೆಗೆದಿದ್ದಾರೆ. ಮಾತ್ರವಲ್ಲ ಲೋಕಶಕ್ತಿಯನ್ನು ಕಿರಿಯ ಭಾಗಿದಾರನಂತೆ ತಾನೇ ಹಿರಿಯಣ್ಣನಂತೆ ನಡೆದುಕೊಳ್ಳಲಾಗುತ್ತಿದೆಯೆಂದು ಲೋಕಶಕ್ತಿ ಮುಖಂಡರು ಪರಿತಪಿಸಿದಾಗ, ಹೆಗಡೆಯವರು ಸಮಾಧನ ಪಡಿಸಲೆತ್ನಿಸಿ, ತಾವು ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲವೆಂದು ಹೇಳಿ ಚುನಾವಣೆ ಬಳಿ ಇತ್ಯರ್ಥಗೊಳ್ಳಲಿ ಎಂದಿರುವುದು ಲೋಕಶಕ್ತಿ ವಲಯದಲ್ಲೇ ತೀರಾ ನಿರಾಶೆಯುಂಟು ಮಾಡಿದೆ. ಇತರೆ ಪಕ್ಷಗಳಲ್ಲಿ ಗೆಲ್ಲುವ ಕುದುರೆ ಹಿಂಬಾಲಿಸಲು ಕಾದು ಕುಳಿತಿರಬಹುದಾದವರಿಗೂ ಖೇದ ತಂದಿದೆ. ಈ ನಡುವೆ ಜನತಾದಳ ತನ್ನ ಒಳ ತಳಮಳಗಳನ್ನು ಆದಷ್ಟು ನಿವಾರಿಸಿಕೊಳ್ಳಲು ಮುಂದಾಗಿರುವುದು, ಸ್ವತಃ ಮುಖ್ಯಮಂತ್ರಿ ಪಟೇಲರೇ ಹೆಗಡೆಯವರಿಗೆ 'ಬಿಜೆಪಿ ಸಂಗ ತೊರೆಯಲು' ಕರೆ ನೀಡಿರುವುದು, ಭಿನ್ನಮತೀಯರ ಯತ್ನಗಳನ್ನು ಇನ್ನಾದರೂ ನಿಲ್ಲಿಸಿ ಎಂದಿರುವುದು ಪಟೇಲರನ್ನು ಸೆಳೆಯ ಬಯಸಿದ ಹೆಗಡೆಯವರ ಪ್ರಯತ್ನಗಳನ್ನು ಅರ್ಥಹೀನವನ್ನಾಗಿಸಿದೆ. ಈ ಹಿನ್ನೆಲೆಯಲ್ಲಿಯೇ 'ರಾಜ್ಯದ ರಾಜಕೀಯದಲ್ಲಿ ಶಕ್ತಿಗಳ ಹೊಸ ಧೃವೀಕರಣ ಇನ್ನು ಮುಗಿದಂತೆ ಎಂದೂ, ಪಕ್ಷ ಕಟ್ಟಲು ಶ್ರಮಿಸಿ' ಎಂದು ಹೆಗಡೆಯವರು ಕಾರ್ಯಕರ್ತರಿಗೆ ಸೂಚಿಸಿರುವುದು ಗಮನಿಸಬೇಕಾದ ಅಂಶ. ಮತ್ತು ಲೋಕಶಕ್ತಿ ಅನುಭವಿಸುತ್ತಿರುವ ಹತಾಶೆಯ ಸ್ಥಿತಿಯ ಸೂಚಕವಾಗಿದೆ. ಈ ಸ್ಥಿತಿಯಲ್ಲೇ ಬಿಜೆಪಿ ಲೋಕಶಕ್ತಿ ಮೈತ್ರಿ ಮುಂದುವರಿಯುತ್ತಿದೆ. ಯಾವ ದಿಕ್ಕಿಗೆ ತಿರುಗುವುದು ಎಂಬುದನ್ನು ಕಾದು ನೋಡಬೇಕು.

ಇತ್ತೀಚೆಗೆ ಜನತಾದಳದ ಶಾಸಕರಿಗೆ ತಮ್ಮ ಪಕ್ಷದಲ್ಲಿ ಪ್ರವೇಶವಿಲ್ಲ' ಎಂದು ಸ್ವಕಲ್ಪಿತ ಹಾಸ್ಯಾಸ್ಪದ ಹೇಳಿಕೆ ನೀಡಿರುವ ಯಡಿಯೂರಪ್ಪನವರು ಆಗಲೇ ಮುಖ್ಯಮಂತ್ರಿ ಈದ ಗತ್ತಿನಲ್ಲಿದ್ದಾರೆ. ಇವರ 'ನಿಶೆ' ಇಳಿಸುವುದು ಜನತೆಯ ಜವಾಬ್ದಾರಿ.



ಹಿಂದೆಲ್ಲಾ ನೀರು ಕೊಡುತ್ತೇವೆ, ಆಸ್ಪತ್ರೆ ಕೊಡುತ್ತೇವೆ, ಶಾಲೆ ಕೊಡುತ್ತೇವೆ ಅಂತ ಓಟು ಕೇಳುತ್ತಿದ್ದರು.... ಈ ಬಾರಿ ಸೋನಿಯಾ ಪ್ರಧಾನಿ ಯಾಗದಂತೆ ತಡೆಯುತ್ತೇವೆ ಅಂತಿದ್ದಾರೆ!

ಕೃಪೆ: ಜನವಾಹಿನಿ

ನಿಮ್ಮ ಪ್ರಶ್ನೆ ನಮ್ಮ ? ಉತ್ತರ

ದಿನಾಂಕ ಮೇ 3 ರಿಂದ 9 ರ ಐಕ್ಯರಂಗ ಸಂಚಿಕೆಯಲ್ಲಿ, ಅಂಬೇಡ್ಕರ್‌ರವರ ತಾಕಲಾಟಗಳು ಹಾಗೂ ದಲಿತ ಚಳುವಳಿ ಎಂಬ ಲೇಖನದಲ್ಲಿ ಮಾರ್ಕ್ಸ್‌ವಾದದ ಕಡೆಗೆ ಸಾಗುವುದನ್ನು ತಪ್ಪಿಸುವುದಕ್ಕಾಗಿ ಅಂಬೇಡ್ಕರ್ ಬೌದ್ಧ ಧರ್ಮವನ್ನು ಸ್ವೀಕರಿಸಿದರು ಎಂದು ಬರೆದಿದ್ದೀರಿ ಇದು ಸರಿಯೇ? ಹಿಂದೂ ಧರ್ಮಕ್ಕಿಂತ ಜಾತಿವಾದ, ಅಸ್ಪೃಶ್ಯತೆ ಇಲ್ಲದ ಬೌದ್ಧ ಧರ್ಮ ಆಕರ್ಷಕವಾಗಿ ಕಂಡದ್ದರಿಂದ ಅವರು ಬೌದ್ಧಧರ್ಮವನ್ನು ಸ್ವೀಕರಿಸಿದರು ಎನ್ನುವುದೇ ಸರಿಯಾದದ್ದಲ್ಲವೇ?

– ಬಿ. ರಾಜಶೇಖರಮೂರ್ತಿ

ಮಾರ್ಕ್ಸ್‌ವಾದದ ಕಡೆಗೆ ಸಾಗುವುದನ್ನು ತಪ್ಪಿಸುವುದಕ್ಕಾಗಿ ಅಂಬೇಡ್ಕರ್‌ರವರು ಬೌದ್ಧ ಧರ್ಮವನ್ನು ಸ್ವೀಕರಿಸಿದರು ಎನ್ನುವ ಮಾತು ಕೇವಲ ನಾನು ಹೇಳಿದ್ದಲ್ಲ - ಅಂಬೇಡ್ಕರ್ ರವರು ಮತಾಂತರವಾಗುವ ಸಂದರ್ಭದಲ್ಲಿ ಮಾಡಿದ ಘೋಷಣೆಯನ್ನು ಓದಿದವರಿಗೆಲ್ಲಾ ಅನ್ನಿಸುವ ಮಾತು. ಅವರ ಮಾತುಗಳನ್ನು ಲೇಖನದಲ್ಲಿ ಉಲ್ಲೇಖಿಸಲಾಗಿದೆ. 'ಮಾರ್ಕ್ಸ್ ಮಹಾಶಯನ ತತ್ವದರ್ಶನ ಮನುಷ್ಯನ ಸರ್ವಾವಶ್ಯಕತೆಗಳನ್ನು ಪೂರೈಸುವುದಿಲ್ಲ. ಅವನಿಗೆ ಮನಸ್ಸು ಇದೆ ಮನಸ್ಸಿಗೆ ಆಹಾರ ಬೇಕು. ಧರ್ಮ ಈ ಆಹಾರವನ್ನೊದಗಿ ಸುತ್ತದೆ" ಎಂದು ಅವರು ಹೇಳಿದ್ದಾರೆ. ಇದರಲ್ಲಿ ಮೂರು ಅಂಶಗಳಿವೆ ಮಾರ್ಕ್ಸ್ ವಾದ ಕೇವಲ ಹೊಟ್ಟೆಯ ಅವಶ್ಯಕತೆಯನ್ನು ಪೂರೈಸುವುದಕ್ಕೆ ಮಾತ್ರ ಮನಸ್ಸಿನ ಅವಶ್ಯಕತೆಯನ್ನು ಪೂರೈಸುವುದಕ್ಕಲ್ಲ ಎನ್ನುವುದು ಒಂದು. ಮತ್ತೊಂದು ಅಂಶ ಮನಸ್ಸಿನ ಅವಶ್ಯಕತೆಯನ್ನು ಬೇರೆ ಯಾವುದೂ ಪೂರೈಸಲಾರದು ಧರ್ಮ ಮಾತ್ರ ಎಂಬ ಅಂಬೇಡ್ಕರ್‌ರವರ ಯೋಚನೆ. ಧರ್ಮ ಮಾತ್ರ ಎಂಬ ತೀರ್ಮಾನಕ್ಕೆ ಬಂದ ಮೇಲೆ ಯಾವ ಧರ್ಮ ಎಂಬುದು ಮುಂದಿನ ಪ್ರಶ್ನೆ.

ಮಾರ್ಕ್ಸ್‌ವಾದ ಹೊಟ್ಟೆಯ ಅವಶ್ಯಕತೆಯನ್ನು ಮಾತ್ರ ಪೂರೈಸುತ್ತದೆ ಎನ್ನುವುದು ಅಂಬೇಡ್ಕರವರ ಯೋಚನೆ ಮಾತ್ರವಲ್ಲ. ಮಾರ್ಕ್ಸ್‌ವಾದ ಕೇವಲ ಆರ್ಥಿಕ ಪ್ರಶ್ನೆಗಳಿಗೆ ಮಾತ್ರ ಸಂಬಂಧಿಸಿದ್ದು ಅಥವಾ ಇಡೀ ಸಮಾಜದ ಎಲ್ಲ ಪ್ರಶ್ನೆಗಳನ್ನು ಆರ್ಥಿಕ ಪ್ರಶ್ನೆಯನ್ನಾಗಿ ಮಾತ್ರನೋಡುತ್ತದೆ ಎನ್ನುವುದು ಮಾರ್ಕ್ಸ್‌ವಾದದ ಜನಪ್ರಿಯತೆಯನ್ನು ಕಂಡು ಹೆದರಿದ ಯುರೋಪಿನ ಬಂಡವಾಳಶಾಹಿ ಚಿಂತಕರು ಈ ವಾದದ ವಿರುದ್ಧ ಬಳಸಿದ ವಿಚಾರ. ಈ ವಾದ ಅನೇಕ ಚಳುವಳಿಗಳು, ಶಕ್ತಿಗಳು, ವ್ಯಕ್ತಿಗಳು ಮಾರ್ಕ್ಸ್‌ವಾದದ ವಿರುದ್ಧ ತಿರುಗಿಸುವುದಕ್ಕೆ ಮಾರ್ಕ್ಸ್‌ವಾದದಿಂದ ದೂರಸರಿಸುವುದರಲ್ಲಿ ಯಶಸ್ವಿಯಾಯಿತು.

ಯುರೋಪಿನ, ಅಮೇರಿಕದ ವಿಶ್ವ ವಿದ್ಯಾಲಯಗಳ ಯಜಮಾನ ಸಂಸ್ಕೃತಿಯ ಭಾಗವೇ ಆಗಿಹೋಗಿದ್ದ ಈ ವಿಚಾರ ಅಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕ ಭಾರತೀಯರ ಮೇಲೆ ಪರಿಣಾಮ ಬೀರಿದೆ. ಆದರಲ್ಲಿ ಅಂಬೇಡ್ಕರ್‌ರವರೂ ಒಬ್ಬರು.

ಈ ಅಭಿಪ್ರಾಯ ಸರಿಯೇ?

ಮಾರ್ಕ್ಸ್‌ವಾದ ಮಾನವನ ಸಮಾಜದ ಸಮಗ್ರ ಬೆಳವಣಿಗೆಯ ವಿಜ್ಞಾನ. ಮಾನವನಿಂದ ಮಾನವನ ಶೋಷಣೆಯನ್ನು ಕಿತ್ತೆಸೆದಾಗ ಮಾತ್ರ ಮಾನವೀಯತೆ ಸಂಪೂರ್ಣವಾಗಿ ಅರಳುತ್ತದೆ. ಸಾಂಸ್ಕೃತಿಕ, ಸಾಹಿತ್ಯಕ ಬೆಳವಣಿಗೆಯಲ್ಲಿ ವಿಜ್ಞಾನ, ಸಂಶೋಧನೆಗಳಲ್ಲಿ ಅವುಗಳ ಸಾರ್ಥಕತೆಯಲ್ಲಿ ಒಂದು ದೊಡ್ಡ ವಿಕಾಸ, ಮುನ್ನೆಗೆತ ಕಾಣಲು ಸಾಧ್ಯ ಎನ್ನುತ್ತದೆ. ಸಮಾಜದ ಬದಲಾವಣೆಯ ವಾಸ್ತವಿಕ ವಿಧಾನಗಳನ್ನು ವೈಜ್ಞಾನಿಕವಾಗಿ ಶೋಧಿಸಿತ್ತು. ಇಂತಹ ಶೋಧನೆಯ ಮಾರ್ಗದಲ್ಲಿ ಇಡೀ ಮಾನವ ಸಮಾಜದ ನಾಗರೀಕತೆಯ ಬದಲಾವಣೆಯ ಸಂದರ್ಭಗಳನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಆಳವಾದ ವಿಶ್ಲೇಷಣೆಗೆ ಒಳಪಡಿಸಿದರು. ಸಾಹಿತ್ಯ, ಸಾಂಸ್ಕೃತಿಕ ಕಾನೂನು ತತ್ವಶಾಸ್ತ್ರಗಳನ್ನು ಶೋಧಕ್ಕೊಳ ಪಡಿಸಿದರು. ಈ ಶೋಧ ಅವರನ್ನು ಸಮಾಜದ ಆರ್ಥಿಕ ಅಡಿಪಾಯವನ್ನು ನಾಶಪಡಿಸದೆ ಸಮಾಜದ ಬದಲಾಗದು; ಮಾನವೀಯತೆ ಅರಳದು; ಸಂಸ್ಕೃತಿ ಸಾಹಿತ್ಯ ವಿಕಸನ ಹೊಂದಲಾರವು; ಇದು ರೋಮನ್, ಈಜಿಪ್ಟ್ ನಾಗರೀಕತೆಗಳ ಅನುಭವ ಹಾಗೇಯೇ ಆಧುನಿಕ ಸಮಾಜದ ಉದಯ, ಆಧುನಿಕ ಮಾನವನ ಅವನ ಸೃಷ್ಟಿಯಾದ ಸಾಹಿತ್ಯ ಸಂಸ್ಕೃತಿಗಳಿಂದಲು ಕಲಿಯುವ ಪಾಠ ಎಂಬ ತೀರ್ಮಾನಕ್ಕೆ ಒಯ್ದಿತು. ಶೇಕ್ಸ್‌ಪಿಯರ್ ಗಯಟೆ ಡಾಂಟೆ ಸಾಹಿತ್ಯದ ಶಿಲ್ಲರ್, ಸ್ಕಾಟ್ ಬಾಲ್ಜಾಕ್‌ಗಳ ಯುರೋಪಿನ ಜಾನಪದ ಅಭ್ಯಾಸವೂ ಈ ತೀರ್ಮಾನಕ್ಕೆ ಪೂರಕವಾಯಿತು. ಮಾರ್ಕ್ ಎಂಗೆಲ್ಸ್‌ರವರು ಈ ತೀರ್ಮಾನ ವನ್ನು ತಿರುಚಿ ಅದು ಸಂಕುಚಿತ ಗೊಟ್ಟೆ ಶಾಸ್ತ್ರವೆಂದು ಕಾಣಿಸುವ ಮೂಲಕ ಜನರನ್ನು ದೂರಸರಿವ ಪ್ರಯತ್ನ ವಿಶ್ವದ ಎಲ್ಲಾ ಸಂದರ್ಭದಲ್ಲಿಯೂ ಯಶಸ್ವಿಯಾಗಲಿಲ್ಲ ಎನ್ನುವುದಕ್ಕೆ ಜಗತ್ತಿನ ವಿವಿಧ ಭಾಗಗಳ ಇತಿಹಾಸ ಸಮಾಜ ಶಾಸ್ತ್ರ ಮನಶ್ಶಾಸ್ತ್ರಗಳ; ಜನಪದ ಅಧ್ಯಯನಕ್ಕೆ ಸಾಹಿತ್ಯ, ಸಾಂಸ್ಕೃತಿಕ ವಿಚಾರಗಳ ಬೆಳವಣಿಗೆಗೆ ಮಾರ್ಕ್ಸ್‌ವಾದ ನೀಡಿದ ಕಾಣಿಕೆ ಸಾಕ್ಷಿ. ಅದು ಭಾರತದ ಅರ್ಥಶಾಸ್ತ್ರ ರಾಜಕೀಯ ಶಾಸ್ತ್ರ ಮಾತ್ರವೇ ಅಲ್ಲದೆ ಇತಿಹಾಸ, ಸಮಾಜಶಾಸ್ತ್ರಗಳ ಬೆಳವಣಿಗೆ ನೀಡಿದ ಕಾಣಿಕೆಯಲ್ಲೂ ಸಾಬೀತಾಗಿದೆ.

ಇಂದಿಗೂ ಸಮಾಜವಾದೀ ದೇಶಗಳಲ್ಲಿಯೇ ಜಗತ್ತಿನ ಅತ್ಯಂತ ಹೆಚ್ಚು ಸಾಕ್ಷರತೆ ಉನ್ನತ ಶಿಕ್ಷಣ, ಜಾನಪದೀಯ ಸಂಸ್ಕೃತಿಗಳ ವಿವಿಧ ಭಾಷಾ ಸಾಹಿತ್ಯಗಳ ಅರಳುವಿಕೆ ವ್ಯಾಪಕ ಓದು ಸಾಧ್ಯವಾಗಿರುವುದು. ನಮ್ಮ ಸಮಾಜವನ್ನು ಕಾಡುತ್ತಿರುವ ಅತ್ಯಂತ ತೀವ್ರ ಸಾಮಾಜಿಕ, ಸಾಂಸ್ಕೃತಿಕ ಕಾನೂನು, ರಾಜಕೀಯದ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಲು ಮಾರ್ಕ್ಸ್‌ವಾದವನ್ನು ಅವಲಂಬಿಸಬೇಕಾಗಿದೆ. ಎಂಬುದನ್ನು ಮಾರ್ಕ್ಸ್‌ವಾದಿಗಳಲ್ಲದವರೂ ಅಂಗೀಕರಿಸುತ್ತಾರೆ.

ಮಾರ್ಕ್ಸ್‌ವಾದವನ್ನು ಪಕ್ಕಕ್ಕಿಟ್ಟರೂ ಅಂಬೇಡಕರ್‌ರವರು ಮನಸ್ಸಿನ ಅವಶ್ಯಕತೆಯನ್ನು ತೃಪ್ತಿಪಡಿಸುವುದು ಧರ್ಮ ಮಾತ್ರ ಎಂಬ ನಿಲುವಿಗೆ ಏಕೆ ಬಂದರು. ಮಾರ್ಕ್ಸ್‌ವಾದವಲ್ಲದ ಅನೇಕ ವಿಚಾರ ಹಾಗೂ ವಾದಗಳಲ್ಲಿ ಅವರಿಗೆ ಮನಸ್ಸನ್ನು ವಿಚಾರ ಶೀಲತೆಯ ಕಡೆಗೆ ಸೆಳೆಯುವ ಶಕ್ತಿ ಕಾಣಿಸಲಿಲ್ಲವೆ? ಯಾವ ಧರ್ಮದ ಅವಶ್ಯಕತೆಯೂ ಇಲ್ಲದೆ ಪ್ರಖರ ವಿಚಾರಗಳನ್ನು ಮಂಡಿಸಿದ ಜನಸಾಮಾನ್ಯರನ್ನು ಕ್ರಾಂತಿಯ ದಾರಿಗೆ ಹಚ್ಚಿದ ಫ್ರೆಂಚ್ ವಿಚಾರವಾದಿಗಳ ಪರಂಪರೆ, ಇಂಗ್ಲಿಷ್ ವಿಜ್ಞಾನಿಗಳ ಪರಂಪರೆ, ಭಾರತದಲ್ಲೆಯೇ ನಾಸ್ತಿಕ ಚಾರ್ವಾಕ ಲೋಕಾಯತರ ಪರಂಪರೆಗಳ ಕಡೆಗೆ ಅವರ ಗಮನಹರಿಯಲಿಲ್ಲವೆ?

ಒಂದು ಧರ್ಮದ ಒಳಗಡೆಯ ಸಮಸ್ಯೆಗಳನ್ನು ಮತ್ತೊಂದು ಹೊಸ ದರ್ಮದ ವಿಚಾರ ಪರಂಪರೆಗೆ ಕಾರಣವಾಗುವ ಮೂಲಕ ಹಿಂದೆ ಪರಿಹರಿಸಲಾಗುತ್ತಿತ್ತು. ಆದರೆ ಆಧುನಿಕ ವಿಶ್ವದಲ್ಲಿ ಧರ್ಮದ ನೆಲೆಯನ್ನು ಮೀರಿದ ವಿಚಾರಗಳ ಪರಂಪರೆಯೇ ಪ್ರಗತಿ ಪರವಾದದ್ದು. ಇಂತಹ ಸಂದರ್ಭದಲ್ಲಿ ಮತ್ತೆ ಧಾರ್ಮಿಕ ದಾರಿಗಳಲ್ಲಿ ಪರಿಹಾರ ಕಂಡುಕೊಳ್ಳಲು ಬಯಸುವುದು ಮುಂದೆ ಸಾಗುವ ಚರಿತ್ರೆಯನ್ನು ಹಿಮ್ಮುಖವಾಗಿ ನಡೆಸುವುದು ಎಂದೇ ಅದರ ಕೊನೆಯಲ್ಲಿ ಮಾರ್ಕ್ಸ್‌ವಾದವು ಬೌದ್ಧ ಧರ್ಮವನ್ನು ಅದು ಹುಟ್ಟಿದ ಸಂದರ್ಭದಲ್ಲಿ ಸಮಾಜದ ಮುನ್ನಡೆಗೆ ದೊಡ್ಡ ಕಾಣಿಕೆ ನೀಡಿತೆಂದು ಪರಿಗಣಿಸುತ್ತದೆ. ಆದರೆ 2500 ವರ್ಷಗಳ ಹಿಂದಿನ ಪರಿಹಾರ ವನ್ನೇ ಇಂದು ಕೂಡ ಅವಲಂಬಿಸುವುದು ಪ್ರಗತಿ ಶೀಲವಾದ ಮಾರ್ಗವಲ್ಲ ಎಂದು ಪರಿಗಣಿಸುತ್ತದೆ.

ನಿಮ್ಮ ಪತ್ರ

ನಾನೂ ಚಂದಾ ಮಾಡಿಸ್ತೀನಿ

ಐಕ್ಯರಂಗವನ್ನು ಮಿತ್ರರಿಗೆ, ಹಿತೈಷಿಗಳಿಗೆ ಮಾತ್ರವಲ್ಲದೆ ನಮ್ಮ ಕುಟುಂಬದವರಿಗೂ ಮಾರಲು ನಾನು ಯಾವತ್ತೂ ಪ್ರಯತ್ನಿಸುತ್ತಿದೆ. ನಮ್ಮ ಸ್ನೇಹಿತರೊಬ್ಬರು ಹಿಂದೆ ತೆಗೆದುಕೊಳ್ಳುತ್ತಿದ್ದವರು. ನೀವು ಯಾವಾಗಲೂ ಬಿಜೆಪಿ ಬೈಯುತ್ತೀರಾ, ರಾಜಕೀಯದ ಬಗ್ಗೆ ಮಾತ್ರ ಬರೆಯುತ್ತೀರ ಎಂದು ನಿಲ್ಲಿಸಿ ಬಿಟ್ಟಿದ್ದರು. ಹೊಸ ಸ್ವರೂಪದ 'ಐಕ್ಯರಂಗ' ನೋಡಿ ಈಗ ಅವರಾಗಿ ನನಗೆ ವಾರ ವಾರ ಪತ್ರಿಕೆ ಕೊಡಮ್ಮ - ಚಂದಾ ಮಾಡಿಸ್ತೀನಿ ಅಂತ ಮುಂದೆ ಬಂದಿದ್ದಾರೆ.

ಪ್ರಭಾ,
ಬೆಂಗಳೂರು

ಹೊಸ ಆಯಾಮ

ಪ್ರಿಯರೇ,

'ಐಕ್ಯರಂಗ' ಹೊಸ ವಿನ್ಯಾಸದ ಎರಡನೇ ಸಂಚಿಕೆಯ ಮುಖಪುಟ ವಿನ್ಯಾಸ ಚೆನ್ನಾಗಿ ಮೂಡಿಬಂದಿದೆ, ಒಳಪುಟಗಳೂ.

ಲೇಖನಗಳಿಗೆ ಹೊಸ ಆಯಾಮವೂ ಪ್ರಾಪ್ತವಾಗುತ್ತಲಿದೆ. ಇವೆಲ್ಲಾ ಸ್ವಾಗತಾರ್ಹವಾದವು.

ಆರ್.ವಿ.ಭಂಡಾರಿ

ಸಿನಿಮಾ ವಿಮರ್ಶೆ, ಕ್ರೀಡಾಸುದ್ದಿ ಬೇಕು

ಐಕ್ಯರಂಗ ಹೊಸ ಸ್ವರೂಪ ಚೆನ್ನಾಗಿ ಬರುತ್ತಿದೆ. ರಾಜಕೀಯ ವಿಚಾರ ಮಾತ್ರವಲ್ಲದೆ ಕ್ರೀಡೆ, ಸಿನಿಮಾಗಳ ಬಗ್ಗೆ ಅದು ಕೊನೆ ಪುಟದಲ್ಲಿ ಕೊಡಬೇಕು. ಅದನ್ನು ಪ್ರಗತಿಪರ ದೃಷ್ಟಿಯಿಂದ ಬರೆಯಬೇಕು. ಸಿನಿಮಾ ವಿಮರ್ಶೆ, ಕ್ರೀಡಾ ಸುದ್ದಿ ಬಂದರೆ ಪತ್ರಿಕೆ ಇನ್ನಷ್ಟು ಆಕರ್ಷಕವಾಗಬೇಕು.


ನಾಗರಾಜ್, ಬೆಂಗಳೂರು

ಹೊಸ ಸ್ವರೂಪ ಮೆಚ್ಚಿಗೆಯಾಗಿದೆ

ನಮ್ಮ ಅಂಗಡಿಯಲ್ಲಿ ಹಿಂದೆ ಐಕ್ಯರಂಗ ಇಡುತ್ತಿದ್ದೆವು. ಬಂದವರಿಗೆ ಅದನ್ನು ಮಾರುತ್ತಿದ್ದೆವು. ಹೊಸ ಸ್ವರೂಪ ಬಂದ ಮೇಲೆ ಒಂದೆರಡು ಪ್ರತಿ ನೋಡಿದವರು, ಪ್ರತಿ ಮಂಗಳವಾರ ಬಂದು ಈಗ ಕೊಂಡುಕೊಂಡು ಹೋಗುತ್ತಿದ್ದಾರೆ.

ಬಸಮ್ಮ ಬೆಂಗಳೂರು

ಕಾರ್ಗಿಲ್‌ನಲ್ಲಿ ಯುದ್ಧದಂತಹ ಸ್ಥಿತಿಗೆ ಬಿಜೆಪಿ ಸರ್ಕಾರದ ನಿರ್ಲಕ್ಷ್ಯವೇ ಕಾರಣ



ಕಾರ್ಗಿಲ್ ಪ್ರದೇಶದ ನಕ್ಷೆ

ಕಾಶ್ಮೀರದಲ್ಲಿ ಕಾರ್ಗಿಲ್ ಒಂದು ಗಡಿ ಪ್ರದೇಶ. ಶ್ರೀನಗರದಿಂದ ಸುಮಾರು ಇನ್ನೂರು ಕಿ.ಮಿ. ಉತ್ತರಕ್ಕಿರುವಂತಹುದು. ಅಲ್ಲಿ ಈಗ ಉದ್ರೇಕಕಾರಿ ಯುದ್ಧದಂತಹ ಪರಿಸ್ಥಿತಿ ಉಂಟಾಗಿದೆ. ಮೇ ಮೊದಲ ವಾರದಿಂದಲೇ ಆಧುನಿಕ ಶಸ್ತ್ರಸಜ್ಜಿತ ತಾಲಿಬಾನ್ ಉಗ್ರಗಾಮಿಗಳು ಮತ್ತು ಮಫ್ತಿಯಲ್ಲಿರುವ ಪಾಕಿಸ್ತಾನದ ಸೈನಿಕರು ಗಡಿದಾಟಿ ನುಸುಳಿ ಸುಮಾರು 300 ಚದರ ಕಿ.ಮಿ. ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಈ ಪ್ರದೇಶ ಸುಮಾರು 18 ಸಾವಿರ ಅಡಿ ಎತ್ತರದಲ್ಲಿದ್ದು ದುರ್ಗಮ ಪ್ರದೇಶ. ಚಳಿಗಾಲದಲ್ಲಿ ಸದಾ ಹಿಮ ಬೀಳುವ ಪ್ರದೇಶ. ಈ ಉಗ್ರಗಾಮಿಗಳಿಂದ ಕಾರ್ಗಿಲ್ ಪ್ರದೇಶವನ್ನು ವಾಪಸು ಪಡೆಯಲು ಭೂಸೈನ್ಯದ ಕಾರ್ಯಾಚರಣೆ ತಿಂಗಳುಗಟ್ಟಲೆ ಆಗಬಹುದು. ಆದ್ದರಿಂದ ಭಾರತದ ವಾಯುಸೈನ್ಯ ಅಲ್ಲಿ ಧಾಳಿ ಆರಂಭಿಸಿದೆ. ನುಸುಳಿರುವ ಉಗ್ರರು 600-700 ಎನ್ನಲಾಗಿದೆ. ತನ್ನ ಗಡಿಯ ಒಳಗೆ ಭಾರತ ವಿಮಾನ ಧಾಳಿ ಮಾಡಬೇಕಾಗಿ ಬಂದಿದೆ. ಭಾರತದ ಫೈಟರ್ ವಿಮಾನಗಳ ಮೇಲೆ ಪಾಕಿಸ್ತಾನ ಮತ್ತು ಉಗ್ರರು ದಾಳಿ ಮಾಡುತ್ತಿದ್ದು ಭಾರತದ ಒಂದು ಮಿಗ್ ಫೈಟರ್ ಮತ್ತು ಹೆಲಿಕಾಪ್ಟರ್ ನ್ನು ಹೊಡೆದುರುಳಿಸಿದ್ದಾರೆ. ಕನಿಷ್ಠ ಒಬ್ಬ ಪೈಲಟನ್ನು ಪಾಕಿಸ್ತಾನ ಬಂಧಿಸಿದೆ. ಇನ್ನೂ 12 ಸೈನಿಕರು ಕಾಣೆಯಾಗಿದ್ದಾರೆ. ಭಾರತದ ಗಡಿ ಪ್ರದೇಶದ ಠಾಣೆಗಳು ಉಗ್ರರ ದಾಳಿಗೆ ತುತ್ತಾಗಿ ನಾಶವಾಗಿವೆ. ಇನ್ನೊಂದು ಮಿಗ್ ಅಫಘಾತಕ್ಕೀಡಾಗಿದೆ ಒಟ್ಟಾರೆ ಹೆಚ್ಚು ಕಡಿಮೆ ಯುದ್ಧಾನಂತರ ಸ್ಥಿತಿ ಉಂಟಾಗಿದೆ.

300 ಚ.ಕಿಮಿ. ಆಕ್ರಮಿಸಿಕೊಂಡು ಉಗ್ರರು

ಚಳಿಗಾಲ ಮುಗಿಯುತ್ತಿದ್ದಂತೆ ಕಾಶ್ಮೀರದ ಹಲವು ಗಡಿ ಪ್ರದೇಶಗಳಲ್ಲಿ ಉಗ್ರಗಾಮಿಗಳು ಪಾಕಿಸ್ತಾನಿ ಸೈನ್ಯದ ಕುಮ್ಮಕ್ಕಿನಿಂದ ನುಸುಳುವುದು ಮಾಮೂಲಿ ಆಗಿದೆ. ಆದರೆ ಇಷ್ಟುದೊಡ್ಡ ಸಂಖ್ಯೆಯಲ್ಲಿ ಆಗಿರುವುದು ಇಷ್ಟು ಪ್ರದೇಶಗಳನ್ನು ಆಕ್ರಮಿಸಿಕೊಂಡಿರುವುದು ಇದೇ ಮೊದಲು. ಈ ಪ್ರದೇಶವನ್ನು ಆಕ್ರಮಿಸಿಕೊಂಡು, ಇದನ್ನು ಸಿಯಾಚಿನ್ ಮತ್ತು ಇತರೆಡೆ ಭಾರತ ಪಡೆಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದು ಪಾಕಿಸ್ತಾನದ ಉದ್ದೇಶವಿರಬಹುದು. ಅದು ಏನೇ ಇರಲಿ ಈಗ ಭಾರತ-ಪಾಕಿಸ್ತಾನಗಳ ನಡುವೆ ಈಗ ಇರುವ ಪ್ರಸ್ತುತ ಗಡಿಯನ್ನು ಮಿಲಿಟರಿ ಬಲದಿಂದ ಬದಲಾಯಿಸುವ ಪಾಕಿಸ್ತಾನದ ಪ್ರಯತ್ನವನ್ನು ವಿಫಲಗೊಳಿಸಬೇಕು. ಉಗ್ರರನ್ನು ಹಿಮ್ಮೆಟ್ಟಿಸಿ ಆಕ್ರಮಿತ ಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕು. ಅದಕ್ಕೆ ಅಗತ್ಯ ಬಿದ್ದರೆ ವಾಯುಸೇನಾ ದಾಳಿಗಳನ್ನು ನಡೆಸಬೇಕು ಎಂಬ ಬಗ್ಗೆ ಎರಡು ಮಾತಿಲ್ಲ. ದೇಶದ ಸಮಗ್ರತೆ, ಭದ್ರತೆ ಕಾಯ್ದುಕೊಳ್ಳುವುದರಲ್ಲಿ ಯಾವುದೇ ರಾಜಿಗೆ ಅವಕಾಶ ಇಲ್ಲ.



ಕಾರ್ಗಿಲ್ ಪಟ್ಟಣದಲ್ಲಿ ಸಮರಸನ್ನದವಾಗಿರುವ ಭಾರತೀಯ ಸೇನೆ

ಇದು ಅನಿವಾರ್ಯವಾಗಿತ್ತೆ?

ಇಂತಹ ಪರಿಸ್ಥಿತಿ ಅನಿವಾರ್ಯವಾಗಿತ್ತೆ? ಸರ್ಕಾರದ ಪ್ರಕಾರವೇ ಮೂರು ವಾರಗಳಿಂದ ನೂರಾರು ಉಗ್ರರು ನುಸುಳುತ್ತಿದ್ದರು. ಉಗ್ರರು ನುಗ್ಗುವುದು ಇದು ಮೊದಲ ಬಾರಿಯೂ ಅಲ್ಲ. ಈ ಬಗ್ಗೆ ಗೂಢಾಚಾರ ವರದಿಗಳು ವಿಫಲವಾದವೆ? ಅಥವಾ ಈ ವರದಿಗಳ ಆಧಾರದ ಮೇಲೆ ತತ್‌ಕ್ಷಣ ಕಾರ್ಯಾಚರಣೆ ನಡೆಸುವುದರಲ್ಲಿ ಸರ್ಕಾರ ವಿಫಲವಾಯಿತೆ? ಮುನ್ಸೂಚನೆ, ಜಾಗರೂಕತೆ, ಯೋಜನೆಗಳ ಅಭಾವವೇ ಈ ಪರಿಸ್ಥಿತಿಗೆ ಕಾರಣ ಎನ್ನುವುದು ಸ್ಪಷ್ಟ. ಆರಂಭದ ದಿನಗಳಲ್ಲಿ ಉಗ್ರರು ನುಸುಳುತ್ತಿರುವಾಗ ತತ್‌ಕ್ಷಣ ಕ್ರಮ ಕೈಗೊಂಡಿದ್ದರೆ, ವಿಮಾನದಾಳಿ ಮತ್ತು ಯುದ್ಧನಂತರ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ತನ್ನ ರಾಜಕೀಯ ಆಟಗಳಲ್ಲಿ ಮುಳುಗಿದ್ದು, ತನ್ನ ಮೂಲಭೂತ ಕರ್ತವ್ಯವನ್ನು ಮರೆತಿದ್ದಾರೆ ಎನ್ನದೆ ವಿಧಿಯಿಲ್ಲ. ತಾನು ತಾತ್ಕಾಲಿಕ ಸರ್ಕಾರವಾದರೂ, ಸಾಮಾನ್ಯ ಸರಕಾರಗಳ ಎಲ್ಲಾ ಹಕ್ಕು, ಅಧಿಕಾರಗಳು ಇವೆ ಎಂದು ಡಂಗುರ ಹೊಡೆಯುತ್ತಾ ಗವರ್ನರುಗಳ, ಅಧಿಕಾರಿಗಳನ್ನು ವರ್ಗಾಯಿಸುವುದರಲ್ಲಿ ಮಗ್ನವಾದ ಬಿಜೆಪಿ ಸರ್ಕಾರ, ಹಕ್ಕುಗಳ ಜತೆ ಕರ್ತವ್ಯಗಳೂ ಇವೆ ಎಂದು ಮರೆತಿದೆ. ದೇಶದ ಭದ್ರತೆ ಕಾಪಾಡುವ ಪ್ರಾಥಮಿಕ ಕರ್ತವ್ಯದಲ್ಲಿ ಪೂರ್ಣ ವಿಫಲವಾಗಿದೆ.

ಕಾರ್ಗಿಲ್ ವಲಯದ ಗಡಿ ಪ್ರದೇಶದಲ್ಲಿ ಆಕ್ರಮಿತ ಪ್ರದೇಶಗಳನ್ನು ವಾಪಸು ಪಡೆಯಲಾಗುವುದು, ಗಡಿಯನ್ನು ಕಾಯುವುದು ಅಗತ್ಯವೇ. ಆದರೆ ಈ ಘರ್ಷಣೆ ದೊಡ್ಡ ಪ್ರಮಾಣದ ಯುದ್ಧಕ್ಕೆ ಎಡೆ ಮಾಡದಂತೆ ತಡೆಯುವುದು ಅಷ್ಟೇ ಮುಖ್ಯ. ಗಡಿ ಪ್ರದೇಶದ ಭಾರತದ ಬದಿಗೆ ನಮ್ಮ ಮಿಲಿಟರಿ ಕಾರ್ಯಾಚರಣೆ ಸೀಮಿತವಾಗಿರಬೇಕು. ಎರಡೂ ಸರಕಾರಗಳು ಈ ಘರ್ಷಣೆಯ ರಾಜಕೀಯ ಲಾಭವನ್ನು ಪಡೆಯುವುದಕ್ಕೆ ಪ್ರಯತ್ನಿಸುವುದನ್ನು ಆಗಗೊಡಬಾರದು. ಎರಡೂ ದೇಶದ ಸರ್ಕಾರಗಳಲ್ಲಿನ ಉಗ್ರವಾದಿಗಳು ಇದನ್ನೇ ಮಾಡಲು ಪ್ರಯತ್ನಿಸುತ್ತಿದ್ದಾರೆ. ನವಾಜ್ ಶರೀಫ್ ತನ್ನ ಆಂತರಿಕ ರಾಜಕೀಯ ಸಮಸ್ಯೆ ಪರಿಹರಿಸಲು ಈ ಘರ್ಷಣೆ ಬಳಸಬಹುದು. ಅಂದ ದೇಶಾಭಿಮಾನ ಕೆರಳಿಸಿ ರಾಜಕೀಯ ಲಾಭ ಪಡೆಯಲು ಬಿಜೆಪಿಯ ಧೋರಣೆಯಂತೂ ಈಗ ಜಗಜ್ಜಾಹೀರಾಗಿದೆ. ಪೋಖ್ರಾನ್-2 ರಲ್ಲಿ ಇದನ್ನೆ ಇಬ್ಬರೂ ಪ್ರಯತ್ನಿಸಿದ್ದು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಪಾಕಿಸ್ತಾನದ ಶಾಂತಿ, ಲಾಹೋರ ಒಪ್ಪಂದ ಮಾತಾಡುತ್ತಲೇ ಘರ್ಷಣೆಗೆ ಕಾಲು ಕೆರೆಯುತ್ತಿದೆ. ಇದಕ್ಕೆ ಅವಕಾಶ ಮಾಡಿಕೊಡದೆ ಶಾಂತಿ ಕಾಪಾಡುತ್ತಾ, ರಾಜಕೀಯ ದುರ್ಬಳಕೆಗೆ ಎರಡು ಸರ್ಕಾರಗಳ ಪ್ರಯುತ್ನವನ್ನು ಎಲ್ಲಾ ಭಾರತೀಯರು ಅರಿಯಬೇಕು, ವಿಫಲಗೊಳಿಸಬೇಕು.

ಕಾರ್ಗಿಲ್ ಪ್ರದೇಶದಲ್ಲಿ ಸೂಕ್ತಕ್ರಮಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯ

ಭಾರತ ಮತ್ತು ಪಾಕಿಸ್ಥಾನದ ನಡುವೆ ಪರಿಸ್ಥಿತಿ ಉಲ್ಬಣಗೊಳಿಸದ ರೀತಿಯಲ್ಲಿ, ಕಾರ್ಗೀಲ್ ಪ್ರದೇಶದಲ್ಲಿ ಭಾರತದ ಗಡಿಯೊಳಕ್ಕೆ ಪ್ರವೇಶಿಸಿದ ಭಯೋತ್ಪಾದಕರನ್ನು ಹಿಮ್ಮೆಟ್ಟಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿಮಂಡಳಿ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವನ್ನು ಒತ್ತಾಯಿಸುತ್ತದೆ.

ಕೆಲವು ಪತ್ರಿಕೆಗಳಲ್ಲಿ ಬಂದ ವರದಿಯ ಪ್ರಕಾರ ಜನವರಿ 99 ರಿಂದೀಚೆಗೆ ದೇಶದ ಹೊರಗಡೆ ತರಬೇತಿ ಹೊಂದಿದ ಭಯೋತ್ಪಾದಕರು ಕಾರ್ಗಿಲ್ ಪ್ರದೇಶದ "ಲೈನ್ ಆಫ್ ಕಂಟ್ರೋಲ್" ನಿಂದ ಭಾರತಕ್ಕೆ ನುಸುಳಿ ಬರುತ್ತಿದ್ದು, ರಕ್ಷಣಾ ಸಚಿವಾಲಯವು ತಕ್ಷಣದಲ್ಲಿ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಿಲ್ಲ. ಇದರಿಂದಾಗಿಯೇ ಪರಿಸ್ಥಿತಿಯು ಉಲ್ಬಣಗೊಂಡಿದ್ದು ಎರಡು ಯುದ್ಧ ವಿಮಾನ ಹೆಲಿಕ್ಯಾಪ್ಟರ್ ಹಾಗೂ ಮಿಲಿಟರಿ ಅಧಿಕಾರಿಗಳನ್ನು ಕಳೆದುಕೊಂಡಿರುವ ಅಪಾಯಕಾರಿ ಪರಿಸ್ಥಿತಿಗೆ ತಲುಪಿದೆ.

ಕಳೆದ ಹಲವಾರು ತಿಂಗಳುಗಳಿಂದ ರಕ್ಷಣಾ ಸಚಿವರು ಮತ್ತು ಕೇಂದ್ರ ಸರಕಾರವು ತನ್ನ ಉಳಿವಿನ ರಾಜಕೀಯದಲ್ಲೇ ಮುಳುಗಿದ್ದು ದೇಶಧ ಗಡಿ ರಕ್ಷಣೆಯ ಬಗ್ಗೆ ಗಮನ ಹರಿಸಿಲ್ಲ. ಈ ಕುರಿತು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮತ್ತು ರಕ್ಷಣಾ ಸಚಿವಾಲಯವು ಜನತೆಗೆ ಉತ್ತರ ನೀಡಬೇಕಾಗಿದೆ.

ಇದೀಗ "ಯುದ್ಧದಂತಹ ಪರಿಸ್ಥಿತಿ" ನಿರ್ಮಾಣವಾಗಿದೆ ಎಂದು ಹೇಳುವ ಮೂಲಕ ಬಿಜೆಪಿಯು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದೆ. ಬದಲಾಗಿ ದೇಶದ ರಕ್ಷಣೆಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಉಗ್ರಗಾಮಿಗಳನ್ನು ಹೊರಕ್ಕೆ ಹಾಕಿ, ರಾಯಬಾರಿ ಮಾತುಕತೆಗಳನ್ನು ನಡೆಸಿ(Deplomatic Channel) ಪರಿಸ್ಥಿತಿಯನ್ನು ತಿಳಿಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಮೂರನೇ ಬದಲಿ ನಾಶ ಮಾಡ ಹೊರಟಿರುವ ಪವಾರ್ ಕಾಂಗ್ರೆಸ್

ಪವಾರ್ ನಾಯಕತ್ವದ ನ್ಯಾಶನಲ್ ಕಾಂಗ್ರೆಸ್ ರಚನೆ, ಅದು ತನ್ನದೇ ಮೂರನೇ ರಂಗ ರಚನೆಗೆ ಹೊರಟಿರುವುದು; ಎಡಪಕ್ಷಗಳು ರಚಿಸಲು ಪ್ರಯತ್ನಿಸುತ್ತಿರುವ ಮೂರನೇ ಬದಲಿಯನ್ನು ನಾಶ ಮಾಡುವ ಉದ್ದೇಶವುಳ್ಳದ್ದು. ಇದು ಈ ವಾರದ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್‌ರ ಅಭಿಪ್ರಾಯ. ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಲೋಕಶಕ್ತಿಗಳ ಜತೆ ಜಾತ್ಯಾತೀತ ರಂಗವೊಂದನ್ನು ಕಟ್ಟಿಕೊಳ್ಳುತ್ತೇವೆ ಎಂಬ ಪವಾರ್ ಪಕ್ಷದ ಪ್ರಯತ್ನಗಳ ಬಗ್ಗೆ ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ಲೇಖನದಲ್ಲಿ ಅವರು ಪ್ರತಿಕ್ರಿಯಿಸುತ್ತಿರುವುದು ಜಾತ್ಯಾತೀತತೆ ಮತ್ತು ಮೂರನೇ ರಂಗದ ಬಗ್ಗೆ ಮಾತನಾಡುವ ಪವಾರ್ ಮತ್ತು ಗೆಳೆಯರು ಬಿಜೆಪಿ ಬಗ್ಗೆ ವಿರೋಧದ ದೃಢ ನಿಲುವು ತಳೆದಿಲ್ಲ ಎಂದು ಗಮನಿಸಬೇಕು. ಕೋಮುವಾದಿ ಭಾವನೆ ಕೆರಳಿಸುವ ಬಿಜೆಪಿ ಎತ್ತಿರುವ 'ವಿದೇಶಿ ಹುಟ್ಟು' ಚರ್ಚೆಗೆ ಬೆಂಬಲಿಸುತ್ತಾ ಜಾತ್ಯಾತೀತತೆ ಬಗ್ಗೆ ಮಾತನಾಡುವುದಕ್ಕೆ ಅರ್ಥವಿಲ್ಲ. ಅವರು ಏನೇ ಹೇಳಿಕೊಳ್ಳಲಿ ಅವರ ಉದ್ದೇಶ ಏನೇ ಇರಲಿ ಈ ಬಗ್ಗೆ ಚರ್ಚೆಗೆ ಮಾರ್ದನಿ ನೀಡಿರುವುದು ಬಿಜೆಪಿಗೆ ರಾಜಕೀಯವಾಗಿ ಸಹಾಯ ಮಾಡಿದಂತೆ ಬಿಜೆಪಿಯ ಮಿತ್ರಪಕ್ಷಗಳೇ ಈ ಬಗ್ಗೆ ಭಾರಿ ಆಸಕ್ತಿ ತೋರದಿರುವಾಗ ಪವಾರರ ಈ ಆಸಕ್ತಿ, ಜನರನ್ನು ತಪ್ಪು ದಾರಿಗೆಳೆಯುವಂತಹದು. ಪವಾರ್ ಕಂಪನಿಯ ಈ ನಿರ್ಧಾರ ಆಕಸ್ಮಿಕವಲ್ಲ. ಬಹಳ ದಿನಗಳಿಂದ ಕಾಂಗ್ರೆಸ್ ಉಳಿದಿದ್ದರೆ ತಮಗೆ ಅಧಿಕಾರ ದಕ್ಕಲಿಲ್ಲ ಎಂಬ ಭಾವನೆಯಿಂದ ಅವರು ಹೊರಬಂದಿದ್ದಾರೆ. ಚುನಾವಣೆ ನಂತರದ ಅತಂತ್ರ ಸ್ಥಿತಿಯಲ್ಲಿ ಅಧಿಕಾರಕ್ಕೆ ಚೌಕಾಶಿಗೆ ತಮ್ಮದೇ ಪಕ್ಷ ಇದ್ದರೆ ಒಳ್ಳೆದು ಎಂದು ಭಾವಿಸಿರಬಹುದು. ಆದ್ದರಿಂದ ಮೂರನೇ ರಂಗದ ಅವರ ಮಾತು ಎಲ್ಲಾ ಪೊಳ್ಳು ಎಂದು ಸುರ್ಜಿತ್ ಟೀಕಿಸಿದ್ದಾರೆ.

ಪವಾರ್ ಪಕ್ಷ ಮೂರನೇ ರಂಗ ಕಟ್ಟುವುದಿರಲಿ ದೇಶದ ಚುನಾವಣಾ ಫಲಿತಾಂಶಗಳ ಮೇಲೆ ಪ್ರಮುಖ ಪ್ರಭಾವ ಬೀರುವ ಸಂದರ್ಭ ಬಹಳ ಕಡಿಮೆ. ಮಹಾರಾಷ್ಟ್ರದಲ್ಲಿ ಒಂದು ಪ್ರಾದೇಶಿಕ ಪಕ್ಷವಾಗಬಹುದು ಹೆಚ್ಚೆಂದರೆ. ಎಡ ಪಕ್ಷಗಳು ರಚಿಸಬಯಸುವ ಮೂರನೇ ಬದಲಿಗೆ ಅಡ್ಡಗಾಲು ಹಾಕುವ ಪವಾರ ಪಕ್ಷದ ಪ್ರಯತ್ನಗಳ ಬಗ್ಗೆ ಸಿಪಿಐ(ಎಂ) ಲೆಕ್ಕಿಸುವುದಿಲ್ಲ. ಜಾತ್ಯಾತೀತತೆ ಮತ್ತು ಜಾಗತೀಕರಣದ ಆರ್ಥಿಕ ನೀತಿಗೆ ವಿರೋಧದ ಆಧಾರದ ಮೇಲೆ ಮೂರನೇ ರಂಗ ಕಟ್ಟುವ ಗಂಭೀರ ಪ್ರಯತ್ನಗಳನ್ನು ಮುಂದುವರೆಸುತ್ತದೆ. ಎಡಪಕ್ಷಗಳ ಇರುವ ವಿಶಾಲ ರಂಗದ ಬಗ್ಗೆ ಸಾಮ್ರಾಜ್ಯಶಾಹಿ ಮತ್ತು ಭಾರತೀಯ ಆಳುವ ವರ್ಗದ ಧೋರಣೆ ಚಿರಪರಿಚಿತ. ಅದು ಅದಕ್ಕೆ ಅಡ್ಡಗಾಲು ಹಾಕುವ ಎಲ್ಲಾ ಪ್ರಯತ್ನ ಮಾಡುತ್ತದೆ. ಅದನ್ನು ವಿಫಲಗೊಳಿಸಲು ಪಕ್ಷ ಶಕ್ತಿಮೀರಿ ಪ್ರಯತ್ನಿಸುವುದು. 'ವಿದೇಶಿ ಹುಟ್ಟು' ಚರ್ಚೆಯನ್ನು ಹರಿಯಬಿಟ್ಟು ಜನರ ಗಮನ ಬೇರೆಡೆಗೆ ಸೆಳೆಯುವ ಬಿಜೆಪಿ ಮತ್ತು ಪವಾರ್ ಪಕ್ಷದ ಪ್ರಯತ್ನ ವಿಫಲವಾಗುತ್ತದೆ. ಚುನಾವಣೆ ಹತ್ತಿರ ಬಂದಂತೆ ಇದು ಸ್ಪಷ್ಟವಾಗುತ್ತಾ ಹೋಗುತ್ತೆ ಎಂದು ಸುರ್ಜಿತ್ ದೃಢವಾಗಿ ಹೇಳಿದ್ದಾರೆ.

ಪಂಜಾಬಿ ಕಥೆ

ಮೂಲ : ದರ್ಶನ್ ಮಿತವಾ
ಅನುವಾದ : ಡಾ. ವಿಜಯಾ ಸುಬ್ಬರಾಜ್
ಕೃಪೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಡಾ. ತಿಪ್ಪೇಸ್ವಾಮಿ ಸಂಪಾದಿಸಿದ ಸಮಕಾಲೀನ ಪಂಜಾಬಿ ಕಥೆಗಳು ಪುಸ್ತಕದಿಂದ

ಆತ್ಮಶಾಂತಿಗಾಗಿ

ಪ್ರಿಯ ಸ್ನೇಹಿತರೇ, ಈ ಘಟನೆ ನಡೆದದ್ದು ಬೆಳಗ್ಗೆ ಬೆಳಗ್ಗೇನೋ ಆಗಿತ್ತು, ನಿಜ. ಆದರೆ ಟಿಫಿನ್ ಬಾಕ್ಸ್, ಚೀಲ, ಅಟ್ಯಾಚಿ ಮತ್ತು ಫೈಲುಗಳನ್ನು ಹಿಡಿದು ಆಫೀಸಿಗೆ ಹೋಗುವಷ್ಟು ಹೊತ್ತೇನೂ ಆಗಿರಲಿಲ್ಲ. ಜೊತೆಗೆ ಬೆಳಗಿನ ವಾಯು ವಿಹಾರಕ್ಕೆಂದು, ಹರಟೆ ಹೊಡೀತಾ ಅಲೆದಾಡೋಕೆ ಹೋಗಿ, ಮರಳಿ ಮನೆಗೆ ಬರುವ ಹೊತ್ತು ಕೂಡಾ ಆದಾಗಿರಲಿಲ್ಲ. ಈ ಘಟನೆ ನಡೆದದ್ದು ಕೂಡಾ ಕೋಮುಗಲಭೆಯ ಕೆಲವು ಕಾರಣಗಳಿಂದಾಗಿಯೇ. ಅದೂ ನಗರದಲ್ಲಿ ಒಂದು ಬಗೆ ಬಿಗು ವಾತಾವರಣವಿದ್ದ ದಿನಗಳಲ್ಲಿ. ಆಗ ಸಂಕೀರ್ಣವಾದ ಗಲ್ಲಿಯೊಂದರಲ್ಲಿ ಒಬ್ಬ ಯುವಕನ ಶವ ಬಿದ್ದಿತ್ತು. ಹೆಚ್ಚೆಂದರೆ ಇಪ್ಪತ್ತೆಂಟು ಅಥವಾ ಮೂವತ್ತರ ಪ್ರಾಯವಿದ್ದಿರಬಹುದು. ಆತನ ಕೊರಳಲ್ಲಿ ಕಪ್ಪುದಾರದಲ್ಲಿ ಬಿಗಿದಿದ್ದ ತಾಮ್ರದ ತಾಯಿತವೊಂದು ತೂಗಾಡುತ್ತಿತ್ತು. ಆತ ಸತ್ತಿದ್ದರೂ ತಾಯಿತದ ಹೊಳಪು ಮಾತ್ರ ಕುಂದಿರಲಿಲ್ಲ. ಆದರೆ ಸಜ್ಜನರೇ, ಆತನ ಮುಖ ಮಾತ್ರ ಬಿಳುಚಿಕೊಂಡು ನಿಸ್ತೇಜವಾಗಿತ್ತು. ಕಣ್ಣುಗಳು ಹೊರಚಾಚಿದ್ದವು. ಬಾಯಿ ತೆರೆದು ಕೊಂಡಿತ್ತು. ಆ ತೆರೆದು ಕೊಂಡಿದ್ದ ಕಣ್ಣುಗಳಿಂದ ಆತ ಕತ್ತು ತಿರುಗಿಸಿ ನೋಡಲು, ತೆರೆದ ಬಾಯಿಂದ ಗಟ್ಟಿಯಾಗಿ ಮಾತಾಡಲು ಯತ್ನಿಸುತ್ತಿರುವಂತೆ ಭಾಸವಾಗುತ್ತಿತ್ತು. ಆತನ ಸಾವು ಸಂಭವಿಸಿದ್ದಾದರೂ ಹೇಗೆ? ಕೊಲೆಯೇ? ಆತ್ಮಹತ್ಯೆಯೇ?

ಯಾವುದನ್ನೂ ನಿಶ್ಚಿತವಾಗಿ ಹೇಳುವಂತಿರಲಿಲ್ಲ. ನಗರದಲ್ಲೆಲ್ಲ ಆ ಯುವಕನ ಸಾವಿನ ಬಗ್ಗೆಯೇ ವಿಚಿತ್ರವಾದ ಚರ್ಚೆ ಹಬ್ಬಿತ್ತು. ಪ್ರತಿಯೊಬ್ಬರೂ ತಮ್ಮತಮ್ಮ ಮನೆಗಳಲ್ಲಿ ಆ ಯುವಕ ಯಾರು, ಎಲ್ಲಿಂದ ಬಂದ, ಹೀಗೇಕಾಯಿತು- ಎಂಬ ಪ್ರಶ್ನೆಗಳ ಗುಂಗಿನಲ್ಲಿ ಮುಳುಗಿದ್ದರು, ಯಾರಿಗೂ ಏನೊಂದು ವಿವರಗಳೂ ತಿಳಿದಿರಲಿಲ್ಲ.

ಪೋಲೀಸರು ಬಂದಿದ್ದರು. ಯುವಕನ ಶವ ಪೋಲೀಸರ ಮೇಲ್ವಿಚಾರಣೆಯಲ್ಲಿತ್ತು. ರಾತ್ರಿಯವರೆಗೂ ಪೋಲೀಸರು ಆ ಯುವಕನ ಹೆಸರು. ವಿಳಾಸಗಳ ಬಗ್ಗೆ ತನಿಖೆ ನಡೆಸಿದರೂ ಪ್ರಯೋಜನವಾಗಲಿಲ್ಲ. ಆತ ಯಾವ ಜಾತಿಯವನೆಂದೂ ತಿಳಿಯಲಿಲ್ಲ. ಅವನ ಜಾತಿ ತಿಳಿದಿದ್ದರೆ, ಆ ಜಾತಿಯವರನ್ನು ಕರೆಸಿ ಶವವನ್ನು ಅವರ ವಶಕ್ಕೊಪ್ಪಿಸಿ, ಮುಂದಿನ ನಿರ್ಧಾರವನ್ನು ಮಾಡಬಹುದಾಗಿತ್ತು. ಪೋಲೀಸರು ಚಿಂತೆಗೊಳಗಾದರು. ಅಧಿಕಾರಿಗಳು ಆತಂಕಗೊಂಡಿದ್ದರು. ಮುಂದೇನು ಮಾಡಬೇಕೆಂದು ಯಾರಿಗೂ ತಿಳಿಯಲಿಲ್ಲ. ಪೋಲೀಸರು ಕೈಗೊಳ್ಳುವ ಕ್ರಮದಲ್ಲಿ ಆಕಸ್ಮಾತ್ತಾಗಿ ಅಚಾತುರ್ಯವೇನಾದರೂ ನಡೆದರೆ ಸಮಸ್ಯೆ ಗಂಭೀರವಾಗುವ ಸಾಧ್ಯತೆಯಿತ್ತು. ಹೀಗಾಗಿ ಸರಕಾರವೂ ತೊಂದರೆಗೆ ಸಿಲುಕಿತ್ತು. ಕಡೆಗೆ ಒಂದು ನಿರ್ಣಯಕ್ಕೆ ಬಂದರು- ಅಲ್ಲಿದ್ದ ಜನರನ್ನು ಪ್ರತ್ಯೇಕವಾಗಿ ಕರೆಸಿ ವಿಚಾರಣೆ ನಡೆಸುವುದು; ಆಮೇಲೆ ಯಾವುದು ಸರಿತೋರುತ್ತೋ, ಅದರಂತೆ ಮಾಡುವುದು- ಇದರಲ್ಲೂ ಒಂದು ತೊಡಕಿತ್ತು. ಎಲ್ಲ ಜಾತಿಯವರೂ ಈ ಯುವಕನನ್ನು ತಮ್ಮವನೆಂದು ವಾದಿಸಿದರೆ?... ಆದರೂ ಬೇರೆ ಬೇರೆ ಜಾತಿಯವರನ್ನು ಬೇರೆ ಬೇರೆಯಾಗಿಯೇ ಕರೆಸಿದರು.

"ನೋಡು ಹೇಗೆ ಬಿದ್ಕೊಂಡಿದ್ದಾನೆ ಬಹುಶಃ ಹಿಂದೂ ಇರಬಹುದು. ಈ ಹೆಣಕ್ಕೆ ಒಂದು ದಾರಿ ಕಾಣಿಸಬೇಕೂಂತ ಯಾರಿಗಾದರೂ ಅನಿಸೋದು ಬೇಡವೇ?"

"ಗಡ್ಡ ನೋಡಿದರೆ ಸಿಖ್ಖನ ಹಾಗೆ ಕಾಣ್ತಾನೆ."

"ಸಿಖ್ಖ ಹೇಗಾದಾನು? ತಲೆ ಕೂದಲೆಲ್ಲಾ ನೀಟಾಗಿ ಕತ್ತರಿಸಿಟ್ಟಿದ್ದಾನೆ... ಹಿಂದೂನೇ ಇರಬೇಕು"

"ಹಾಗಾದರೆ ಗಡ್ಡಯಾಕೆ ಇಟ್ಕೊಂಡಿದ್ದಾನೆ?"

"ಯಾರಿಗ್ಗೊತ್ತು, ಏನು ಗುಟ್ಟಿದೆಯೋ?... ಅದೇ ಆ ಆಸ್ಪತ್ರೇಲಿ ನಮ್ಮ ಡಾಕ್ಟರಿಲ್ವೆ? ಆತ 'ಹಿಂದೂ', ಹೆಸರು ರಾಮ ಕಿಷನ್. ಆದರೆ ಗಡ್ಡ ಮಾತ್ರ ಬಿಟ್ಟಿದ್ದಾನೆ. ಜೊತೆಗೆ ಪೇಟಾನೂ ಕಟ್ಟಿದ್ದಾನೆ. ಆತನಿಗೆ ತಲೆಗೆ ಸಂಬಂಧಿಸಿದಂತೆ ಏನೋ ಖಾಯಿಲೆ ಇದೆ. ಈಗ ಪೇಟ ಕಟ್ಟಿ ಪೂರ್ತಿ ಸಿಖ್ಖನ ಹಾಗೇ ಕಾಣ್ತಾನೆ."

"ಆತ ನನಗೆ ಗೊತ್ತು. ಗಡ್ಡಾನ ಕತ್ತರಿಸಿಬಿಟ್ಟಿದ್ದಾನೆ. ಎಷ್ಟಾದರೂ ಹಿಂದೂ ಅಲ್ವೆ? ಸಿಖ್ಖನಾಗಿದ್ದರೆ ಗಡ್ಡ ಕತ್ತರಿಸಿ ಅವಮಾನ ಮಾಡ್ತಿರಲಿಲ್ಲ, ಸಿಖ್ಖಜಾತಿಗೆ."

"ಆದರೆ ಈತ ಪೂರ್ತಿ ಗಡ್ಡ ಬಿಟ್ಟಿದ್ದಾನೆ. ಗಡ್ಡಕ್ಕೆ ಒಂದು ಸಲವೂ ಕತ್ತರಿ ಹಾಕಿದ ಹಾಗೆ ಕಾಣೋದೇ ಇಲ್ಲ."

"ಕತ್ತರಿ ಹಾಕಿರೋದಂತೂ ನಿಜ. ಕೂದಲು ಕತ್ತರಿಸಿ, ಕೂದಲಿಗೇ ಅವಮಾನ ಮಾಡಿದ್ದಾನೆ. ನಮ್ಮ ಗುರುಗಳು ಕೂದಲು ಕತ್ತರಿಸುವುದನ್ನು ನಿಷೇಧಿಸಿದ್ದಾರೆ; ನಿಂದಿಸಿದ್ದಾರೆ."

"ಹಾಳಾದವನು, ಗಡ್ಡ ಮತ್ತು ತಲೆಗೂದಲನ್ನು ಹಾಗೇ ಉಳಿಸಿಕೊಂಡಿದ್ದರೆ ಕೊನೇ ಪಕ್ಷ ನಿಷ್ಠಾವಂತ 'ಸಿಖ್ಖ' ಎಂದಾದರೂ ಕರೆಸಿಕೊಳ್ಳಬಹುದಿತ್ತು."

"ಅದೇನೋ ಸರಿ, ಕೂದಲು ಕತ್ತರಿಸಿ ಕೊಳ್ಳೋದರಿಂದ ಹಿಂದೂ ತರಹ ಕಾಣ್ತಾನೆ. ಹೆಸರು ಕೆಟ್ಟರೆ 'ಹಿಂದುಗಳದ್ದು ಕೆಡುತ್ತೆ. ಜನ ಯಾವನೋ ಸಿಕ್ಖ ಸತ್ತು ಬಿದ್ದಿದ್ದಾನೆ ಯಾರೂ ಗಮನಿಸಿಯೇ ಇಲ್ಲ' ಅಂತಲೂ ಮಾತಾಡಿಕೊಳ್ತಾರೆ. ಒಂದು ವೇಳೆ ಸತ್ತವನು ನಿಜವಾಗಿಯೂ ಸಿಖ್ಖನಾಗಿದ್ದರೆ, ಅವನ ಜವಾಬ್ದಾರಿ ನಮ್ಮ ಮೇಲೆ ಬೀಳುತ್ತೆ."

"ಹೌದೌದು. ನೀ ಹೇಳೋ ಮಾತೂ ಸರಿಯಾದ್ದೆ."

ಒಂದು ಜಾತಿಯ ಜನ ಕೂದಲು ಕತ್ತರಿಸಿದ್ದ ಕಾರಣ ಅವನನ್ನು ಅವನ ಜಾತಿಯಿಂದ ಹೊರಗೆ ಹಾಕಿದ್ದರು.

"ನೋಡಿದೆಯಾ, ಮತ್ತಿನ ಗುಳಿಗೆ ತಿಂದು ಹೇಗೆ ನಿರಾತಂಕವಾಗಿ ಮಲಗಿದ್ದಾನೆ."

"ಹೌದಪ್ಪಾ, ಸತ್ತಾಗಲೇ ಮನುಷ್ಯ ಹೀಗೆ ನಿಶ್ಚಿಂತವಾಗಿ ಇರೋದಕ್ಕೆ ಸಾಧ್ಯ. ಅದೆಲ್ಲ ಸಾಕು ಬಾ. ಅವನು ಸತ್ತಿದ್ದಾನೋ ಬದುಕಿದ್ದಾನೋ.. ಸಿಖ್ಖನ ಜೊತೆ ನಮಗೇನು ಕೆಲಸ?"

"ಇಲ್ಲ, ಅವನು ಸಿಖ್ಖನ ಹಾಗೆ ಕಾಣೋದಿಲ್ಲ. ಯಾರೊ ಹಿಂದೂನೇ ಆಗಿರಬೇಕು ಕೂದಲು ಕತ್ತರಿಸಿರೋ ಹಾಗೇನೂ ಕಾಣೋದಿಲ್ಲ"

"ಅಂದ್ಮೇಲೆ, ಇವನು ಹಿಂದೂ ಹೇಗಾಗ್ತಾನೆ? ಮನುಷ್ಯನಿಗೆ ಧರ್ಮ ಕಟ್ಕೊಂಡು ಏನಾಗಬೇಕಿದೆ? ಧರ್ಮಕ್ಕಾಗಿ ಕೋಮುಗಳೇ ಪರಸ್ಪರ ಕಚ್ಚಾಡಿ ಸಾಯುತ್ತವೆ."

"ಇದೇ ಇವತ್ತಿನ ಪೀಳಿಗೆ ದೌರ್ಬಲ್ಯ. ಮನುಷ್ಯನಿಗೆ ಏನೂ ಮಾಡಲು ಆಗದ ಅಸಹಾಯಕತೆ."

"ನನ್ಮಗ ಗಡ್ಡ ಬಿಟ್ಕೊಂಡು ಮುಖ ಕೆಡಿಸ್ಕೊಂಡಿರೋದು ಸಾಲದೂಂತ ಜಾತೀನೂ ಹಾಳು ಮಾಡ್ಕೊಂಡಿದ್ದಾನೆ. ಇಂಥವನನ್ನು ಯಾರು ತಾನೆ ಒಪ್ಕೊಳ್ತಾರೆ."

"ಅಯ್ಯೋ ಬಿಡಯ್ಯ ಇದೆಲ್ಲದರಿಂದ ನಮಗೇನು? ಆದರೆ ಒಂದಂತೂ ಸತ್ಯ ನೂರಕ್ಕೆ ನೂರು ಪಾಲು ಇವನು ಸಿಖ್ಖನೆಂದೇ ನನಗೆ ಕಾಣುತ್ತೆ."

"ಕಾಣೋದೇನು ಬಂತು 'ಸಿಖ್ಖ' ಅನ್ನೋದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ ಸ್ವಲ್ಪ ಗಡ್ಡ ಬಿಟ್ಟಿರುವುದರ ಪ್ರಯೋಜನವಾದರೂ ಏನು? ಯಾವುದೇ ಹಿಂದೂ ಶಾಸ್ತ್ರಗ್ರಂಥದಲ್ಲಿ ಗಡ್ಡ ಬಿಟ್ಟಿರಬೇಕೂಂತ ಹೇಳಿಲ್ಲ. ಗಡ್ಡಾನಾದರೂ ಕತ್ತರಿಸಿದ್ದರೆ, ಅವನನ್ನು ನಾವು ನಮ್ಮ ಹಿಂದುಬಂಧು ಅಂತ ಭಾವಿಸಿ ಕಡೇ ಪಕ್ಷ ಅವನ ಅಂತ್ಯ ಸಂಸ್ಕಾರಾನಾದರೂ ಮಾಡಬಹುದಾಗಿತ್ತು. ಇವನಾಗಿ ಜಾತಿ ಬದಲಾಯಿಸಿ ಕೊಂಡಿದ್ದರೆ, ನಾವು ಯಾರಿಗೇನು ಹೇಳೋದು?"

"ನನಗಂತೂ ಇವನು ಯಾವುದೋ ಹುಡುಗಿ ಪ್ರೀತಿಯಲ್ಲಿ ಬಿದ್ದಿರಬೇಕು- ಅನ್ನಿಸುತ್ತೆ. ಈ ಕಾಲದ ಹುಡುಗರಿಗೆ ಧರ್ಮಗಿರ್ಮ ಅನ್ನೋದು ಬೇಕಿಲ್ಲ. ಅದೇ ಆ ಹಿಂದಿನ ಗಲ್ಲಿಯಲ್ಲಿ ಸೇಠ್ ಇದ್ದನಲ್ಲ.. ಅದೇನು ಹೆಸರು, ರಾಮನಾಥ, ಮುಸಲ್ಮಾನ ಹುಡುಗಿಗೋಸ್ಕರ ತನ್ನ ಜಾತಿ, ಧರ್ಮ ಬಿಡೋಕು ಸಿದ್ಧನಾದ, ಹುಡುಗಿ ಕಡೆಯವರು ಮೊದಲು ಅವನಿಗೆ ಮುಸಲ್ಮಾನನಾಗೋದಕ್ಕೆ ಹೇಳಿದರು. ಅವನೂ ಒಪ್ಪಿಕೊಂಡ. 'ರಾಮನಾಥ' ಹೋಗಿ 'ಮೊಹಮ್ಮದ್' ಆದ.

"ಮನೆ ಹಾಳರು, ಹುಡುಗಿಗೋಸ್ಕರ ಧರ್ಮ ಬಿಡೋದೆ... ಇದೂ ಅಂಥಾದ್ದೇ ಕೇಸಿರಬೇಕು... ಹಾಗೆ ನೋಡಿದರೆ ಒಂದು ರೀತಿಯಿಂದ ಇವನು ಮುಸಲ್ಮಾನನ ಹಾಗೇ ಕಾಣಿಸ್ತಾನೆ. ಸಿಖ್ಖ ಕೂಡಾ ಆಗಿರಲಾರ ಸಿಖ್ಖರಿಗಂತೂ ಪೂರ್ತಿ ಕೂದಲಿರುತ್ತೆ."

"ಅಯ್ಯೋ ನಡಿಯಪ್ಪ ಸಿಖ್ಖನೋ ಮುಸಲ್ಮಾನನೋ ಸದ್ಯ, ಹಿಂದೂ ವಂತೂ ಅಲ್ಲ. ನಮಗೆ ತಲೆನೋವು ತಪ್ಪಿತು.

ಇನ್ನೊಂದು ಜಾತಿಯ ಜನ, ಅವನ ಉದ್ದನೆಯ ಗಡ್ಡ ನೋಡಿ ಬೇಸರ ಪಟ್ಕೊಂಡು ತಮ್ಮ ಜಾತಿಗೇ ಸೇರಿಸಿಕೊಳ್ಳಲಿಲ್ಲ.

"ನನ್ಮಗ ಈ ಕಡೆ ಹಿಂದೂವಿನಂತೆಯೂ ಕಾಣೊಲ್ಲ ಸಿಖ್ಖನಂತೆಯೂ ಕಾಣೊಲ್ಲ. ಕೂದಲುಕತ್ತರಿಸಿ ಕೊಂಡಿದ್ದಾನೆ; ಗಡ್ಡಾನ ಬೆಳಸಿಕೊಂಡಿದ್ದಾನೆ."

"ವೇಷ ನೋಡಿದರಂತೂ ನಮ್ಮ ಜಾತಿಯವನಂತೇ ಕಾಣ್ತಾನೆ."

"ಈಗಿನ ಕಾಲದಲ್ಲಿ ಹಾಕೋ ಬಟ್ಟೆಯಿಂದ ಜಾತಿ ಗೀತಿ ಏನೂ ಗೊತ್ತಾಗೊಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಂತೂ, ಹುಡುಗ ಹುಡುಗಿಯರನ್ನು, ಅವರು ಹಾಕೋ ಬಟ್ಟೆಯಿಂದ ಪತ್ತೆ ಹಚ್ಚೋಕೆ ಆಗೋದಿಲ್ಲ. ಗಡ್ಡ ನೋಡಿದರೆ ನನಗೆ ಅವನು ಸಿಖ್ಖನಂತೆ ಕಾಣ್ತಾನೆ."

"ಹಾಗಾದರೆ, ಇವನು ಯಾರೂಂತ ನಿಜವಾಗಿಯೂ ಕಂಡು ಹಿಡಿಯೋದು ಹೇಗೆ?"

"ಇವನು ಯಾರಾದರೆ ನಮಗೇನು?"

"ನಮಗೇನೂ ಇಲ್ಲ ನಿಜ. ಆಕಸ್ಮಾತ್ತಾಗಿ ಅವನು ಮುಸಲ್ಮಾನ ಅಂತ ಆಮೇಲೆನಾದರೂ ಗೊತ್ತಾದರೆ, ...ತೊಂದರೆಗಿಟ್ಟುಕೊಳ್ಳುತ್ತೆ. ಯಾರಾದರೂ ಆಗಿರಲಿ ಅನ್ನೋದೇನೋ ಸರಿ... ಆದರೆ ಅವನ ವೇಷ ನೋಡಿದರೆ ಮುಸಲ್ಮಾನನಂತೆ ತೋರುತ್ತೆ!"

"ಮುಸಲ್ಮಾನ ಅಂತ ಅನುಮಾನ ಬಂದರೆ, ಒಂದು ರೀತಿಯಿಂದ ಅದನ್ನು ಖಚಿತ ಪಡಿಸಿಕೊಳ್ಳಬಹುದು. ಮುಸಲ್ಮಾನನೇ ಆಗಿದ್ದ ಪಕ್ಷದಲ್ಲಿ ಅವನಿಗೆ ಸುನ್ನತ್ ಆಗಿರಲೇಬೇಕು. ಅದೊಂದು ಬಿಟ್ಟರೆ, ಅವನ ವೇಷ ಭೂಷಣಗಳಿಂದ ಜಾತಿ ತಿಳಿಯೋದು ಕಷ್ಟವಾಗುತ್ತೆ."

"ಹಾಗಾದರೆ ಪರೀಕ್ಷೆ ಮಾಡಿ ನೋಡೋಣವೇನು?"

"ಪರೀಕ್ಷಿಸಿ ನೋಡಬಹುದು ಸರಿ. ಆದರೆ ಇದರಿಂದ ಮುಸಲ್ಮಾನ ಜಾತಿಗೆ ಅವಮಾನ ಮಾಡಿದಂತೆ ಆಗುತ್ತೆ. ಸದ್ಯಕ್ಕೆ, ಎಲ್ಲಿಂದಲಾದರೂ ಯಾವನಾದರೂ ಮುಸಲ್ಮಾನ ಎದ್ದುಗಿದ್ದು ಬಂದಾನು..."

"ಹೋಗಲಿ ಬಿಡು. ಪರೀಕ್ಷೆ ಮಾಡಿ ನೋಡಿ ನಮಗೇನಾಗಬೇಕಾಗಿದೆ? ಇವನನ್ನು ನೋಡಿದ ತಕ್ಷಣ ನಮಗೆ ಇವನು ಮುಸಲ್ಮಾನ ಅಲ್ಲ ಅನ್ನೋದು ಸ್ಪಷ್ಟವಾಗಿ ಗೊತ್ತಾಗುತ್ತೆ... ಇವನು ಒಟ್ಟಿನಲ್ಲಿ ಯಾರಾದರೂ ಆಗಿರಲಿ...ನಮಗೆ ಇವನ ತಂಟೆ ಬೇಡ."

ಮೂರನೆ ಗುಂಪಿನ ಜನ ಬಂದವರು ಆ ಶವದ ಕಡೆ ಕಣ್ಣೆತ್ತಿಯೂ ನೋಡಲಿಲ್ಲ, ಸುಮ್ಮನೆ ಸಾಗಿ ಹೋದರು, ತಮ್ಮ ಜಾತಿಯನ್ನು ಗುರುತಿಸಿ ಕೊಳ್ಳೋದಕ್ಕೆ ಇರೋ ಒಂದೇ ಒಂದು ದಾರಿ ಅಂದರೆ, ಸುನ್ನತ್. ಸತ್ತವನು ನಪುಂಸಕ. ಆದ್ದರಿಂದ ಅವನ ಬಗ್ಗೆ ಏನೂ ಹೇಳಬೇಕಾದ್ದಿಲ್ಲ.

ಒಟ್ಟಿನಲ್ಲಿ ಇದೆಲ್ಲದರಿಂದ ಪೋಲೀಸರಿಗೆ ಒಂದು ರೀತಿ ನೆಮ್ಮದಿ ಸಿಕ್ಕಿತು. ಸ್ವಲ್ಪ ಮಟ್ಟಿಗೆ ಭಯ ಆತಂಕಗಳು ಕಡಿಮೆಯಾಗಿದ್ದವು. ಪೋಲೀಸರು ಕೈಗೊಳ್ಳುವ ಕ್ರಮದಲ್ಲಿ ಈಗೇನಾದರೂ ಅಚಾತುರ್ಯ ನಡೆದರೂ ಗಾಭರಿಗೊಳ್ಳುವ ಪ್ರಮೇಯವಿರಲಿಲ್ಲ. ವಾತಾವರಣ ಹದಗೆಡುವ ಅಪಾಯವೂ ಇರಲಿಲ್ಲ ಯಾವ ಜಾತಿ, ಮತದವರೂ ಆ ಯುವಕನ ಶವವನ್ನು ಸ್ವೀಕರಿಸಲಿಲ್ಲ. ಆದ್ದರಿಂದ ಪೋಲೀಸರು ಅನಾಥ ಶವವೆಂದು ಘೋಷಿಸಿ ನಗರ ಪಾಲಿಕೆಯವರ ವಶಕ್ಕೊಪ್ಪಿಸಿ ಜವಾಬ್ದಾರಿಯಿಂದ ಕೈ ತೊಳೆದು ಕೊಂಡಿದ್ದರು.

ಆದರೆ ಇತ್ತೀಚೆಗೆ ನಗರ ಪಾಲಿಕೆಯವರು ಶವದ ಸಂಬಂಧದಲ್ಲಿ ತೀರಾ ವ್ಯಗ್ರ ಗೊಂಡಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳಿಂದ ಹಿಡಿದು, ಸಣ್ಣ ಪುಟ್ಟ ನೌಕರರವರೆಗೆ ಎಲ್ಲರೂ ಚಿಂತೆ ಗೊಳಗಾಗಿದ್ದಾರೆ. ಅವರನ್ನು ಕಾಡುತ್ತಿದ್ದ ಸಮಸ್ಯೆಯೆಂದರೆ ಮೃತನ 'ಆತ್ಮಶಾಂತಿಗಾಗಿ' ದಿನಾ ಆಫೀಸಿನಲ್ಲಿ ಸಭೆಗಳು ಸೇರುತ್ತವೆ. ಮೃತನ ಆತ್ಮಶಾಂತಿಗಾಗಿ' ಅಖಂಡ ಪಾಠ' ವಾಗಬೇಕೇ?

ಗೀತಾ ಪಾರಾಯಣವಾಗಬೇಕೆ? ಇಲ್ಲವೆ ಮೌಲ್ವಿಯವರಿಂದ 'ಖುರಾನ' ಪಠಣವಾಗಬೇಕೇ?

ಯಾವುದನ್ನೂ ನಿರ್ಧರಿಸಲಾಗದೆ ಹೆಣಗಾಡುತ್ತಿದ್ದಾರೆ.

***

ನೆಕ್ಟರ್ ಬೆವರೇಜಿಸ್ ನ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಮತ ಪ್ರದರ್ಶನ

ನೆಕ್ಟರ್ ಬೆವರೇಜಿಸ್ ಕಂಪನಿಯ ಆಡಳಿತವು, ಖಾಯಂ ಸ್ವರೂಪದ ಕೆಲಸಗಳನ್ನು ಕಂಟ್ರಾಕ್ಟರರ ಮೂಲಕ ಮಾಡುತ್ತಿದ್ದರೆ ಅಂತಹ ಕಾರ್ಮಿಕರನ್ನು ಖಾಯಂ ಗೊಳಿಸಬೇಕೆಂಬ ಕಾನೂನು ಇದ್ದು ಈ ವಿವಾದ ನ್ಯಾಯಲಯ ದಲ್ಲಿರುವಾಗ 25 ಕಾರ್ಮಿಕರನ್ನು 14.7.98 ರಿಂದ ಕೆಲಸ ದಿಂದ ವಜಾ ಮಾಡಿದೆ. ಈ ಕಾರ್ಮಿಕರ ಜಾಗದಲ್ಲಿ 40 ಕಾರ್ಮಿಕರನ್ನು ಸೇರಿಸಿ ಕೊಂಡು ಅವರಿಗೂ ಬೋನಸ್ ಭವಿಷ್ಯನಿಧಿ, ಸೋರಿದಂತೆ ಶಾಸನ ಬದ್ಧವಾಗಿ ಬರಬೇಕಾದ ಸವಲತ್ತುಗಳನ್ನು ನೀಡದೆ ಕಾರ್ಮಿಕರನ್ನು ಕಂಪನಿ ವಂಚಿಸುತ್ತಿದೆ ಎಂದು ಆರೋಪಿಸಿರುವ ಕಾರ್ಮಿಕ ಸಂಘಟನೆಯು ಮೇ. 15 ರಂದು ಧಾರವಾಡದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿತು.

ಇದೇ ದಿನ ಜಿಲ್ಲಾಧಿಕಾರಿಗಳ ಕಛೇರಿ ಎದುರು ಮತ ಪ್ರದರ್ಶನ ಮಾಡಿ. ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿದರು. ಮತ್ತು ಕಾರ್ಖಾನೆ ದ್ವಾರದಲ್ಲಿ ನೂರಾರು ಜನರು ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾಗಿದ್ದಾರೆ. ಈ ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಎಂ.ಬಿ. ಕಟ್ಟಿ ವಿಮಾ ನೌಕರರ ಸಂಘದ ಆರ್. ಹೆಚ್. ಆಯಿ, ಶಿವಯ್ಯ ಚಿಕ್ಕಮಠ, ರಮೇಶ ಬೆನಕಟ್ಟಿ, ಬಸವರಾಜ ಹೆಚ್.ಚಲವಾದಿ, ಹೊರಾಂಜು ಹುಬ್ಬಳ್ಳಿ, ಸಮುದಾಯದ ಬಿ.ಐ. ಇಳೇಗಾರ ಮೊದಲಾದವರು ಭಾಗವಹಿಸಿ ಮಾತನಾಡಿದರು.


ಕುಂದಾಪುರ ಪುರಸಭಾಧ್ಯಕ್ಷರಾಗಿ ಸಿಪಿಐ(ಎಂ)ನ ಗುಣರತ್ನ ಆಯ್ಕೆ



ಮೇ. 18 ರಂದು ನಡೆದ ಕುಂದಾಪುರ ಪುರಸಭೆಯ ಅಧ್ಯಕ್ಷರಾಗಿ ಸಿಪಿಐ(ಎಂ)ನ ಶ್ರೀಮತಿ ಗುಣರತ್ನ ಹಾಗೂ ಉಪಾಧ್ಯಕ್ಷರಾಗಿ ಜನತಾ ದಳದ ತಾರಾಬಾಯಿ ದ್ವಿತೀಯ ಅವಧಿಗೆ ಅವಿರೋಧವಾಗಿ ಆಯ್ಕೆಗೊಂಡರು. ಇದಕ್ಕೆ ಮೊದಲು ಹಂಚು ಕಾರ್ಮಿಕರ ಮುಖಂಡ ಸಿಪಿಐ(ಎಂ)ನ ವಿ. ನರಸಿಂಹ ಅಧ್ಯಕ್ಷರಾಗಿ ಜನಮೆಚ್ಚುವ ಆಡಳಿತ ನೀಡಿದ್ದರು. 23 ಸದಸ್ಯರುಳ್ಳ ಪುರಸಭೆಯಲ್ಲಿ ಸಿಪಿಐ(ಎಂ) 9 ಹಾಗೂ ಜನತಾದಳ 6 ಸದಸ್ಯರುಗಳನ್ನು ಹೊಂದಿದೆ.

ಮಾಸದ ನೆನಪುಗಳು


(ಒಂದು ರಾಜಕೀಯ ಆತ್ಮಕಥನ)



ಜ್ಯೋತಿ ಬಸು ದುಡಿಯುವ ಜನರ ಅಪ್ರತಿಮ ನಾಯಕ. ಶ್ರಮಿಕ ಜನರ ಪರವಾದ ಎಡರಂಗ ಸರ್ಕಾರದ ಸಾರಥ್ಯವನ್ನು ಎರಡು ದಶಕಗಳಿಗೂ ಹೆಚ್ಚು ಕಾಲ ವಹಿಸಿದ್ದು ಅವರ ಹೆಗ್ಗಳಿಕೆ. ಬೂರ್ಜ್ವ ಪತ್ರಿಕೆಗಳು, ಪಕ್ಷಗಳೂ ಕಡೆಗಣಿಸಲಾಗದ ಪ್ರಬಲ ವ್ಯಕ್ತಿತ್ವ. ಅವರ ಜೀವನದ ಬಗ್ಗೆ ಸ್ವಾಭಾವಿಕವಾಗಿಯೇ ಕುತೂಹಲ ಇರುತ್ತವೆ. ಇತರರು ಬರೆದ ಅವರ ಜೀವನ ಕಥೆ ಬಹಳ ಇವೆ. ಆದರೆ ಮೊದಲ ಬಾರಿಗೆ ಅವರು ಆತ್ಮಕಥೆ ಬರೆಯಲಾರಂಭಿಸಿದ್ದಾರೆ. ಮಾಸದ ನೆನಪುಗಳು (ಒಂದು ರಾಜಕೀಯ ಆತ್ಮಕಥೆ) ಎಂಬ ಶೀರ್ಷಿಕೆಯಲ್ಲಿ ಗಣಶಕ್ತಿ ಆನ್‌ಲೈನ್ ಎಂಬ ಇಂಟರ್‌ನೆಟ್ ವಾರಪತ್ರಿಕೆಯಲ್ಲಿ ಅದು ಧಾರವಾಹಿಯಾಗಿ ಪ್ರಕಟಿಸುತ್ತಿದೆ. ಅದನ್ನು ಕನ್ನಡಕ್ಕೆ ಅನುವಾದ ಮಾಡಿ ಐಕ್ಯರಂಗ ಓದುಗರಿಗೆ ಧಾರಾವಾಹಿಯಾಗಿ ಕೊಡಲಾಗುವುದು. ಪ್ರತಿವಾರ ಪ್ರಕಟವಾಗುವ ಈ ಅಪ್ರತಿಮ ನಾಯಕನ ಜೀವನದಿಂದ ಎಲ್ಲರೂ ಸ್ಫೂರ್ತಿ ಪಡೆಯುವಂತಾಗಲಿ.

ನನ್ನ ಬಾಲ್ಯ

"ಕಾಲ ಚಕ್ರ ತಿರುಗುತ್ತಿದೆ. ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸುತ್ತಾ ಆಗಲೇ ೬೦ ವರ್ಷ ಕಳೆದಿದೆ. ನಾನು ರಾಜಕೀಯದ ಹೊಸ್ತಿಲು ಮೆಟ್ಟಿದಾಗ ದೇಶದ ಸ್ವಾತಂತ್ರ್ಯ ಹೋರಾಟ ಒಂದು ಮಹತ್ವದ ತಿರುವಿಗೆ ಬಂದಿತ್ತು, ಆಗ ನಮ್ಮ ಗುರಿ ಸ್ವಾತಂತ್ರ್ಯ ಸಾಧಿಸುವುದು ಮಾತ್ರವಲ್ಲ, ಆಮೇಲೆ ಅದನ್ನು ನಿಭಾಯಿಸುವುದು ಹೇಗೆ ಎಂದು ಕೂಡಾ ಆಗಿತ್ತು, ಹೊಸ ನಾಡು ಕಟ್ಟುವುದು ಮುಖ್ಯವಾಗಿತ್ತು, ಬಡವರ ಬಿಡುಗಡೆಯಂತೂ ಅತ್ಯಂತ ಉದ್ದೇಶವಾಗಿತ್ತು. ಜಾಗತಿಕ ಕಾರ್ಮಿಕರ ಬಿಡುಗಡೆಯ ಹೋರಾಟದಲ್ಲಿ ನಾವು ಪಾಲುದಾರರು ಎಂದುಕೊಂಡಿದ್ದೆವು. ಈಗ ಮೆಲುಕು ಹಾಕಿದಾಗ ಈ ವರ್ಷಗಳಲ್ಲಿ ಭಾರಿ ಬದಲಾವಣೆಗಳಾಗಿವೆ- ನಕಾರಾತ್ಮಕವಾದದ್ದು, ಸಕಾರಾತ್ಮಕವಾದದ್ದು, ಆದರೆ ಮೂಲ ಸಮಸ್ಯೆ ಹಾಗೇ ಉಳಿದಿದೆ. ಕಾರ್ಮಿಕರ ರಾಜ್ಯಭಾರ ಇಂದೂ ದೂರದ ಮಾತಾಗಿ ಉಳಿದಿದೆ. ಯೋಚನೆಗಳು ಜೊತೆಗೆ ನೆನಪುಗಳು- ಮರುಕಳಿಸುತ್ತಿವೆ. ಕಾಲದ ದಾಳಿಗೆ ಜಗ್ಗದೆ ಉಳಿದ ನೆನಪುಗಳನ್ನಷ್ಟೇ ಬರೆಯಹೊರಟಿದ್ದೇನೆ. ಮಾಸದ ನೆನಪುಗಳನ್ನಷ್ಟೇ ಬರೆಯುತ್ತೇನೆ. ನನಗೆ ಹತ್ತಿರವಿದ್ದ ಎಲ್ಲರ ಬಗ್ಗೆ ಪ್ರಸ್ತಾಪ ಮಾಡುವುದು, ಬರೆಯುವುದು ಅಸಾಧ್ಯವಾದ ಮಾತು. ಈ ದೇಶದ ಜನರ ಜತೆ ನಾನು ಇದ್ದೆ, ಈ ನಾಡಿನ ಚರಿತ್ರೆಯ ತಿರುವು ಮುರುವುಗಳಿಗೆ ಸಾಕ್ಷಿಯಾಗಿದ್ದೇನೆ. ಜನ-ಶ್ರೀಸಾಮಾನ್ಯ- ನನ್ನ ಸ್ಫೂರ್ತಿಯಾಗಿದ್ದರು. ಕಳೆದ ದಿನಗಳ ಬಗ್ಗೆ ಬರೆಯುವುದು ಕಷ್ಟ. ಕಾಲಕ್ರಮಕ್ಕನುಗುಣವಾಗಿ ಚಿತ್ರಿಸುವುದು ಕಷ್ಟವಾಗುತ್ತಿದೆ. ನನ್ನ ಬಗ್ಗೆ ಹೇಳುವುದರ ಬಗೆಗಿನ ಬಲವಂತ ಇದ್ದೇ ಇದೆ. ನನ್ನ ಬಗ್ಗೆ ಹೇಳಲು ನನಗೆ ಯಾವಾಗಲೂ ಮುಜುಗರ"



ನಾನು ಹುಟ್ಟಿದ್ದು ಜುಲೈ 8, 1941 ರಂದು ಕಲ್ಕತ್ತಾದ ಹ್ಯಾರಿಸನ್ ರಸ್ತೆಯ ಮನೆ ಯೊಂದರಲ್ಲಿ. ಈಗ ಅದಕ್ಕೆ ಮಹಾತ್ಮಾಗಾಂಧಿ ರಸ್ತೆ ಅನ್ನುತ್ತಾರೆ. ನನ್ನ ತಂದೆ- ಮತ್ತು ಅವರ ಪೂರ್ವಜರ ಊರು ಧುಬ್ಲಿ ಅಂತ. ಅಸ್ಸಾಮಿನಲ್ಲಿದೆ. ನನ್ನ ಅಜ್ಜ ಕೆಲಸ ಮಾಡುತ್ತಿದ್ದಂತೆ. ಅಸ್ಸಾಮ್ ಜತೆ ನಮ್ಮ ನಂಟಿಗೆ ಕಾರಣ ಅದು ನನ್ನ ಇಬ್ಬರು ದೊಡ್ಡಪ್ಪನವರು ವಕೀಲರಾಗಿದ್ದರು. ನಮ್ಮ ಕುಟುಂಬದಲ್ಲಿ ರಾಜಕೀಯದ ಸದ್ದೇ ಇರಲಿಲ್ಲ. ನನ್ನ ತಂದೆ ತಾಯಿಗಳಿಬ್ಬರ ಹುಟ್ಟೂರು ಈಗಿನ ಬಾಂಗ್ಲಾದೇಶದಲ್ಲಿದೆ. ಡಾಕ್ಕಾ ಜಿಲ್ಲೆಯ ಬರಡಿ ಎಂಬ ಹಳ್ಳಿ. ನನ್ನ ತಾಯಿಯದು ಶ್ರೀಮಂತ ಜಮೀನುದಾರರ ಮನೆತನ. ಉಚ್ಚಮಧ್ಯಮ ವರ್ಗ ಎನ್ನಬಹುದು. ನಮ್ಮ ತಾಯಿ ಆಕೆಯ ತಂದೆ ತಾಯಿಗಳಿಗೆ ಒಬ್ಬಳೇ ಮಗಳು. ನನ್ನ ತಂದೆ-ನಿಶಿಕಾಂತ್ ಬಸು- ಮಾತ್ರ ಕೆಳ ಮಧ್ಯಮ ವರ್ಗದ ಹಿನ್ನೆಲೆಯಿಂದ ಬಂದವರು. ಅವರು ದಿಬ್ರುಗಢ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಓದಿದ್ದರು. ಢಾಕ್ಕಾದಲ್ಲಿ ವೈದ್ಯವೃತ್ತಿ ಕೆಲವು ವರ್ಷಗಳ ಕಾಲ ನಡೆಸಿ, ಉನ್ನತ ವ್ಯಾಸಂಗಕ್ಕೆ ಅಮೇರಿಕಕ್ಕೆ ಹೋಗಿದ್ದರು, ಅಲ್ಲಿ ವರ್ಷಗಳ ಕಾಲ ಇದ್ದರು. ಅಲ್ಲಿ ಉನ್ನತ ಡಿಗ್ರಿ ಪಡೆದು ಕೆಲ ಕಾಲ ವೃತ್ತಿ ನಡೆಸಿ ಆ ಮೇಲೆ ಹಿಂದಿರುಗಿದ್ದರು. ಅವರು ಅಲ್ಲಿದ್ದಾಗ ತನ್ನ ತಮ್ಮನನ್ನು ಚಿಕ್ಕಪ್ಪ-ನನ್ನು ಅಲ್ಲಿಗೆ ಕರೆಸಿಕೊಂಡು ಓದಿಸಿದ್ದರು. ನನ್ನ ಚಿಕ್ಕಪ್ಪ ಇಂಜಿನಿಯರ್ ಆಗಿ 13 ವರ್ಷಗಳ ನಂತರ ಹಿಂತಿರುಗಿದರು.

ನಾನು ಈಗಾಗಲೇ ಹೇಳಿದ ಹಾಗೆ ನಮ್ಮ ಮನೆಯಲ್ಲಿ ರಾಜಕೀಯದ ಬಿಸಿ ಇನ್ನೂ ತಟ್ಟಿರಲಿಲ್ಲ. ಆ ಕಾಲದ ಕ್ರಾಂತಿಕಾರಿಗಳ ಬಗ್ಗೆ ಅನುಕಂಪ ಗೌರವ ವಂತೂ ಇದ್ದೇ ಇತ್ತು. ಆದರೆ ಅದೂ ಕಣ್ಣಿಗೆ ಹೊಡೆಯುವಂತಿರಲಿಲ್ಲ. ನನ್ನ ತಾಯಿ ಮಧನ ಮೋಹನ ಭೌಮಿಕ್ ಎಂಬ ಕ್ರಾಂತಿಕಾರಿ ಬಗ್ಗೆ ಹೇಳುತ್ತಿದ್ದರು. ನಮ್ಮ ಬಾರಡಿಯ ಮನೆಯಲ್ಲಿ ಆತ ಹಲವು ಕಾಲ ಅಡಗಿಕೊಂಡಿದ್ದರಂತೆ. ಅವರು ಢಾಕ್ಕಾ ಜಿಲ್ಲೆಯ ಧಮ್‌ನಿಯಲ್ಲಿ ವಾಸಿಸುತ್ತಿದ್ದರು. 1905 ರಲ್ಲಿ ಅವರು ಅನುಶೀಲನ ಸಮಿತಿಗೆ ಸೇರಿದ್ದರು ಢಾಕ್ಕಾ ಮೆಡಿಕಲ್ ಸ್ಕೂಲಲ್ಲಿ ಕೊನೆಯ ವರ್ಷದಲ್ಲಿ ಓದುತ್ತಿದ್ದಾಗ- 1913 ರಲ್ಲಿ ಮೊದಲ ಬಾರಿಗೆ ಅವರನ್ನು ಬಂಧಿಸಲಾಗಿತ್ತು. ಆದರೆ ಆ ಮೇಲೆ ಪುರಾವೆ ಇಲ್ಲದ್ದರಿಂದ ಪೋಲೀಸರು ಕೇಸ್ ಹಿಂದಕ್ಕೆ ತೆಗೆದುಕೊಂಡಿದ್ದರು. ಆ ಮೇಲೆ ಅವರು ಭೂಗತರಾಗಿದ್ದು. 1914 ರಲ್ಲಿ ಪುನಃ ಅವರನ್ನು ಬಂಧಿಸಲಾಯಿತು. ಆಗ ಆತ ಕಾಯಿಲೆಯಿಂದ ನರಳುತ್ತಿದ್ದರು. ಅವರಿಗೆ ಎರಡನೇ ಬಾರಿ ಶಾಲ್ ಪತೂರಿ ಕೇಸ್‌ನಲ್ಲಿ 10 ವರ್ಷದ ಕಠಿಣ ಶಿಕ್ಷೆ ಕೊಡಲಾಗಿತ್ತು. ಅಂಡಮಾನ್ ಜೈಲಿನಲ್ಲಿದ್ದಾಗ ಅವರಿಗೆ ನಿರ್ದಯವಾಗಿ ಚಿತ್ರಹಿಂಸೆ ಮಾಡಲಾಗಿತ್ತು. ಜೈಲಿನಿಂದ ಬಿಡುಗಡೆಯಾದ ನಂತರವೂ ಆತ ಕ್ರಾಂತಿಕಾರಿಗಳ ಜತೆ ಸಂಪರ್ಕ ಇರಿಸಿಕೊಂಡಿದ್ದರು-1955 ರಲ್ಲಿ ಸಾಯುವವರೆಗೂ.

1913-14 ರಲ್ಲಿ ಭೂಗತರಾಗಿದ್ದಾಗ ಭೌಮಿಕ್ ನಮ್ಮ ಬಾರಡಿ ಮನೆಗೆ ಆಗಾಗ ಬರುತ್ತಿದ್ದರಂತೆ. ಅವರ ಕೈಯಲ್ಲಿ ಯಾವಾಗಲೂ ಶಸ್ತ್ರಗಳು ಇರುತ್ತಿತ್ತಂತೆ ಅವರು ತಮ್ಮ ಶಸ್ತ್ರಗಳನ್ನು ನಮ್ಮ ಮನೆಯಲ್ಲಿ ಗುಟ್ಟಾಗಿ ಇಡುತ್ತಿದ್ದರು ಒಂದು ಬಾರಿ ನಮ್ಮ ಮನೆಯ ಮೇಲೆ ಪೋಲೀಸ್ ರೈಡ್ ಆಯಿತಂತೆ. ಆಗ ನಮ್ಮ ತಾಯಿ ತನ್ನ ಸೀರೆಯೊಳಗೆ ಶಸ್ತ್ರಗಳನ್ನು ಬಚ್ಚಿಟ್ಟಿದ್ದರಂತೆ. ಆಕೆ ಭೌಮಿಕ್‌ಗೂ ತಾಯಿಯಂತಿದ್ದಳು. ಭೌಮಿಕ್ ಆಕೆಯನ್ನು 'ಅಮ್ಮಾ' ಎಂದೇ ಕರೆಯುತ್ತಿದ್ದರಂತೆ.

ನನ್ನ ದೊಡ್ಡಪ್ಪ- ನಳಿನಿ ಕಾಂತ ಬಸು ಮುನ್ಸೀಫ್ ಆಗಿ ವೃತ್ತಿ ಆರಂಭಿಸಿ ಹೈಕೋರ್ಟ್ ಜಡ್ಜ್‌ವರೆಗೆ ಬೆಳೆದಿದ್ದರು. ಆತ ಕೋರ್ಟ್‌ನಲ್ಲಿ ಬಹಳ ಪ್ರಸಿದ್ಧರಾಗಿದ್ದರಂತೆ ನನ್ನ ಇನ್ನೊಬ್ಬ ಚಿಕ್ಕಪ್ಪ ರೈಲ್ವೆನಲ್ಲಿದ್ದರು.

ನನ್ನ ತಂದೆ ಅಷ್ಟೊತ್ತಿಗೆ ಕಲ್ಕತ್ತಾದಲ್ಲಿ ವೈದ್ಯವೃತ್ತಿ ಆರಂಭಿಸಿದ್ದರು. ಕಾಲಕ್ರಮೇಣ ಅವರ ವೃತ್ತಿ ಬೆಳೆದು, ಅವರು ಪ್ರಸಿದ್ಧ ಡಾಕ್ಟರಾಗಿದ್ದರು. ನಾವು ಹಿಂದೂಸ್ತಾನ್ ಬಿಲ್ಡಿಂಗ್ಸ್‌ನ ಎದುರಿನ ಮನೆಯೊಂದರಲ್ಲಿ ಆಗ ಇದ್ದವು. ಈಗ ಕೇಂದ್ರೀಯ ಕಲ್ಕತ್ತಾದ ಇಲೈಟ್ ಸಿನಿಮಾ ಇದೆ ಅಲ್ಲಿ. ಅದೊಂದು ಬಾಡಿಗೆ ಮನೆಯಾಗಿತ್ತು. ನಮ್ಮ ಮನೆಯ ಮಾಲಿಕ ಡಾಕ್ಟರ್ ನಳಿನಿರಂಜನ್ ಸರ್ಕಾರ್. ಆತ ಹಿಂದೂಸ್ತಾನ್ ಇನ್ಶೂರೆನ್ಸ್‌ನ ಮಾಲಿಕನೂ ಆಗಿದ್ದ. ನನ್ನ ತಂದೆಯ ಕ್ಲಿನಿಕ್ ಈಗ ಲಿಮಿನಿಯ ರೆಸ್ಟೋರೆಂಟ್ ಇರುವ ಜಾಗದಲ್ಲಿತ್ತು. ನಾವು ಹಿಂದೂಸ್ತಾನ್ ಬಿಲ್ಡಿಂಗ್‌ನ ಪ್ರದೇಶದಲ್ಲಿ ಬಹಳವರ್ಷಗಳ ಕಾಲ ಇದ್ದೆವು.

ನನಗೆ ಆರು ವರ್ಷವಾದಾಗ ನನ್ನನ್ನು ಲೊರೆಟೊ ಸ್ಕೂಲ್‌ಗೆ ಸೇರಿಸಿದರು. ನನ್ನ ಅಕ್ಕ ಆಗಲೇ ಆ-ಸ್ಕೂಲಲ್ಲಿ ಓದುತ್ತಿದ್ದಳು. ನನ್ನ ಅಕ್ಕ ನನಗಿಂತ ಎಂಟು ವರ್ಷ ದೊಡ್ಡವಳು. ನನ್ನ ಸೋದರಿಕೆ ಸಂಬಂಧದ ಇನ್ನೊಬ್ಬ ಅಕ್ಕ ಸಹ ಇದ್ದಳು. ನನ್ನ ತಂದೆ ನನಗೆ ಮಾತ್ರವಲ್ಲ, ಇಡೀ ಜಂಟಿ ಕುಟುಂಬಕ್ಕೆ ತಂದೆಯಂತಿದ್ದರು. ನನ್ನ ಒಬ್ಬ ಚಿಕ್ಕಪ್ಪ ಅಮೆರಿಕದಲ್ಲಿದ್ದರು. ನನ್ನ ಒಬ್ಬ ದೊಡ್ಡಪ್ಪನ ಕುಟುಂಬ ನಮ್ಮ ಜತೆಗೆ ಇದ್ದರು. ವಕೀಲರಾಗಿದ್ದ ಈ ದೊಡ್ಡಪ್ಪ ನನ್ನ ತಂದೆ ಅಮೇರಿಕದಲ್ಲಿದ್ದಾಗ ತೀರಿಕೊಂಡಿದ್ದರು. ಆದ್ದರಿಂದ ಅವರ ಕುಟುಂಬದ ಜವಾಬ್ದಾರಿ ನನ್ನ ತಂದೆ ತೆಗೆದುಕೊಂಡಿದ್ದರು.

ಲೊರೆಟೊ ಕಿಂಡರ್ ಗಾರ್ಡನ್‌ನಲ್ಲಿ ನಾಲ್ಕು ವರ್ಷ ಇರಬೇಕಾಗಿತ್ತು. ನನಗೊಂದು ಡಬ್ಬಲ್ ಪ್ರಮೋಶನ್ ಸಿಕ್ಕಿದ್ದರಿಂದ ಮೂರು ವರ್ಷಕ್ಕೆ ಇಳಿದಿತ್ತು. ಆ ಸ್ಕೂಲಿನ ನಿಯಮಗಳ ಪ್ರಕಾರ ಮೊದಲನೆಯ ತರಗತಿ ನಂತರ ಹುಡುಗರು ಆ ಸ್ಕೂಲಿನಲ್ಲಿ ಇರುವಂತಿರಲಿಲ್ಲ. ಮೊದಲನೆಯ ತರಗತಿಯಿಂದ ಅದು ಹುಡುಗಿಯರಿಗೆ ಮೀಸಲಾದ ಸ್ಕೂಲಾಗಿತ್ತು. ನನ್ನ ತಂದೆ ನನ್ನನ್ನು ಸೈಂಟ್ ಕ್ಸೇವಿಯರ್ಸ್ ಸ್ಕೂಲಿಗೆ ಸೇರಿಸ ಬೇಕೆಂದಿದ್ದರು. ಆದರೆ ಆ ವರ್ಷದ ಭರ್ತಿ ಆಗಲೇ ಆಗಿ ಹೋಗಿತ್ತು. ಮುಂದಿನ ವರ್ಷಕ್ಕೆ ನನ್ನನ್ನು ವೈಟಿಂಗ್ ಲಿಸ್ಟ್‌ನಲ್ಲಿ ಇಟ್ಟರು. ಬೇರೆಲ್ಲೂ ನನಗೆ ಆವರ್ಷ ಭರ್ತಿ ಮಾಡಿಕೊಳ್ಳುವ ಸಾಧ್ಯತೆ ಇರಲಿಲ್ಲ. ನನ್ನ ತಂದೆ ನಾನು ಓದುತ್ತಿದ್ದ ಲೊರೆಟೊ ಹೆಡ್‌ಮಿಸ್ಸ್‌ಗೆ ವಿನಂತಿ ಮಾಡಿ ಕೊಂಡರು. ಒಂದು ವರ್ಷ ಇಲ್ಲೇ ಸೇರಲಿ ಅಂತ ಇಲ್ಲದಿದ್ದರೆ ಒಂದು ವರ್ಷದ ವಿದ್ಯಾಭ್ಯಾಸ ಹಾಳಾಗುತ್ತಲ್ಲ ಅಂತ. ನನ್ನ ಅವಸ್ಥೆ ನೋಡಿ ಅನುಕಂಪದಿಂದ ಅವರು ನನ್ನನ್ನು ಲೊರಿಟೊದಲ್ಲೇ ಮೊದಲ ತರಗತಿಯಲ್ಲಿ ಭರ್ತಿ ಮಾಡಿಕೊಂಡರು. ನಾನು ಆ ಕ್ಲಾಸಿನಲ್ಲಿ ಇರುವ ಏಕಮಾತ್ರ ಹುಡುಗನಾಗಿದ್ದೆ. ಬೇರೆಯವರೆಲ್ಲ ಹುಡುಗಿಯರು! ಹೀಗೆ ನಾನು ಲೊರೆಟೊ ದಲ್ಲಿ ಮುಂದುವರಿದೆ.



ಮುಂದಿನ ವರ್ಷ ನಾನು ಸೈಂಟ್ ಕ್ಸೇವಿಯರ್ಸ್‌ನ ಎರಡನೇ ತರಗತಿಗೆ ಸೇರಿದೆ. ಆಗ ನಮ್ಮ ಮನೆಯ ಮಾಲಿಕ ಡಾ॥ ನಳಿನಿರಂಜನ್ ಸರ್ಕಾರ್ ನನ್ನ ತಂದೆಗೆ ನನ್ನ ಜಮೀನೊಂದು ಖಾಲಿ ಇದೆ. ಕೊಂಡುಕೊಳ್ಳುತ್ತೀರಾ ಎಂದು ಕೇಳಿದರು. ಹಿಂದೂಸ್ತಾನ್ ಪಾರ್ಕ್ ಎಂಬಲ್ಲಿ ಅವರ ಹಿಂದೂಸ್ತಾನ ಇನ್ಶೂರೆನ್ಸ್ ಕಂಪನಿಯ ಜಮೀನೊಂದು ಖಾಲಿ ಇತ್ತು. ಆ ಜಮೀನು ಎರಡು ಎಕರೆಯಷ್ಟಿತ್ತು. ಒಂದು ಎಕರೆ ನಮ್ಮ ತಂದೆ ತೆಗೆದುಕೊಂಡರು. ಇನ್ನೊಂದು ಎಕ್ರೆ ನಮ್ಮ ದೊಡ್ಡಪ್ಪ ಖರೀದಿಸಿದರು. ಆಗ ಆ ಪ್ರದೇಶದಲ್ಲಿ ಭಾರೀ ಮರಗಳಿದ್ದು ದೊಡ್ಡ ಕಾಡಿನಂತೆ ಕಾಣುತ್ತಿತ್ತು. ರಸ್ತೆಗಳಿರಲಿಲ್ಲ. ಕಾರಿನಿಂದ ಬಂದರೆ ದೂರದಲ್ಲಿ ಇಳಿದು ನಡೆಯಬೇಕಾಗಿತ್ತು. ಭತ್ತದ ಗದ್ದೆಗಳು,, ಈಚಲ ಮರಗಳು, ಕೆರೆ ಕುಂಟೆಗಳು ಇದ್ದವು. ನನಗೆ ನೆನಪಿದ್ದ ಹಾಗೆ 1924 ರಲ್ಲಿ ನಾವು ಮನೆ ಕಟ್ಟಿದೆವು. ಇನ್ನೇನು ಒಂದು ವರ್ಷದಲ್ಲಿ ಅಲ್ಲಿ ರಸ್ತೆಗಳು ಆಗುತ್ತವೆ ಎಂದಾಗ ಅಲ್ಲಿಗೆ ನಾವು ಮನೆ ಬದಲಾಯಿಸಿದೆವು. ಟ್ರಾಫಲ್ ಹಳಿಗಳು ಆಗ ಇನ್ನೂ ಮಾಡಲು ಆರಂಭಿಸಿದ್ದರು. ಸುತ್ತಮುತ್ತಲ ಪ್ರದೇಶ ಬದಲಾಗಲು ಆರಂಭಿಸಿತ್ತು. ನನಗಾಗ 10 ವರ್ಷ. ಕ್ರಾಂತಿಕಾರಿಗಳ ಬಗ್ಗೆ, ಸ್ವಾತಂತ್ರ್ಯ ಹೋರಾಟದ ಬಗ್ಗೆ ನನ್ನ ಕಿವಿ ಮೇಲೆ ಬೀಳಲಾರಂಭಿಸಿತ್ತು. ನನ್ನ ತಂದೆ ಗುಂಡಿನೇಟಿನಿಂದ ಗಾಯಗೊಂಡ ಕ್ರಾಂತಿಕಾರಿ ಯೊಬ್ಬನ ಆರೈಕೆ ಮಾಡುತ್ತಿದ್ದರು. ಇವೆಲ್ಲಾ ನನ್ನ ಬಾಲ್ಯದ ಥ್ರಿಲ್‌ಗಳಾಗಿದ್ದವು!

ನಾನು ಸೈಂಟ್ ಕ್ಸೇವಿಯರ್ಸ್ ನಿಂದಲೇ ಸೀನಿಯರ್ ಕೇಂಬ್ರಿಜ್ (ಒಂಬತ್ತನೆ ಕ್ಲಾಸ್) ಪಾಸಾದೆ. ಇಂಟರ್‌ಮಿಡಿಯೇಟ್ ಸಹ ಅಲ್ಲೇ ಮುಗಿಸಿದೆ. ಕಾಲ ವೇಗವಾಗಿ ಉರುಳುತ್ತಿತ್ತು. ಆ ಮೇಲೆ ಪ್ರೆಸಿಡೆನ್ಸಿ ಕಾಲೇಜಿನಿಂದ ಇಂಗ್ಲೀಷ್ (ಆನರ್ಸ್) ಮುಗಿಸಿದೆ. ನಾನು ಬಂಗಾಲಿ ಕಲಿತದ್ದು ಇಂಟರ್ ಮೀಡಿಯೇಟ್ ಮತ್ತು ಡಿಗ್ರಿ ಓದುತ್ತಿದ್ದಾಗ. ಮೊದಲು ಅದಕ್ಕೆ ಅವಕಾಶವಿರಲಿಲ್ಲ.

1930-31 ರಲ್ಲಿ ನಾನು ಸೇಂಟ್ ಕ್ಸೇವಿಯರ್ಸ್‌ನಲ್ಲಿ ಎಂಟನೇ ಕ್ಲಾಸಿನಲ್ಲಿ ಓದುತ್ತಿದ್ದೆ. ಇಡೀ ಬಂಗಾಳದಲ್ಲಿ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ಅಲೆ ಇತ್ತು. ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ಕ್ರಾಂತಿಕಾರಿಗಳು ದಾಳಿ ಮಾಡಿದ್ದ ಸುದ್ದಿ ಹರಡಿತ್ತು. ಕ್ರಾಂತಿಕಾರಿಗಳ ಚಿತ್ರಹಿಂಸೆಗೆ ಸೇಡಾಗಿ ಬ್ರಿಟಿಷರನ್ನು ಕ್ರಾಂತಿಕಾರಿಗಳು ಕೊಲ್ಲಲು ಆರಂಭಿಸಿದ್ದರು. ಅದೊಂದು ಅಸಮಾನ ಹೋರಾಟವಾಗಿತ್ತು. ಒಂದು ಕಡೆ ಬ್ರಿಟಿಷ್ ಅರಸೊತ್ತಿಗೆಯ ಬಲಾಢ್ಯ ಸೈನ್ಯ ಇನ್ನೊಂದು ಕಡೆ ಅಸಹಾಯಕ, ಅಭದ್ರ ಭಾರತೀಯ ಕ್ರಾಂತಿಕಾರಿ ದೇಶ ಪ್ರೇಮ ಮತ್ತು ದೇಶಕ್ಕೆ ಸ್ವಾತಂತ್ರ್ಯ ಹೇಗಾದರೂ ತಂದು ಕೊಡಬೇಕೆಂಬ ಅದಮ್ಯ ಬಯಕೆಯೇ ಆತನ ಶಸ್ತ್ರಗಳಾಗಿದ್ದವು. ಇದೊಂದು ಬಿಡಿ ಅಲೆಯಲ್ಲಿ ಇದು ಒಂದು ಮಹಾನ್ ಚಳುವಳಿಯಾಗಿ ರೂಪುಗೊಳ್ಳಲು ಆರಂಭವಾಗಿತ್ತು. ಈ ಚಳುವಳಿಯಿಂದ ಪ್ರಭಾವಿತರಾಗದೆ ಇರುವುದು ಆಗ ಅಸಾಧ್ಯವಾಗಿತ್ತು. ನನಗೆ ಈಗ ಸರಿಯಾಗಿ ನೆನಪಿಲ್ಲ. ವರ್ಷ ನೆನಪಿದೆ. 1930 ರಲ್ಲಿ ಗಾಂಧೀಜಿ ತಮ್ಮ ಉಪವಾಸ ಆರಂಭಿಸಿದ್ದರು. ನನ್ನ ಹೃದಯ ಭಾರವಾಗಿತ್ತು. ನನ್ನ ಆದಿನ ಸ್ಕೂಲಿಗೆ ಹೋಗಲು ಮನಸ್ಸಾಗಲಿಲ್ಲ. ನನ್ನ ತಂದೆಯೂ ಒತ್ತಾಯಿಸಲಿಲ್ಲ. ನಾನು ಅಂದು ಅವರ ಕ್ಲಿನಿಕ್‌ನಲ್ಲಿ ಹೋಗಿ ಕುಳಿತಿದ್ದೆ.

ಅದೇ ವರ್ಷ ನೇತಾಜಿ ಸುಭಾಷ್ ಚಂದ್ರ ಬೋಸ್ ಬರುತ್ತಾರೆ ಎಂದು ಸುದ್ದಿ ಹರಡಿತ್ತು. ಅವರು ಒಕ್ಟೋರ್ಲೋನಿ ಸ್ಮಾರಕ (ಈಗ ಶಹೀದ್ ಮೀನಾರ್) ಮೈದಾನದಲ್ಲಿ ಸಭೆಗೆ ಬರುತ್ತಾರೆಂದು ಗೊತ್ತಾಗಿತ್ತು. ನಾನು ನನ್ನ ಸೋದರ ಸಂಬಂಧಿಯೊಬ್ಬ ಆ ಸಭೆಗೆ ಹೋಗುವುದೆಂದು ತೀರ್ಮಾನಿಸಿದ್ದೆವು. ಆಗ ನಾವು ಇನ್ನೂ ಖಾದಿ ಆರಂಭಿಸಿರಲಿಲ್ಲ, ಆದರೆ ನಮಗೆ ಏನೋ ಅನಿಸಿ ಕೈಮಗ್ಗದ ಬಟ್ಟೆ ಧರಿಸಿ ಹೋದೆವು. ಇಡೀ ಪ್ರದೇಶವೇ ರಣಾಂಗಣದಂತಿತ್ತು. ಅಲ್ಲಿ ಪೋಲೀಸು ಪೇದೆಗಳಿದ್ದರು. ಅಶ್ವಧಾರಿ ಪೋಲೀಸರಿದ್ದರು. ಸಾರ್ಜೆಂಟ್‌ಗಳಿದ್ದವು ಪೋಲೀಸರು ನೆರೆದಿದ್ದ ಜನರನ್ನು ಚದುರಿಸಲಾರಂಭಿಸಿದರು. ಜನ ಓಡಲಾರಂಭಿಸಿದರು. ಆದರೆ ನಾವಿಬ್ಬರು ಮಾತ್ರ ಓಡುವುದಿಲ್ಲ ಎಂದು ನಿರ್ಧರಿಸಿದ್ದೆವು. ನಾವು ಶಾಂತರಾಗಿ ನಡೆಯಲು ಆರಂಭಿಸಿದೆವು. ಆದರೆ ಓಡುತ್ತಿದ್ದ ಜನ ನಮ್ಮ ಮೇಲೆ ಬೀಳಲಾರಂಭಿಸಿದ್ದರು. ನಮ್ಮ ಬೆನ್ನ ಮೇಲೆ ಕೆಲವು ಲಾಠಿ ಏಟುಗಳು ಬಿದ್ದವು. ಆದರೂ ನಾವು ಓಡಲಿಲ್ಲ. ನಾವು ಹೆದರುವುದಿಲ್ಲ ಎಂದು ತೋರಿಸಬೇಕೆಂದಿದ್ದೆವು. ನಾವು ತಂದೆಯವರ ಕ್ಲಿನಿಕ್‌ಗೆ ಹೋದೆವು. ನಮ್ಮ ಸೋದರ ಸಂಬಂಧಿಯೊಬ್ಬ ಜಯಪ್ರಕಾಶ್ ನಾರಾಯಣ ಜತೆ ಅಮೆರಿಕೆಯಲ್ಲಿದ್ದ. ಅವನು ದಂತವೈದ್ಯನಾಗಿ ಹಿಂತಿರುಗಿದ್ದು ನಾವುಯಾರಿಗೂ ಏನೂ ಹೇಳಲಿಲ್ಲ. ಈ ಸೋದರ ಸಂಬಂಧಿಗೂ ತಾಯಿಗೆ ನಮ್ಮ ಗಾಯಗಳ ಮೇಲೆ ಅರಿಶಿಣದ ಲೇಹ್ಯ ಹಚ್ಚಲು ಹೇಳಿದೆವು. ಅದು ನಾನು ನೋಡಿದ ಸಾಮ್ರಾಜ್ಯ ಶಾಹಿಯ ವಿರುದ್ಧದ ಮೊದಲ ಸಾರ್ವಜನಿಕ ಪ್ರತಿಭಟನೆಯಾಗಿತ್ತು. ಆ ಪ್ರತಿಭಟನೆಯಲ್ಲಿ ನಾನು ತಿಂದ ಮೊದಲ ಏಟಾಗಿತ್ತು.

(ಮುಂದುವರಿಯುವುದು)

ಪ್ರಾರಂಭವಾಗುತ್ತಿವೆ ಶಾಲೆಗಳು! ಜೇಬುಗಳು ಜೋಪಾನ!!

ಪ್ರಭಾ. ಎನ್


ಬೇಸಿಗೆ ರಜೆ ಮುಗಿಸಿ ಶಾಲೆಗಳು ಪ್ರಾರಂಭಗೊಳ್ಳುತ್ತಿವೆ. ಮಕ್ಕಳಿಗೆ ಮೂಟೆ ಹೊರುವ ಚಿಂತೆಯಾದರೆ ತಂದೆ-ತಾಯಿಗೆ ಮೂಟೆ ಹಣವನ್ನು ಹೊಂದಿಸುವ ಚಿಂತೆ ಶುರುವಾದಂತಾಗಿದೆ. ಇಬ್ಬರ ಬೆನ್ನನ್ನೂ ಮುರಿಯುವ ಪ್ರಕ್ರಿಯೆ ಆರಂಭವಾಗಿದೆಯೆನ್ನಿ.

ಕಳೆದ ವಾರ ಆನೇಕಲ್ ತಾಲ್ಲೂಕಿನ ಹಳ್ಳಿಯೊಂದಕ್ಕೆ ಹೋಗಿದ್ದ ನಮ್ಮ ಜೆ.ಎಂ.ಎಸ್. ಕಾರ್ಯಕರ್ತೆ ಯೊಬ್ಬರ ಮನೆಗೆ ಬಂದಿದ್ದ ಹೆಂಗಸೊಬ್ಬರು ಹೇಳುತ್ತಿದ್ದರು.

ಆ ಶಾಲೆಯಲ್ಲಿ ವಿಚಾರಿಸಿದೆವು, ಐದು ಸಾವಿರ ಡೊನೇಷನ್. ಇನ್ನೊಂದು ಶಾಲೆ ವಿಚಾರಿಸಿದೆವು, ಏಳು ಸಾವಿರ ಡೊನೇಷನ್ ಆದರೂ ಏಕೋ ಸಮಾಧಾನವಿಲ್ಲ. ಹತ್ತು ಸಾವಿರವಾದರೂ ಚಿಂತೆಯಿಲ್ಲವೆಂದು ಕ್ರಿಶ್ಚಿಯನ್ ಕಾನ್ವೆಂಟಿಗೆ ಟ್ರೈ ಮಾಡಿದೆವು. ನನ್ನ ಮಗ ಸಂದರ್ಶನ ಸರಿಯಾಗಿ ಮಾಡಲಿಲ್ಲವಂತೆ ಸೀಟು ಸಿಗದೇ ಹೋಯಿತು ಏನ್ಮಾಡೋದು? ನನಗೆ ಇದೇ ಚಿಂತೆಯಾಗಿಬಿಟ್ಟಿದೆ. ನಮ್ಮನೆಯವರು ಇನ್ನೂ ಟ್ರೈ ಮಾಡುತ್ತಿದ್ದಾರೆ. ಬೇಕಿದ್ದರೆ ಹದಿನೈದು ಸಾವಿರವೇ ಕೊಡಲು ಸಿದ್ಧ. ಮಕ್ಕಳ ಭವಿಷ್ಯ ಮುಖ್ಯ ನೋಡಿ ಎಂದರು.

ಇದು ಎಲ್.ಕೆ.ಜಿ. ಗೆ ಸೇರಲು ಹೊರಟ ಮಗುವಿನ ಕಥೆ. ನಾಲ್ಕು ವರ್ಷದ ಮಗು ಈಗಾಗಲೇ ಪೈಪೋಟಿಯ ಕಣದಲ್ಲಿ ಸ್ಪರ್ಧಾಳು.

ಈ ಮೇಲಿನ ಮಾತುಗಳನ್ನು ಕೇಳುವಾಗಲೆಲ್ಲಾ



ನನಗನ್ನಿಸುವುದು ಸಾವಿರಾರು ರೂಪಾಯಿಗಳ ಬೆಲೆತೆತ್ತರೆ ಮಾತ್ರವೆ ವಿದ್ಯಾಭ್ಯಾಸವೆ ಎಂದು! ಹೆಚ್ಚೆಚ್ಚು ಹಣ ಸುರಿದಂತೆಲ್ಲಾ ಶಾಲೆಗಳ ಗುಣಮಟ್ಟ ಹೆಚ್ಚಾಗುವುದೆ? ಲೆಕ್ಕವಿಲ್ಲದಷ್ಟು ಹಣವನ್ನು ಸುಲಿಯುವ ಶಾಲೆಗಳಿಗೇ ಹೋಗಿ ಮುಗಿಬಿದ್ದರೆ ಅವನ ವ್ಯಾಪಾರೀ ದಾಹಕ್ಕೆ ಮಣೆ ಹಾಕಿದಂತಾಗುವುದಿಲ್ಲವೆ, ವಿದ್ಯೆಯನ್ನು ಸರಸ್ವತಿಯೆನ್ನುವ ಜನರು ಸರಸ್ವತಿಯನ್ನು ನಗ್ನಗೊಳಿಸಿ ಹರಾಜು ಹಾಕುವ ಖದೀಮರನ್ನು ಮಟ್ಟಹಾಕುವ ಬದಲಿಗೆ ಅವರ ದಂಧೆಯನ್ನೇ ಪ್ರೋತ್ಸಾಹಿಸುವುದು ಶೋಚನೀಯವಲ್ಲವೆ?

ಶಿಕ್ಷಣವೆಂಬುದು ವ್ಯಾಪಾರೀ ಸರಕೇ:

ಸಾವಿರಾರು ರೂಪಾಯಿ ಡೊನೇಷನ್ ಕ್ಯಾಪಿಟೇಶನ್ ನೀಡದೆ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದಿದ ನಮ್ಮಂಥವರಿಗೆ ಬದುಕೇ ವ್ಯರ್ಥವೇನೋ ಎನ್ನುವ ರೀತಿಯಲ್ಲಿ ಕೀಳರಿಮೆ ಮೂಡಿಸುವಂಥಹ ವಾತಾವರಣವನ್ನು ಇಂದು ಸೃಷ್ಟಿ ಮಾಡಲಾಗುತ್ತಿದೆ. ಮಾತ್ರವಲ್ಲ ಕನ್ನಡ ಶಾಲೆಗಳಲ್ಲಿ ಕಲಿಯುತ್ತಿರುವ ಇಂದಿನ ಮಕ್ಕಳ ಭವಿಷ್ಯವೂ ಸಹ ವ್ಯರ್ಥ ಎನ್ನುವಂತಹ ಹುಸಿ ಭ್ರಮೆಗಳನ್ನು ಸೃಷ್ಟಿಸಲಾಗುತ್ತಿದೆ. ಇದು ಸತ್ಯವೆ?

ಹಾಗಿದ್ದಲ್ಲಿ ದುಬಾರಿ ಖರ್ಚುಮಾಡಿ ಖಾಸಗಿ ಶಾಲೆಗಳಲ್ಲಿ ಅಥವಾ ಆಂಗ್ಲ ಶಾಲೆಗಳಲ್ಲಿಯೇ ಕಲಿತ ವಿದ್ಯಾವಂತರಿಗೆಲ್ಲಾ ಉದ್ಯೋಗ ಸಿಕ್ಕಿದೆಯೇ? ಭವಿಷ್ಯ ಉಜ್ವಲವಾಗಿದೆಯೇ? ಹುಸಿ ಭ್ರಮೆಗಳನ್ನು ಸೃಷ್ಟಿಸುವ ಖಾಸಗಿ ಶಾಲೆಗಳ ವಹ್ತಾರರಿಗೆ ಲಾಭಕೋರರಿಗೆ ಇದು ನನ್ನ ಪ್ರಥಮ ಪ್ರಶ್ನೆ.

ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡುತ್ತಿರುವ ಚೀನ, ಜಪಾನ್, ರಷ್ಯಾ, ಫ್ರಾನ್ಸ್ ಮುಂತಾದ ದೇಶಗಳಲ್ಲಿನ ವಿಜ್ಞಾನಿಗಳು, ತಂತ್ರಜ್ಞರು ಇಂಜಿನಿಯರುಗಳು, ಪ್ರೊಫೆಸರುಗಳು ತತ್ವಜ್ಞಾನಿಗಳು ಮಾಡಿರುವ ಸಾಧನೆ ಕಡಿಮೆಯೇ? ಆಂಗ್ಲ ಭಾಷೆಯಲ್ಲಿ ಕಲಿತಾಗ ಮಾತ್ರವೇ... ಸಾವಿರಾರು ರೂಪಾಯಿಗಳನ್ನು ಸುರಿದಾಗಲೇ ಇಂಜಿನಿಯರುಗಳು, ಡಾಕ್ಟರು, ತಂತ್ರಜ್ಞರು ಇತ್ಯಾದಿ ಆಗಲು ಸಾಧ್ಯವೆನ್ನುವ ದೊಡ್ಡ ಅಪಪ್ರಚಾರವನ್ನು ಗೊಬೆಲ್ಸನ ಸತ್ಯದಂತೆ ಹರಡಲಾಗುತ್ತಿದೆ ಏಕೆ?

ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆದು ಜಗತ್ ಪ್ರಸಿದ್ಧರಾದ ಸರ್. ಎಂ. ವಿಶ್ವೇಶ್ವರಯ್ಯನವರನ್ನು ನೆನಪಿಸುವುದು ಹಳೆಯ ಉದಾಹರಣೆಯಾದರೂ ಮಾತೃಭಾಷಾ ಶಿಕ್ಷಣಕ್ಕೆ ಎಲ್ಲರೂ ಕಟಿಬದ್ಧರಾದರೆ ಇಂತಹ ಅದೆಷ್ಟೋ ಸರ್ ಎಂ.ವಿ. ಗಳನ್ನು ತಯಾರು ಮಾಡಲು ಸಾಧ್ಯ.

ಆದರೆ ಶಿಕ್ಷಣವನ್ನು ವ್ಯಾಪಾರ ಸರಕನ್ನಾಗಿ ಮಾಡಿರುವ ಆಳುವ ಜನರಿಗೆ ಇದು ಬೇಕಾಗಿಲ್ಲವೆನ್ನುವುದೇ ಕಹಿ ಸತ್ಯ.

ಶಿಕ್ಷೆಯಾಗುತ್ತಿರುವ ಶಿಕ್ಷಣ:

ಕಲಿಯುವ ವಿಷಯಗಳಿಗಿಂತಲೂ ವಿಚಾರಗಳಿಗಿಂತಲೂ ಮೇಲ್ನೋಟದ ಆಡಂಬರಕ್ಕೆ ನಾವೆಲ್ಲರೂ ಮರುಳಾಗುತ್ತಿರುವುದು ವಿಷಾದದ ಸಂಗತಿ. ಮಿರುಗುವ ಷೂಗಳು-ಹೊಳಪಿನ ಸಮವಸ್ತ್ರ ಮಿಂಚುವ ಟೈ, ಬೆನ್ನಿನ ಮೇಲೆ ಪುಸ್ತಕದ ಮೂಟೆ ಹೀಗೆ ಬಾಹ್ಯಾಡಂಬರಗಳ ಮಧ್ಯೆ ಅದೆಷ್ಟು ಹಸುಳೆ ಮನಸ್ಸುಗಳು ಮನಸ್ಸಿನ ಭಾವನೆಗಳನ್ನು ವ್ಯಕ್ತಮಾಡಲಾಗದೆ ನಲುಗುತ್ತಿರುತ್ತವೊ? ಈ ಕುರಿತು ಯೋಚಿಸುವ ಗೋಜಿಗೆ ಹೋಗದ ನಾವು ಅವರ ಮನಸ್ಸನ್ನು ಅರಿತು ಆಸಕ್ತಿಗಳನ್ನು ಮನ್ನಿಸುವ ಗೊಡವೆಗೇ ಹೋಗದೆ ಶಿಕ್ಷಣವನ್ನು ಹೊರೆಯಾಗಿಸುತ್ತಿರುವುದು ವಿಷಾದದ ಸಂಗತಿ.

ಒಂದು ಉದಾಹರಣೆ ನೀಡಲು ಬಯಸುತ್ತೇನೆ. ಬೆಂಗಳೂರಿನಲ್ಲಿಯೇ ವಾಸವಾಗಿರುವ ಚಿಕ್ಕಮ್ಮನ ಮನೆಗೆ ನಾನು ಆಗಾಗ ಹೋಗುತ್ತಿರುತ್ತೇನೆ ಅವರ ಒಬ್ಬನೇ ಮಗನನ್ನು ಖಾಸಗಿ ಆಂಗ್ಲ ಶಾಲೆಗೆ ಸೇರಿಸಿದ್ದಾರೆ. ಅವನಿನ್ನು ನಾಲ್ಕನೇ ತರಗತಿ ಆತನ ಶಾಲೆ ಪ್ರಾರಂಭವಾಗುವುದು ಬೆಳಿಗ್ಗೆ ಏಳೂವರೆ ಗಂಟೆಗೆ. ಅವನನ್ನು ಎಬ್ಬಿಸುವ ಕೆಲಸ ಆರು ಗಂಟೆಗೆ ಪ್ರಾರಂಭವಾಗುತ್ತದೆ. ಅರೆಗಣ್ಣು ನಿದ್ರೆಯಲ್ಲಿಯೇ ಅವನು ಸ್ನಾನ ತಿಂಡಿ... ಇತ್ಯಾದಿಗಳನ್ನು ಮುಗಿಸಿ ಶಾಲೆಗೆ ತಯಾರಾಗುತ್ತಾನೆ. ಮನೆ ಮುಂದೆ ಬಂದು ನಿಲ್ಲುವ ಬಸ್ಸಿಗೆ ನಾಮುಂದು ತಾಮುಂದು ಎಂದು ಸಾಕಷ್ಟು ಮಕ್ಕಳು ಹತ್ತುತ್ತವೆ. ಕೈ-ಕಾಲು ಮೂಗು ಗದ್ದ ಹೊಡೆದುಕೊಳ್ಳುವ ವಿಚಾರಗಳು ಸಾಮಾನ್ಯ. ಶಾಲೆ ಮುಗಿಸಿ ಸಂಜೆ ನಾಲ್ಕು ಗಂಟೆಗೆ ಮನೆಗೆ ಬರುತ್ತಾನೆ. ಆತುರಾತುರವಾಗಿ ತಿಂಡಿ ತಿಂದು ಒಂದರ್ಧಗಂಟೆ ಆಟವಾಡಿ ಐದು ಗಂಟೆಗೆ ಟ್ಯೂಷನ್ನಿಗೆ ಹೋಗುತ್ತಾನೆ.

ಮತ್ತೆ ಬರುವುದು ಏಳು ಗಂಟೆಗೆ. ಬಂದವನೆ ಹೋಮ್ ವರ್ಕ್ ಪ್ರಾರಂಭಿಸುತ್ತಾನೆ. ಟಿವಿಯ ಕಡೆಗೊಮ್ಮೆ ಪುಸ್ತಕದ ಕಡೆಗೊಮ್ಮೆ ಹೀಗೆ ತಾಲೀಮು ನಡೆಸಿ ಎಂಟುಗಂಟೆಯ ತನಕ ಓದು-ಬರಹ ಮಾಡಿ ಅಮ್ಮನ ಕಾಟಕ್ಕೆ ತಿನ್ನುವ ನಾಟಕವಾಡಿ ಹಾಸಿಗೆಗೊರಗುತ್ತಾನೆ. ಓದು-ಓದುತ್ತಲೇ ತಿನ್ನುವಾಗಲೇ ತೂಕಡಿಸಿ ಬಿದ್ದ ದಿನಗಳಿಗೇನೂ ಕೊರತೆಯಿಲ್ಲ.

ಆಟವಾಡುವುದು ಯಾವಾಗ:

ನಾನು ಅವನನ್ನೊಮ್ಮೆ ಕೇಳಿದೆ. ಪ್ರವೀಣ ನೀನು ಆಟವಾಡುವುದು ಯಾವಾಗ? ನಿನಗೆ ಬಿಡುವಾಗುವುದು ಯಾವಾಗಲೆಂದು. ಶಾಲೆಯಿಂದ ಬಂದು ಟ್ಯೂಷನ್ನಿಗೆ ಹೋಗುವ ಮಧ್ಯೆ ಬಿಡುವಿರ್ತದಲ್ಲಾ ಆಗ, ಮತ್ತೆ ಭಾನುವಾರ ಎಂದ. ನೀನು ಯಾವ ಆಟ ಆಡ್ತಿ ಕೇಳಿದೆ. ಕ್ರಿಕೆಟ್ ಎಂದ ಅರ್ಧ ಗಂಟೆಯಲ್ಲೂ ಕ್ರಿಕೆಟ್ ಆಡ್ತೀರಾ ಅಂತ ಕೇಳಿದ್ದಕ್ಕೆ ಒಂದು ದಿನ ಬೋಲಿಂಗ್ ಆಡ್ತೀವಿ, ಒಂದು ದಿನ ಬ್ಯಾಟಿಂಗ್ ಆಡ್ತೀವಿ ಅಂದ. ಅಂತರರಾಷ್ಟ್ರೀಯ ಪಂದ್ಯಗಳಿಗಿಂತ ದುಬಾರಿ ಎಂದುಕೊಂಡ ನಾನು ಆ ಮಕ್ಕಳ ಬಗ್ಗೆ ಮನದಲ್ಲಿಯೇ ಮರುಕಪಟ್ಟು ನಿಟ್ಟುಸಿರುಬಿಟ್ಟೆ.

ನನಗೇಕೊ ನನ್ನ ಚಿಕ್ಕಮ್ಮನ ಮೇಲೆ ತುಂಬಾ ಸಿಟ್ಟುಬಂತು ಯಾಕೆ ಇವನಿಗೆ ಇಂತಹ ಶಿಕ್ಷೆ ಕೊಡುತ್ತಿದ್ದೀರಿ, ಅವನಿಗೆ ಆಡಲು- ಕುಣಿಯಲು ಅವಕಾಶ ಕೊಡದೆ ಓದಿನ ಹೆಸರಿನಲ್ಲಿ ನರಕ ಯಾತನೆ ನೀಡುತ್ತಿದ್ದೀರೆಂದು ಖಾರವಾಗಿ ಪ್ರಶ್ನಿಸಿದೆ.

ಅದಕ್ಕೆ ಅವರು ಉತ್ತರಿಸಿದ್ದು ಹೀಗೆ... ಇಷ್ಟೆಲ್ಲಾ ಕಷ್ಟಪಟ್ಟೇ ಅವನಿನ್ನೂ ನಾಲ್ಕು -ಐದನೇ ರ್‍ಯಾಂಕು. ಇನ್ನು ಅವನಿಷ್ಟಕ್ಕೆ ಬಿಟ್ಟರೆ ಕಥೆ ಅಷ್ಟೆ. ನೋಡು ಅಕ್ಕ-ಪಕ್ಕದ ಮಕ್ಕಳು ಸ್ವಲ್ಪವೂ ಸಮಯ ಹಾಳು ಮಾಡದೆ ಓದ್ತಾರೆ. ನಿನ್ನ ಮಾತು ಕೇಳಿ ಇರೋ ಒಬ್ಬ ಮಗನ ಭವಿಷ್ಯ ಹಾಳುಮಾಡಬೇಕಷ್ಟೆ ಎಂದರು. ಅಕ್ಕ-ಪಕ್ಕದ ತಾಯಿ ತಂದೆಯರು ಇನ್ನೂ ಕ್ರೂರಿಗಳಿರಬೇಕೆಂದುಕೊಂಡು ಸುಮ್ಮನಾದೆ.

ಶಿಕ್ಷಣ ವ್ಯ... ಡೊನೇಶನ್...

ಜೂನ್ ಬರುತ್ತಿದ್ದಂತೆ ಸ್ಕೂಲಿಗೆ ಹೋಗುವ ... ಸಮಯ ಪ್ರಾಥಮಿಕ ಶಾಲೆಗಳಿಗೂ ಲಕ್ಷದ... ಸ್ಕೂಲ್‌ಗಳ ಮೇಲ ಡೋನೇಶನ್ ಮಾಫಿಯಾ... ಡೊನೇಷನ್ ಮಾಫಿಯಾದ ಹಿಡಿತದ ಚಿತ್ರಣ ... ಪದ್ಧತಿ ನಮ್ಮ ಶಿಕ್ಷಣವನ್ನು ಕಾಡುತ್ತಿರುವ ಭೀ... ವರ್ಗದ ಮಕ್ಕಳೇ ಆಳುವವರಾಗುವಂತೆ ಮಾಡ... ವ್ಯವಸ್ಥೆ. ಸಾರ್ವಜನಿಕ ಸರಕಾರಿ ಶಿಕ್ಷಣ ಸ... ಬಯಲುಮಾಡಿದ್ದಾರೆ. ಸಂಪನ್ಮೂಲಗಳಿಲ್ಲದ ... ದುಸ್ಥಿತಿ ವಿಶ್ವವಿದ್ಯಾಲಯದ ನಿರ್ಲಕ್ಷ ಭ್ರಷ್ಟಾಚ... ಸದಸ್ಯರಾಗಿರುವ ಸೆನೆಟ್ ಲಕ್ಷ್ಮಿ ತಮ್ಮ ಅನುಭ... ನಮ್ಮ ಶಿಕ್ಷಣದ ಭೀಕರ ಸ್ಥಿತಿ ಮುಂದಿಟ್ಟು, ... ಬೀಸಿ ಕರೆ ಕೊಡುತ್ತಿವೆ.

ಓದು.... ಓದು... ಓದು ನಿನ್ನ ಕೆಲಸ ಬರೀ ಓದು... ಎನ್ನುವ ಶಿಕ್ಷೆ ಪ್ರವೀಣ ನಂತಹ ಅದಿನ್ನೆಷ್ಟು ಮಕ್ಕಳಿಗೋ...

ಶಿಕ್ಷಣವನ್ನು ತಬ್ಬಿರುವ ಗ್ರಾಹಕ ಸಂಸ್ಕೃತಿಯ ಕಬಂಧ ಬಾಹು

ಗ್ರಾಹಕ ಸಂಸ್ಕೃತಿಯ ಪೈಪೋಟಿಯ ಕದಂಬ ಬಾಹು... ಶಿಕ್ಷಣ ಕ್ಷೇತ್ರವನ್ನು ಬಿಡದೆ ಬಿಗಿಯಾಗಿ ತ... ನಲುಗಿಸುತ್ತಿರುವ ವಿಚಾರ ತುಂಬಾ ನಾಜೂಕಿನದ್ದಾಗಿದೆ.

ಹಣ ಮಾಡಲು ಹೊರಟಿರುವ ಖಾಸಗಿ ಶಿಕ್ಷ... ಸಂಸ್ಥೆಗಳು ಸೃಷ್ಟಿಸಿರುವ ಕೃತಕ ಪೈಪೋಟಿ ಒಂದು... ಕಡೆಯಾದರೆ ಅವುಗಳಿಗೆ ಮುಗಿಬೀಳುತ್ತಿರುವ ಪೋಷ... ವೃಂದ ಮತ್ತೊಂದು ಕಡೆ. ಒಟ್ಟಾರೆ ಗಂಡ-ಹೆಂಡ... ಜಗಳದಲ್ಲಿ ಕೂಸು ಬಡವಾಗುತ್ತಿವೆ.

ನನ್ನ ಮಗನಿಗೇ ಮೊದಲ ರ್‍ಯಾಂಕು, ನನ್ನ ಮಗಳಿ... ಮೊದಲ ರ್‍ಯಾಂಕು 12 ಗಂಟೆಯಾದರೂ ಓದಲಿ 2... ಗಂಟೆಯಾದರೂ ಓದಲಿ ನಮ್ಮ ಮಕ್ಕಳೇ ಫಸ್ಟ್ ಬರಬೇ... ಎನ್ನುವ ಪೈಪೋಟಿ, ನಂ 1 ಶಾಲೆಯಲ್ಲಿಯೇ ನ... ಮಕ್ಕಳಿಗೆ ಸೀಟು ಸಿಗಬೇಕೆನ್ನುವ ಪೈಪೋಟಿ (ನಂ 1 ... ಮಾನದಂಡ ಯಾವುದೋ) ಆರೋಗ್ಯವಂತ ಮಕ್ಕಳನ್... ಮನಸ್ಸನ್ನು ಸಮಾಜವನ್ನು ಸೃಷ್ಟಿಸಲಾರದು.

ಇಂತಹ ಪೈಪೋಟಿಗೆ ಬಲಿಯಾದ ಕಂದಮ್ಮಗಳಿಗೇ... ಕೊರತೆಯೇ. ನಾನು ಕಣ್ಣಾರೆ ಕಂಡ ಘಟನೆಯೊಂದು... ನೆನಪಾಗುತ್ತಿದೆ. ಕಳೆದ ವರ್ಷ ನನ್ನೂರಿನ ನಮ್ಮ ಹತ್ತಿರ... ಮನೆಯಲ್ಲಿಯೇ ಒಂದು ಭೀಕರ ಘಟನೆ ನಡೆಯಿತು... ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶ ಆಗತಾ... ಹೊರಬಿದ್ದಿತ್ತು. ಪರೀಕ್ಷಾರ್ಥಿಗಳೆಲ್ಲರೂ ಫಲಿತಾಂ... ನೋಡಿದರು. ಫಸ್ಟ್ ಕ್ಲಾಸ್ ನಿರೀಕ್ಷೆಯಲ್ಲಿ... ವಿದ್ಯಾರ್ಥಿಯೊಬ್ಬ ಸಾಧಾರಣ ಪಾಸಾಗಿದ್ದ. ಅವನ... ಭೂಮಿಯೇ ಬಾಯ್ತೆರೆದು ನುಂಗಿದ ಹಾ... ಭಾಸವಾಯಿತು. ಕೂಡಲೆ ಮನೆಗೆ ಹಿಂತಿರುಗಿದ ಅ... ಪಕ್ಕದ ಮನೆಗೆ ಹೋಗಿದ್ದರು. ಯಾರೂ ಮನೆಯಲ್ಲಿರಲಿ... ಬಾಗಿಲು ಬಡಿದು ಹಗ್ಗ ಬಿಗಿದು ನೇಣು ಹಾಕಿಕೊಂಡ.

ಸ್ವಲ್ಪ ಸಮಯದ ನಂತರ ಅಮ್ಮ ವಾಪಸ್ಸಾದ... ಯಾರಿಂದಲೊ ಫಲಿತಾಂಶ ಕೇಳಿ ತಿಳಿದಿದ್ದ ಅವ... ಮುಖವೂ ಧುಮ ಧುಮ ಎನ್ನುತ್ತಿತ್ತು. ಬಾಗಿಲು ತಳ್ಳಿದ... ಒಳಗಿನಿಂದ ಚಿಲಕ ಹಾಕಿತ್ತು. ಮನೆಯಲ್ಲಿ ಯಾರು... ಇರಲಿಲ್ಲ ಇವನೇ ಬಂದು ಮಲಗಿರಬೇಕೆಂದುಕೊಂಡ... ಜೋರಾಗಿ ಕೂಗಿದರು... ಬಾಗಿಲು ತಟ್ಟಿದರು ಬಾಗಿ... ತೆರೆಯಲಿಲ್ಲ. ಏನೇನೋ ಸಾಹಸ ಮಾಡಿ ಬಾಗಿ... ತೆರೆದರು ಅವರು ಕನಸಿನಲ್ಲೂ ಎಣಿಸದ ಘಟ... ನಡೆದೇ ಹೋಗಿತ್ತು ಮುದ್ದಿನ ಮ... ಕೊನೆಯುಸಿರೆಳೆದಿದ್ದ. ಮಗನೇ... ಎಂದು ಕೂಗಿ... ತಾಯಿ ಮೂರ್ಛೆ ಹೋದಳು.

"ನನ್ನ ಸಾವಿಗೆ ಯಾರೂ ಕಾರಣರಲ್ಲ ನಾನು ಬ... ಪಾಸಾಗಿದ್ದಕ್ಕೆ ಯಾರಿಗೂ ಮುಖತೋರಿಸ... ಇಚ್ಛೆಯಿಲ್ಲದೆ ಈ ರೀತಿ ಮಾಡಿಕೊಂಡೆ" ಇವು ... ಅಪ್ಪ- ಅಮ್ಮನೊಂದಿಗೆ ಕಾಗದದಲ್ಲಿ ಹಂಚಿಕೊಂ... ಕೊನೆಯ ಮಾತುಗಳು.

ಪುಟ 10ಕ್ಕೆ

ಶಿಕ್ಷಣವೋ? ಸುಲಿಗೆಯೋ! ಖಾಸಗಿ ಕಾನ್ವೆಂಟ್: ವಂತಿಗೆ ಮುಕ್ಕುವ ಬಕಾಸುರರು


- ಅನಂತ್

ಒಂದು ಸೀಟಿಗೆ ಒಂದು ಲಕ್ಷರೂ! ಇದೇನು ಮೆಡಿಕಲ್ ಸೀಟು ಅಥವಾ ಇಂಜಿನಿಯರಿಂಗ್ ಸೀಟಿಗೆ ಅಲ್ಲ. ನಗರದ ಕೆಲವು ಪ್ರತಿಷ್ಠಿತ ಖಾಸಗಿ ಕಾನ್ವೆಂಟ್‌ಗಳಲ್ಲಿ ಎಲ್.ಕೆ.ಜಿ. ಪ್ರವೇಶಕ್ಕೆ. ಎಲ್ಲಾ ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಶಿಕ್ಷಣವನ್ನು ವ್ಯಾಪಾರ ಮಾಡಿಕೊಂಡಿರುವ ಇಂತಹ ಪ್ರತಿಷ್ಠಿತ ಶಾಲೆಗಳು ಬೆಂಗಳೂರಿನಲ್ಲಿ ಹಲವಾರು ಇವೆ. ಇವರ ಮೇಲೆ ಯಾವ ರೀತಿಯ ನಿರ್ಬಂದ ನಿಯಂತ್ರಣವೂ ಇಲ್ಲ. ಕನಿಷ್ಠ ಮೂಲಭೂತ ಸೌಲಭ್ಯಗಳೂ ಇಲ್ಲದ ಹಲ ವಾರು ಶಾಲೆಗಳು, ಶಿಕ್ಷಕರನ್ನು ಸಹಾ ಹೊಂದದೆ ತಾವು ಅತ್ಯುತ್ತಮ ಶಿಕ್ಷಣ ನೀಡುತ್ತೇವೆಂದು ಪ್ರಚಾರ ಮಾಡಿ ಕೊಳ್ಳುತ್ತ ಪೋಷಕರಿಂದ ಸಾವಿರಾರು ರೂಗಳನ್ನು ಸುಲಿಗೆ ಮಾಡುತ್ತಿರುವುದು ಕದ್ದು ಮುಚ್ಚಿ ನಡೆಯುವ ವ್ಯವಹಾರ ವೇನಲ್ಲ. ಆದರೂ ನಮ್ಮ ಸರ್ಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಕಣ್ಣು ಮುಚ್ಚಿ ಕುಳಿತಿರುವುದಂತೂ ದಿಟ.

ಜೊಂಡು ಮೇಯುವ ದನಗಳು

7ನೇ ತರಗತಿಯವರೆಗೆ ಸರ್ವರಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಎಂಬ ಸಂವಿಧಾನದ ಆಶ್ವಾಸನೆಗೆ ಸರ್ಕಾರಗಳೇ ಸೊಪ್ಪು ಹಾಕುತ್ತಿಲ್ಲ. ನೂತನ ಶಿಕ್ಷಣ ನೀತಿಯ ಮೂಲಕ ಸರ್ಕಾರವೇ ಶಿಕ್ಷಣವನ್ನು ಸಂಪೂರ್ಣ ಖಾಸಗೀಕರಣ ಹಾಗೂ ವ್ಯಾಪಾರೀಕರಣ

ಪುಟ 8ಕ್ಕೆ



ಮಗು ಹಾಲು ಕುಡಿಯುತ್ತಿರುವಾಗಲೇ ಪಾಲಕರಿಗೆ ಡೊನೇಷನ್ ಚಿಂತೆ!

ಯು ಕ್ಯಾನ್ಸರ್ ಮಾಫಿಯಾ

ಪಾಲಕರಿಗೆ ಮೈ ನಡಕ. ಸ್ಕೂಲ್ ಭರ್ತಿಯಾಗುವ
ಡೊನೇಶನ್ ಸಾಮಾನ್ಯವಾಗಿದೆ. ಖಾಸಗಿ
ತದ ಬಗ್ಗೆ ಬೆಂಗಳೂರಿನ ಖಾಸಗಿ ಸ್ಕೂಲುಗಳಲ್ಲಿ
ದ್ದಾರೆ - ಅನಂತ್ ಮತ್ತು ಪ್ರಭಾ. ಡೊನೇಶನ್
ಮಸ್ಯೆ. ಶಿಕ್ಷಣವನ್ನೆ ವ್ಯಾಪಾರವಾಗಿಸುವ ಆಳುವ
ಕ್ಷಣ ವ್ಯವಸ್ಥೆಯನ್ನು ರೂಪಿಸಿದೆ ಈ ಡೊನೇಶನ್
ನ್ನು - ಈ ವ್ಯವಸ್ಥೆಯ ಸಂಚನ್ನು ಅನಂತ್
ುವುದು ಈ ವ್ಯವಸ್ಥೆಯ ಭಾಗ. ಕಾಲೇಜುಗಳ
ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯ ಸೆನೆಟ್
ೇಡಿಕೊಂಡಿದ್ದಾರೆ. ಈ ಮೂರು ಲೇಖನಗಳು
ಬಗ್ಗೆ ನಾವೇನಾದರೂ ಮಾಡಬೇಕು ಎಂದು ಕೈ

ಡೊನೇಷನ್

"ಶ್ರಮಿಕ ವರ್ಗಕ್ಕೆ ಶಿಕ್ಷಣ ನಿರಾಕರಿಸುವ ಸಂಚು"


ಅನಂತ್

ಸಾವಿರಾರು ವರ್ಷಗಳಿಂದ ಶಿಕ್ಷಣದಿಂದ ವಂಚಿತವಾಗಿದ್ದ ಶ್ರಮಿಕ ವರ್ಗ ಈಗಷ್ಟೆ ಶಿಕ್ಷಣ ಪಡೆಯುವ ದಿಸೆಯಲ್ಲಿ ಹೆಜ್ಜೆ ಹಾಕುತ್ತಿರುವಾಗ - ತಾನು ಪಡೆದ ಶಿಕ್ಷಣದಿಂದ ಸಮಾಜದಲ್ಲಿನ ತಾರತಮ್ಯವನ್ನು ಅರಿತುಕೊಂಡು ತನಗೆ ದಕ್ಕಬೇಕಾದ ಹಕ್ಕುಗಳಿಗೆ ಧ್ವನಿ ಎತ್ತುತ್ತಿರುವಾಗ ಗಾಬರಿಗೊಂಡು ಬಂಡವಾಳಶಾಹಿ ಪುರೋಹಿತ ಶಾಹಿ ವರ್ಗ, ಶ್ರಮಿಕ ವರ್ಗದಿಂದ ಶಿಕ್ಷಣವನ್ನು ಕಸಿದುಕೊಳ್ಳಲು ಹೂಡಿರುವ ಸಂಚು ಡೊನೇಷನ್! ಶಿಕ್ಷಣವನ್ನು ಮತ್ತಷ್ಟು ದುಬಾರಿಗೊಳಿಸುವ ಮೂಲಕ ಶ್ರಮಿಕರಿಗೆ ಶಿಕ್ಷಣವನ್ನು ನಿರಾಕರಿಸಲಾಗುತ್ತಿದೆ.

ಕೇವಲ ಪ್ರಾಥಮಿಕ ಶಿಕ್ಷಣಕ್ಕೆ ಇಂದು ಒಂದು ಲಕ್ಷ ರೂಪಾಯಿಯವರೆಗೆ ಡೊನೇಷನ್ ರೂಪದಲ್ಲಿ ವ್ಯಯಿಸಬೇಕೆಂದರೆ ಅಂತಹ ಶಿಕ್ಷಣ ಪಡೆಯಲು ಯಾರಿಂದ ಸಾಧ್ಯವಾಗುತ್ತದೆ ಎಂಬುದು ಸ್ಪಷ್ಟ. ಸಮಾಜದಲ್ಲಿ ಮೇಲ್ವರ್ಗದ ಬಂಡವಾಳಗಾರರಿಗೆ, ಲಾಭಕೋರ ವ್ಯಾಪಾರಿಗಳಿಗೆ, ಅಧಿಕಾರ ಶಾಹಿಯಲ್ಲಿ ಉನ್ನತ ಸ್ತರದಲ್ಲಿರುವವರಿಗೆ ಮಾತ್ರ ಶಿಕ್ಷಣ. ಹೊಲದಲ್ಲಿ ಕೆಲಸ ಮಾಡುವ ರೈತನಿಗೆ, ಕೃಷಿಕೂಲಿಗಾರನಿಗೆ, ಕಾರ್ಖಾನೆಗಳ ದುಡಿಯುವ ಕಾರ್ಮಿಕರಿಗೆ ಊರಾಚೆ ಇರುವ ಶೂದ್ರರಿಗೆ, ಸ್ಲಂಗಳಲ್ಲಿ ವಾಸಿಸುವ ಕೆಳವರ್ಗದ ಜನತೆಯ ಮಕ್ಕಳಿಗೆ ಅಂತಹ ಶಿಕ್ಷಣ ಇಲ್ಲವೆಂದೇ ಅರ್ಥ. ಬಡವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲಿ ಎಂದು ನೀವು ಹೇಳಬಹುದು. ಆದರೆ ಈಗಾಗಲೇ ಪ್ರಬಲವಾಗಿ ರೂಪುಗೊಂಡಿರುವ 'ಡೊನೇಷನ್ ಮಾಫಿಯ' ಅಷ್ಟು ಸುಲಭದಲ್ಲಿ ಅದಕ್ಕೆ ಅವಕಾಶ ಕೊಡಲಾರದು. ಸ್ವಾತಂತ್ರ್ಯನಂತರದ ಆರಂಭದ ದಿನಗಳಲ್ಲಿ ಸಾರ್ವಜನಿಕ ಶಿಕ್ಷಣಕ್ಕೆ ಮಹತ್ವ ನೀಡಿದರೂ ಆನಂತರದ ದಿನಗಳಲ್ಲಿ ಸಾರ್ವಜನಿಕ ಶಿಕ್ಷಣಕ್ಕೆ ಅದರಲ್ಲೂ ಪ್ರಾಥಮಿಕ ಶಿಕ್ಷಣಕ್ಕೆ ದಿನೇ ದಿನೇ ಸರ್ಕಾರ ನೀಡುತ್ತಿರುವ ಆದ್ಯತೆ ಕಡಿಮೆಯಾಗುತ್ತಿದ್ದು ಅದಕ್ಕೆ ಹೂಡುವ ಹಣವು ಕಡಿಮೆಯಾಗುತ್ತಿದೆ. ಇಂದು ದೇಶಾದ್ಯಂತ ಸರ್ಕಾರಿ ಶಾಲೆಗಳ ಸ್ಥಿತಿ-ಗತಿ ಅತ್ಯಂತ ಶೋಚನೀಯ ಪರಿಸ್ಥಿತಿ ಮುಟ್ಟಿದೆ. ಸರ್ಕಾರಿ ಶಾಲೆಗಳು ಸುಧಾರಿಸುವುದು ಈ 'ಡೊನೇಷನ್ ಮಾಫಿಯ'ಕ್ಕೆ ಬೇಕಾಗಿಲ್ಲ. ಡೊನೇಷನ್ ಮಾಫಿಯದ ಸದಸ್ಯರು ಶಾಸಕರಾಗಿ, ಮಂತ್ರಿಗಳಾಗಿ, ಅಧಿಕಾರಿಗಳಾಗಿ ಈ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಹಾಗಾಗಿ ಕೆಲವು ವರ್ಷಗಳ ಮುಂಚೆ ನಗರಕ್ಕೆ ಮಾತ್ರ ಸೀಮಿತವಾಗಿದ್ದ ಈ ಖಾಸಗಿ ಕಾನ್ವೆಂಟ್‌ಗಳು ಇಂದು ತಾಲ್ಲೂಕು, ಹೋಬಳಿ, ಹಳ್ಳಿಗಳಲ್ಲಿ ತಲೆ ಎತ್ತಿವೆ. ಅದೇ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲೇ ಶಾಲೆಯನ್ನು ತ್ಯಜಿಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸರ್ಕಾರದ ಅಂಕಿ ಅಂಶಗಳೇ ಇದನ್ನು ಸ್ಪಷ್ಟಪಡಿಸುತ್ತಿದೆ. ನಗರಗಳಲ್ಲಿನ ಸರ್ಕಾರಿ ಶಾಲೆಗಳನ್ನಂತೂ ಕೇಳುವವರೇ ಇಲ್ಲವಾಗಿದೆ.

ಡೊನೇಷನ್ ಮಾಫಿಯಾ ಸಮಾಜದಲ್ಲಿ ವರ್ಗಬೇಧವನ್ನೊಂದು ಸೃಷ್ಟಿ ಮಾಡುತ್ತಿವೆ. ಕಾನ್ವೆಂಟ್‌ಗಳಲ್ಲಿ ಓದುವುದೆ ಶ್ರೇಷ್ಠತೆ ಕಾನ್ವೆಂಟುಗಳಲ್ಲಿ ಓದದವರು ಸರ್ಕಾರಿ ಶಾಲೆಗಳಲ್ಲಿ ಓದುವವರು ಅತ್ಯಂತ ಕೀಳು ಎನ್ನುವ ಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ.

ಹೆಚ್ಚು ಡೊನೇಷನ್ ನೀಡಿ ಪ್ರತಿಷ್ಠಿತ ಕಾನ್ವೆಂಟ್‌ಗಳಲ್ಲಿ ತಮ್ಮ ಮಕ್ಕಳನ್ನು ಓದಿಸುವುದೇ ಸೂಕ್ತ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಕಲಿಸುವುದೆಲ್ಲ ಬರೀ ಕಸ, ಪ್ರಯೋಜನಕ್ಕೆ ಬಾರದ್ದು ಎನ್ನುವ ಮನೋಭಾವ ಬೆಳಸಲಾಗುತ್ತಿದೆ, ಕಲಿತರೆ ಖಾಸಗಿ ಶಾಲೆಗಳಲ್ಲಿಯೇ ಕಲಿಯಬೇಕು. ಸರ್ಕಾರಿ ಶಾಲೆಗಳಲ್ಲಿ ಕಲಿಯುವುದ ಅವಮಾನಕರ ಎನ್ನುವ ವಾತಾರವರಣ ನಿರ್ಮಾಣ ಮಾಡಲಾಗುತ್ತಿದೆ. ಈ ಮೂಲಕ ಶಿಕ್ಷಣ ರಂಗದಲ್ಲಿ ಶ್ರೇಷ್ಠ ಶಿಕ್ಷಣ - ಕಳಪೆ ಶಿಕ್ಷಣ ಎನ್ನುವ ಎರಡು ವಿಭಾಗ ನಿರ್ಮಾಣಗೊಂಡಿದ್ದು ಡೊನೇಷನ್ ಪಡೆದು ಶಿಕ್ಷಣ ನೀಡುವ ಖಾಸಗೀ ಶಾಲೆಗಳಲ್ಲಿ ನೀಡುವ ಶಿಕ್ಷಣ ಶ್ರೇಷ್ಠ - ಸರ್ಕಾರಿ ಶಾಲೆಗಳಲ್ಲಿ ಸಿಗುವ ಶಿಕ್ಷಣ ಕನಿಷ್ಠ ಎನ್ನುವ ಅಭಿಪ್ರಾಯ ರೂಪಿಸಲಾಗುತ್ತಿದೆ. ಸರ್ಕಾರಿ ಶಾಲೆಗಳ ವಾಸ್ತವವೂ ಇದಕ್ಕೆ ದೂರವೇನಲ್ಲ. ಉನ್ನತ ಶಿಕ್ಷಣವನ್ನು ಎಲ್ಲ ಹಂತಗಳಲ್ಲಿಯೂ ವ್ಯಾಪಾರೀಕರಣ ಮಾಡಿರುವುದರಿಂದ ಉನ್ನತ ಶಿಕ್ಷಣ ಪಡೆಯುವವರು ಈ ಡೊನೇಷನ್ ಪಡೆದ ಶಾಲೆಗಳಿಂದ ಬಂದವರೇ ಆಗಿದ್ದು ಇದನ್ನು ಡೊನೇಷನ್ ಪಡೆದ ಸ್ಕೂಲುಗಳಲ್ಲಿ ಶಿಕ್ಷಣದ ಶ್ರೇಷ್ಠತೆ ಎಂದು ಬಿಂಬಿಸಲಾಗುತ್ತಿದೆ. ಇದರೊಂದಿಗೆ ಉನ್ನತ ವರ್ಗಕ್ಕೆ ಉನ್ನತ ಮಟ್ಟದ ಶಿಕ್ಷಣ ಕೆಳವರ್ಗಕ್ಕೆ ಕಳಪೆ ಶಿಕ್ಷಣ ಎಂದು ವಿಭಜನೆಯಾಗುತ್ತಿದೆ. ಹೆಚ್ಚಿನ ಡೊನೇಷನ್ ನೀಡಲು ಸಾಧ್ಯವಿರುವವರಿಗೆ ಉತ್ತಮ ಶಿಕ್ಷಣ, ಡೊನೇಷನ್ ನೀಡಲು ಸಾಧ್ಯವಿಲ್ಲದ ಶ್ರಮಿಕ ವರ್ಗಕ್ಕೆ ಕಳಪೆ ಶಿಕ್ಷಣ, ಈ ರೀತಿಯ ವಿಭಜನೆಯ ಹಿಂದೆ ಆಳುವ ವರ್ಗದ ಮಹಾಸಂಚೊಂದಿದೆ. ಆಳುವ ವರ್ಗ ತನ್ನ ಉತ್ತರಾಧಿಕಾರಿಗಳು ತನ್ನ ವರ್ಗದಿಂದಲೇ ಬರಬೇಕೆಂದು



ಬಯಸುತ್ತದೆ. ಆಳುವ ವರ್ಗದ ವಲಯದೊಳಗೆ ಶ್ರಮಿಕ ವರ್ಗದ ಪ್ರತಿನಿಧಿ ಬರುವುದನ್ನು ಅದು ಸಹಿಸುವುದಿಲ್ಲ. ಸಮಾಜದ ಉನ್ನತ ಸ್ಥಾನಗಳಾದ ಐಎಎಸ್, ಐಪಿಎಸ್‌ಗಳು, ಡಾಕ್ಟರುಗಳು, ಇಂಜಿನಿಯರುಗಳು, ಬ್ಯಾಂಕುಗಳಲ್ಲಿನ ಉನ್ನತಾಧಿಕಾರಿಗಳು, ಬಹುರಾಷ್ಟ್ರೀಯ ಕಂಪನಿಗಳ ಉನ್ನತಾಧಿಕಾರಿಗಳು, ಮುಂತಾದ ಆಳುವ ವರ್ಗಕ್ಕೆ ಆಳುವ ವರ್ಗದ ಮಕ್ಕಳೇ ಬರಬೇಕೆಂಬುದು ಅದರ ಇಚ್ಛೆ.

ಡೊನೇಷನ್ ಮಾಫಿಯ ಇಂದು ಡೊನೇಷನ್ ಮೂಲಕ ಊಹಿಸಲು ಸಾಧ್ಯವಿಲ್ಲದಷ್ಟು ಅಪಾರ ಮೊತ್ತದ ಹಣವನ್ನು ಸಂಗ್ರಹಿಸುತ್ತಿದೆ. ಈ ಹಣ ಏನಾಗುತ್ತಿದೆ? ಈ ಹಣದ ಒಂದು ಭಾಗವನ್ನು ಡೊನೇಷನ್ ಮಾಫಿಯ ತನ್ನ ಹಿಡಿತ ಬಿಗಿ ಮಾಡಲು ಬಳಸುತ್ತಿದೆ. ಹಲವಾರು ಖಾಸಗಿ ಶಾಲೆಗಳು ಹಣ ನೀಡುವುದರ ಮೂಲಕ ಪಬ್ಲಿಕ್ ಪರೀಕ್ಷೆಗಳಲ್ಲಿ ರ್‍ಯಾಂಕು ಗಳನ್ನು ಕೊಂಡು ಆ ಮೂಲಕ ತನ್ನ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡು ಮತ್ತಷ್ಟು ಹೆಚ್ಚಿನ ಮೊತ್ತದ ಡೊನೇಷನ್ ಸಂಗ್ರಹಿಸುತ್ತಿದೆ. ಇನ್ನುಳಿದಂತೆ ಈ ಖಾಸಗಿ ಶಾಲೆಗಳನ್ನು ನಡೆಸುತ್ತಿರುವವರು ಅಪಾರ ಪ್ರಮಾಣದ ಆಸ್ತಿ-ಪಾಸ್ತಿ ಮಾಡಿಕೊಂಡು ಮೋಜುವಾನಿ ನಡೆಸುತ್ತಿದ್ದಾರೆ. ಇನೊಂದೆಡೆ ಬಡ ಕೂಲಿಕಾರ ಶ್ರಮಿಕ ವರ್ಗ ಈ ಡೊನೇಷನ್ ನೀಡಲಾರದೆ ತಮ್ಮ ಮಕ್ಕಳನ್ನು ಶಿಕ್ಷಣ ಪಡೆಯಲು ಶಾಲೆಗೆ ಕಳುಹಿಸಲು ಸಾಧ್ಯವಾಗದೆ ಮಕ್ಕಳನ್ನು ಹೋಟೆಲುಗಳಲ್ಲಿ, ಹೊಲ ಗದ್ದೆಗಳಲ್ಲಿ, ಗ್ಯಾರೇಜುಗಲ್ಲಿ, ಕಟ್ಟಡ ಕಟ್ಟುವೆಡೆಯಲ್ಲಿ, ಇಟ್ಟಿಗೆ ಗೂಡುಗಳಲ್ಲಿ, ಪಟಾಕಿ ಕಾರ್ಖಾನೆಗಳಲ್ಲಿ ಅಗರ ಬತ್ತಿ ಕಾರ್ಖಾನೆಗಳಲ್ಲಿ ದುಡಿಯಲು ಕಳುಹಿಸುವ ಸ್ಥಿತಿ ನಿರ್ಮಾಣವಾಗಿದೆ.

ಇಂದು ಸಮಾಜದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೂರು ವರ್ಗಗಳನ್ನು ಗುರುತಿಸಬಹುದು. ಒಂದು ವರ್ಗ ಶಿಕ್ಷಣವನ್ನು ಪಡೆಯಲು ಸಾಧ್ಯವೇ ಇಲ್ಲದಂತಹ ಅತ್ಯಂತ ಬಡವರ್ಗ ಮತ್ತೊಂದು ಸಾಲಸೋಲ ಮಾಡಿಯಾದರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದು ಆಶಿಸುವವರ ಕೆಳಮಧ್ಯಮ ವರ್ಗ. ಮೂರನೆಯವರು ನೀರಿನಂತೆ ಹಣ ಖರ್ಚು ಮಾಡಬಲ್ಲ ಶ್ರೀಮಂತ ವರ್ಗ. ಸಾಲ ಸೋಲ ಮಾಡಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಬಯಕೆ ಇರುವ ಕೆಳ ಮಧ್ಯಮ ವರ್ಗ ಈ ಡೊನೇಷನ್ ಹಾವಳಿಯಿಂದ ಪಡುವ ತೊಂದರೆ ಅಷ್ಟಿಷ್ಟಲ್ಲ. ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಲು ಇಷ್ಟವಾಗದೆ ಖಾಸಗಿ ಶಾಲೆಗಳಿಗೆ ಸಾಲ ಮಾಡಿ ಡೊನೇಷನ್ ನೀಡಿ ಸೇರಿಸಿದ ನಂತರ ಆಗುವ ಖರ್ಚುಗಳನ್ನು ಭರಿಸಲಾಗದೆ ತಮ್ಮ ಉಳಿದ ಎಲ್ಲ ಆಸೆ ಆಕಾಂಕ್ಷೆಗಳನ್ನು ನಿಯಂತ್ರಿಸಿಕೊಂಡು, ತಮ್ಮ ಜೀವನ ಮಟ್ಟವನ್ನು ಕೆಳಗಿಳಿಸಿಕೊಂಡು ಸರ್ವಸ್ವವನ್ನು ತ್ಯಾಗ ಮಾಡಿ ಮಕ್ಕಳನ್ನು ಓದಿಸಿ ಅವರು ಉತ್ತಮ ಸ್ಥಾನಕ್ಕೇರುವ ಕನಸು ಕಾಣುತ್ತಾರೆ. ಅದಕ್ಕಾಗಿ ಅವರು ರ್‍ಯಾಂಕ್ ಬರಲೇ ಬೇಕೆಂದು ಒತ್ತಡ ಹಾಕುತ್ತಾ ಮೇಲಿನ ಹಂತದ ಶಿಕ್ಷಣ ಮತ್ತಷ್ಟು ದುಬಾರಿಯಾದಾಗ ಅದನ್ನು ಭರಿಸಲಾಗದೆ ಕಂಗಾಲಾಗುವರು.

ಶತಶತಮಾನಗಳ ಕಾಲ ಯಾವ ಪುರೋಹಿತಶಾಹಿ ಬಂಡವಾಳಶಾಹಿ ವರ್ಗ ಶ್ರಮಿಕರಿಗೆ ಸಾಮಾಜಿಕ ಕಾರಣ ನೀಡಿ ಶಿಕ್ಷಣವನ್ನು ನಿರಾಕರಿಸಿತ್ತೋ ಅದೇ ವರ್ಗ ಇಂದು ಬೇರೆಯೇ ರೂಪದಲ್ಲಿ ನಿಂತು ಆರ್ಥಿಕ ಮುಗ್ಗಟ್ಟನ್ನು ಸೃಷ್ಟಿಸಿ ಅದೇ ಶ್ರಮಿಕ ವರ್ಗಕ್ಕೆ ಶಿಕ್ಷಣವನ್ನು ನಿರಾಕರಿಸುತ್ತಿದೆ. ಶ್ರಮಿಕ ವರ್ಗ ಶಿಕ್ಷಣ ಪಡೆದರೆ ತನ್ನ ಅಸ್ತಿತ್ವಕ್ಕೆ ಉಂಟಾಗಬಹುದಾದ ಧಕ್ಕೆಯನ್ನು ಬಹುಬೇಗ ಅರಿತುಕೊಂಡಿರುವ ಬಂಡವಾಳಶಾಹಿ ವರ್ಗ ತನ್ನೆಲ್ಲ ಶಕ್ತಿ ಸಾಮರ್ಥ್ಯ, ಚಾಣಾಕ್ಷತೆಯನ್ನು ಬಳಸಿ, ಡೊನೇಷನ್ ಎಂಬ ಮಹಾ ಮಾರಿಯನ್ನು ಸೃಷ್ಟಿಸಿ ಶ್ರಮಿಕವರ್ಗವನ್ನು ಶಿಕ್ಷಣದಿಂದ ದೂರವಿಡುವ ಎಲ್ಲ ಪ್ರಯತ್ನಗಳನ್ನು ಮಾಡುತಿವೆ.

ನಾನು ಸೆನೆಟ್ ಸದಸ್ಯಳಾದೆ!

- ಕೆ.ಎಸ್.ಲಕ್ಷ್ಮಿ

ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷೆ

ಗೆದ್ದ ದಿನ ನನ್ನ ಸುತ್ತ ಮುತ್ತಲಿನವರ ಗುಸು ಗುಸು ಲಕ್ಷ್ಮಿಗೆ ಇನ್ ಮುಂದೆ ಬಂಪರ್ ಏನಪ್ಪಾ Medical engineering Seat deal ಮಾಡ ಬಹುದು, ಕಾಲೇಜಿನ ತನಿಖೆಗೆ ಹೋದ್ರೆ ಹಣ ಮಾಡಬಹುದು ಎಂದು. ಹೌದು ಶ್ರೀಮಂತರ ಬಳಿ ಹಣತಗೊಳ್ಳೋಣ ಬಡವರ ಹತ್ರ ಬೇಡ ಅಂದ್ಕೊಂಡು ಆ ದಿನ ನಮ್ಮ ಮನೆ ಬಳಿ ನಾ ಅಂದೆ ಅಮ್ಮಾ ಇನ್ನೊಂದು ತಿಂಗಳೊಳಗೆ ನಮ್ಮ ಮನೆ ಮುಂದೆ ಮಾರುತಿ ಕಾರ್ ಇರುತ್ತೆ ಎಂದು. ....ಸೆನೆಟ್ ಸದಸ್ಯಳಾದರೆ ಸಾಕು ವಿಶ್ವವಿದ್ಯಾಲಯದಲ್ಲಿ ಏನೆಲ್ಲಾ ಮಾಡಿಬಿಡಬಹುದೆಂಬ ವಿಚಾರ ದಿನದಿಂದಾ ದಿನಕ್ಕೆ ಹುಸಿಯಾಗುತ್ತಾ ಬಂತು.

ಎಂ.ಎ. ಪದವಿಯನ್ನು ಮುಗಿಸಿ ಮುಂದೆ ಯಾವ್ಯಾವ ಕಾಲೇಜಿನಲ್ಲಿ ಉದ್ಯೋಗಕ್ಕಾಗಿ ಅರ್ಜಿಗಳನ್ನು ಹಾಕಬೇಕೆಂದು ಯೋಚಿಸುತ್ತಾ, ವಿಜಯನಗರದ ಬಸ್ಟಾಂಡಿನತ್ತ ಹೆಜ್ಜೆ ಹಾಕುತ್ತಿರುವಾಗ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ ಮುಖಂಡರೊಬ್ಬರು ಸಿಕ್ಕಿ ಹೇಳಿದ ಮಾತುಗಳು "ಸೆನೆಟ್ ಚುನಾವಣೆ ಬರ್ತಾ ಇದೆ, ಯಾರ್‍ಯಾರೊ ನಿಲ್ತಿದ್ದಾರೆ, ಬೋಗಸ್ ಡಿಗ್ರಿಯವರೆಲ್ಲಾ ಸೆನೆಟ್ ಸದಸ್ಯರಾದರೆ, ವಿ.ವಿ.ಗತಿ ಏನು? ನೀವು ಯೂನಿವರ್ಸಿಟಿ ಲೀಡರ್ ಇದ್ದೀರಿ. ನೀವ್ಯಾಕೆ ನಿಲ್ಲಬಾರದೆಂದು. ಹೌದು ನಾನ್ಯಾಕೆ ನಿಲ್ಲಬಾರದು ಎಂಬ ಗುಂಗಿನಲ್ಲೇ ಸೆನೆಟ್‌ಗೆ ನಿಲ್ಲುವ ನಿರ್ಧಾರ ಮಾಡಿದೆ. ಒಂದನೇ ತರಗತಿಯಿಂದಲೂ ಲೀಡರ್ ಗಿರಿಯನ್ನು ಯಾರಿಗೂ ಬಿಟ್ಟು ಕೊಡದ ನನಗೆ ವಿ.ವಿ.ಯ ಸೆನೆಟ್ ಸದಸ್ಯೆಯಾಗಬೇಕೆನಿಸಿತು. ಸೆನೆಟ್ ಎಂದರೇನು ತಿಳಿಯದು. ಏನೆಲ್ಲಾ ಅದರ ಜವಾಬ್ದಾರಿಗಳು ತಿಳಿಯದು ಒಟ್ಟಿ ಚುನಾವಣೆಗೆ ನಿಲ್ಲಬೇಕೆಂಬ ಮೊಂಡು ಧೈರ್ಯದಿಂದ ಸ್ವಯಂ ಘೋಷಿತ ಅಭ್ಯರ್ಥಿಯಾದೆ.

"ಕೈಯಲ್ಲಿ ಬಿಡಿಕಾಸಿಲ್ಲ, ಜಾತಿ ಹಿನ್ನೆಲೆ ಇಲ್ಲಾ, ರಾಜಕೀಯ ಹಿನ್ನೆಲೆ ಇಲ್ಲ, ನಿನಗ್ಯಾಕೆ ಈ ಗೀಳು, ಬೀದಿಪಾಲಾಗ್ತಿ, ಯಾವುದಾದರೂ ಕಾಲೇಜಿನ ಲೆಕ್ಚರಾಗು" ಎಂದು ನನ್ನ ವಿಭಾಗದ ಪ್ರೊಫೆಸರ್‍ಸ್ ಕವಿಮಾತು. ಈ ಮಾತಿನ ಹಿನ್ನೆಲೆ ಅವರ ಜಾತಿಯ ಮಹಿಳಾ ಅಭ್ಯರ್ಥಿಯನ್ನು ಗೆಲ್ಲಿಸಲಿಕ್ಕೆ ನನ್ನನ್ನು ನಿರುತ್ಸಾಹಗೊಳಿಸುತ್ತಿರುವ ಪ್ರೊಫೆಸರ್ ನಡವಳಿಕೆ ನನ್ನಲ್ಲಿ ಚುನಾವಣೆ ಎದುರಿಸುವ ಗಟ್ಟಿತನ ಮತ್ತಷ್ಟು ಮೂಡಿಸಿತ್ತು. ಈ ನಡುವೆ ನನ್ನ ವಿರೋಧಿ ಅಭ್ಯರ್ಥಿಯಿಂದ 15,000 ರೂ ಆಹ್ವಾನ 'ನಾಮಪತ್ರ' ಹಿಂದೆ ಪಡೆಯಲು. ಇವೆಲ್ಲದರ ನಡುವೆ ಎಸ್.ಎಫ್.ಐ ಬೆಂಬಲಿತ ಅಭ್ಯರ್ಥಿಯೆಂದು ನಡೆದ ಪ್ರಚಾರ ಕೋಲಾರದ ಅಭ್ಯರ್ಥಿಯೆಂದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಕೇತರರು ನನ್ನ ಗೆಲುವಿಗೆ ಕಾರಣರಾದರು.

ಗೆದ್ದ ದಿನ ನನ್ನ ಸುತ್ತ ಮುತ್ತಲಿನವರ ಗುಸು ಗುಸು "ಲಕ್ಷ್ಮಿಗೆ ಇನ್‌ಮುಂದೆ ಬಂಪರ್, Medical engineering Seat deal ಮಾಡಬಹುದು, ಕಾಲೇಜಿನ ತನಿಖೆಗೆ ಹೋದ್ರೆ ಹಣ ಮಾಡಬಹುದು" ಎಂದು. ಹೌದು ಶ್ರೀಮಂತರ ಬಳಿ ಹಣತಗೊಳ್ಳೋಣ ಬಡವರ ಹತ್ರ ಬೇಡ ಅಂದ್ಕೊಂಡು ಆ ದಿನ ನಮ್ಮ ಮನೆ ಬಳಿ ನಾ ಅಂದೆ ಅಮ್ಮಾ ಇನ್ನೊಂದು ತಿಂಗಳೊಳಗೆ ನಮ್ಮ ಮನೆ ಮುಂದೆ ಮಾರುತಿ ಕಾರ್ ಇರುತ್ತೆ ಎಂದು. ಎಸ್.ಎಫ್.ಐ. ನವರು ಯಾವ ಹಿನ್ನೆಲೆಯೂ ಇಲ್ಲದ ನನಗೆ Support ಮಾಡಿರೋದ್ರಿಂದ ಚೆನ್ನಾಗಿ ಹಣ ಮಾಡಿ ಅವರ ಕಾರ್ಯಕ್ರಮಕ್ಕೆಲ್ಲಾ ಹಣಕೊಡಬೇಕೆನ್ನುವ ಕೃತಜ್ಞತೆ ಮಾತ್ರ ಇತ್ತು. ಗೆದ್ದ ಮೊದಲನೆ ವರ್ಷ (ಎಸ್.ಎಫ್.ಐ.) ನಾನು ಭಾಗವಹಿಸಿದ್ದ ಕೋಲಾರ ಜಿಲ್ಲೆಯ ಹಲವಾರು ತಾಲ್ಲೂಕು ಶಿಬಿರ, ಸಮ್ಮೇಳನಗಳು ನನ್ನೊಟ್ಟಿಗೆ ಸಂಗಾತಿಗಳು ಹೇಳುತ್ತಿದ್ದ ವಿಚಾರಗಳು ಈ ಜೀವನದ ಗತಿಯನ್ನೇ ಬದಲಿಸಿದವು.

ಸೆನೆಟ್ ಸದಸ್ಯಳಾಗಿ ನಾನು ಭಾಗವಹಿಸಿದ ಪ್ರಥಮ ಸಭೆ ಅಜೆಂಡಾ ಶುರು ಆಗುವ ಮುನ್ನವೇ, 15,16 ಸೆನೆಟ್ ಸದಸ್ಯರು ಸಭೆಯ ಅಧ್ಯಕ್ಷರಿಗೆ papercuttings ತೋರಿಸುತ್ತಾ ಎಲ್.ಐ.ಸಿ. ಗಳು ಅಪ್ರಾಮಾಣಿಕವಾಗಿ ತನಿಖೆ ನಡೆಸುತ್ತಿರುವುದೆಂದು ಆರೋಪಿಸಿರುವ ಲಕ್ಷ್ಮಿ ಸಾಬೀತು ಮಾಡಬೇಕು, ಇಲ್ಲವೇ ಕ್ಷಮೆ ಕೇಳಬೇಕು ಎಂದು ಕೂಗಾಡಿದರು. ಮಾತನಾಡಲು ಸೂಚಿಸಿದ ಅಧ್ಯಕ್ಷರಿಗೆ ನಾ ಹೇಳ್ದೆ, "ನಾ ಹೆಂಗೆ ಸಾಬೀತು ಮಾಡಲಿ ಸರ್ ಕಳಪೆ ಕಾಲೇಜುಗಳು, ನಮ್ಮ ನಮ್ಮ ಬದುಕುಗಳೇ ಸಾಕ್ಷಿ ಸಾರ್" ಎಂದು ಪ್ರಥಮ ಬಾರಿಗೆ ಎಲ್.ಐ.ಸಿ. ಗೆ ಹೋಗಿ ಬಂದ ನಾನು ಕಾಲೇಜುಗಳ ದುಸ್ಥಿತಿಗೆ ಮೊದಲು ವಿಶ್ವವಿದ್ಯಾಲಯವ ತನ್ನನ್ನು ತಾನು ವಿಮರ್ಶೆ ಮಾಡಿಕೊಳ್ಳಬೇಕೆಂದು ಹೇಳಿದ ಪತ್ರಿಕಾ ಗೋಷ್ಟಿಯಲ್ಲಿಯ ಮಾತುಗಳು ನಮ್ಮ ಸದಸ್ಯರನ್ನು ಮೈ ಪರಚುಕೊಳ್ಳುವಂತೆ ಮಾಡಿತ್ತು.

ಸೆನೆಟ್ ಸದಸ್ಯಳಾದರೆ ಸಾಕು ವಿಶ್ವವಿದ್ಯಾಲಯದಲ್ಲಿ ಏನೆಲ್ಲಾ ಮಾಡಿಬಿಡಬಹುದೆಂಬ ವಿಚಾರ ದಿನದಿಂದಾ ದಿನಕ್ಕೆ ಹುಸಿಯಾಗುತ್ತಾ ಬಂತು. ಪ್ರತಿ ಸೆನೆಟ್ ಸಭೆಯಲ್ಲಿ ಪ್ರತಿಯೊಬ್ಬ ಸದಸ್ಯ 10 ಪ್ರಶ್ನೆಗಳನ್ನು 4 ನಿರ್ಣಯಗಳನ್ನು ಮಂಡಿಸಬಹುದು. ಸಭೆಯ notice ಬಂದ ಕೂಡಲೆ ನಾನು ಪ್ರಶ್ನೆ ಮತ್ತು ನಿರ್ಣಯಗಳನ್ನು ಕುಲಸಚಿವರಿಗೆ ಕಳಿಸಿದೆ. ಸಭೆಯ ಅಜೆಂಡಾ ಬಂದ ಮೇಲೆ ನೋಡ್ತೀನಿ ನನ್ನ ಎರಡು ನಿರ್ಣಯಗಳಿಲ್ಲ, 4 ಪ್ರಶ್ನೆಗಳಿಲ್ಲ. ಸರಿ ಸಿಂಡಿಕೇಟ್ ವಿಭಾಗದಲ್ಲಿ ಈ ಕುರಿತು ವಿಚಾರಿಸಿದಾಗ ಹೇಳಿದ್ದು "ಮೇಡಂ ನೀವು ಕಳಿಸಿರುವ ಪ್ರಶ್ನೆ ನಿರ್ಣಯವನ್ನು ಸಿಂಡಿಕೇಟ್ ಸಭೆಯಲ್ಲಿ ಯಾರಾದ್ರು ಅನುಮೋದಿಸಬೇಕು ಇಲ್ಲದಿದ್ದರೆ ಬಿದ್‌ಹೋಗ್ತಾವೆ ಎಂದು ಇದನ್ನು ಕೇಳಿ ತಲೆ ತಿರುಗಿತು. ಪ್ರತಿಯೊಂದನ್ನು ಸಿಂಡಿಕೇಟ್ ನಿರ್ಧರಿಸಿ ಬಿಡುವುದಾದರೆ, ವಿ.ವಿ.ಯಲ್ಲಿ ಸೆನೆಟ್ ಯಾಕೆ ಬೇಕು? ಅಕಾಡಮಿಕ್ ಕೌನ್ಸಿಲ್ ಯಾಕೆ ಬೇಕು? ಇದೆಂಥಹ ಶಿಕ್ಷಣದ ಪ್ರಜಾಪ್ರಭುತ್ವೀಕರಣ ಎಂದೆನಿಸಿ ಇದನ್ನು Over Come ಮಾಡಲು 1/3 ಸದಸ್ಯರ ಬೆಂಬಲದ ಸಹಿಗಳೊಂದಿಗೆ ನಿರ್ಣಯಗಳನ್ನು ಸೂತ್ರದ ಪ್ರಕಾರ ಮಂಡಿಸದೆ, ಟೇಬಲ್ ಅಜೆಂಡಾ ಮಾಡಿ ಚರ್ಚಿಸಿದ್ದೇವೆ.

ಪುಟ 8ಕ್ಕೆ

ಶಿಕ್ಷಣವೋ! ಸುಲಿಗೆಯೋ!!.........

ಪುಟ 6 ರಿಂದ

ಮಾಡಲು ಹೊರಟಿರುವಾಗ ಖಾಸಗೀ ಶಿಕ್ಷಣ ಸಂಸ್ಥೆಗಳ ಸುಲಿಗೆಯನ್ನು ತಡೆಯುವವರು ಯಾರು?

ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿರುವ ಹಲವು ಶ್ರೀಮಂತ ಶಿಕ್ಷಣ ಸಂಸ್ಥೆಗಳು ಜೊಂಡು ಮೇಯುವ ದನಗಳಂತೆ ಮನಸೋ ಇಚ್ಛೆ ವಂತಿಗೆ ಸಂಗ್ರಹಿಸುತ್ತಿವೆ. ಅರಬಿಂದೊ ಮೆಮೊರಿಯಲ್ ಸ್ಕೂಲ್‌ನಲ್ಲಿ ಎಲ್.ಕೆ.ಜಿ.ಗೆ ಪ್ರವೇಶ ಪಡೆಯಲು 60 ರಿಂದ 80 ಸಾವಿರ ರೂ ವಂತಿಗೆ ನೀಡ ಬೇಕಾಗುತ್ತಿದೆ. ಕುಮಾರನ್ಸ್ ಚಿಲ್ಡ್ರನ್ಸ ಹೋಂ ಎಂಬ ಸ್ಕೂಲಿನಲ್ಲಿ 50,000 ಸಾವಿರದಿಂದ 75 ಸಾವಿರ ದವರಗೆ ವಂತಿಗೆ ಸಂಗ್ರಹಿಸ ಲಾಗುತ್ತಿದೆ. ಕೋರಮಂಗಲದಲ್ಲಿರುವ ಶಿಕ್ಷಣ ಸಂಸ್ಥೆಯೊಂದು 60 ರಿಂದ 80 ಸಾವಿರ ಸಂಗ್ರಹಿಸುತ್ತಿದೆ. ಅವರ ವಂತಿಗೆಯಲ್ಲಿ ಶಾಲೆಯ ಉಳಿದ ಶುಲ್ಕ ಸೇರಿರುವುದಿಲ್ಲ ಎಂಬುದನ್ನು ನೀವು ಗಮನಿಸಬೇಕು. ಈ ವಂತಿಗೆಯಲ್ಲದೆ ಹಲವಾರು ಶುಲ್ಕಗಳ ಹೆಸರಿನಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಹಣವನ್ನು ಪಡೆಯಲಾಗುತ್ತದೆ ಇದಲ್ಲದೆ ನೀವು ಪುಸ್ತಕಗಳನ್ನು ಶಾಲೆ ಯಿಂದಲೇ ಖರೀದಿಸಬೇಕು, ಅದೂ ಒಂದಕ್ಕೆ ಎರಡರಷ್ಟು ಹಣ ತೆತ್ತು. ಶಾಲೆಯವರು ಹೇಳಿದಲ್ಲಿಯೇ ನಿಮ್ಮ ಮಗುವಿಗೆ ಸಮವಸ್ತ್ರ ಹಾಗೂ ಬೂಟುಗಳನ್ನು ಕೊಳ್ಳುವುದು ಕಡ್ಡಾಯ. ಒಟ್ಟಿನಲ್ಲಿ ಎಲ್ಲಾ ರೀತಿಯಿಂದಲೂ ಪೋಷಕರನ್ನು ಸುಲಿಗೆ ಮಾಡಲಾಗುತ್ತಿದೆ. ಇಂದು ಎಲ್ಲೆಡೆ ನಾಯಿ ಕೊಡೆಗಳಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತುತ್ತಿವೆ. ಏನೇನೂ ಸೌಲಭ್ಯವಿಲ್ಲದ ಕನಿಷ್ಟ ತಲೆಯ ಮೇಲೊಂದು ಸುರಕ್ಷಿತ ಸೂರು ಸಹಾ ಇಲ್ಲದ ಶಾಲೆಗಳಿವೆ ಇಂತಹ ಶಾಲೆಗಳಲ್ಲಿ ಕನಿಷ್ಟ 5,000 ರೂ ವಂತಿಗೆ ವಸೂಲು ಮಾಡಲಾಗುತ್ತದೆ ಶಿಕ್ಷಣ ಇಲಾಖೆ ಪ್ರತಿವರ್ಷ ಅನಧಿಕೃತ ಶಾಲೆಗಳ ದೊಡ್ಡ ಪಟ್ಟಿಯನ್ನೆ ಪ್ರಕಟಿಸುತ್ತದೆ ಪ್ರವೇಶ ಪ್ರಕ್ರಿಯೆ ಪೂರ್ಣ ಗೊಂಡ ನಂತರ ಶಾಲೆಗಳು ಆರಂಭ ವಾಗುವ ಹೊತ್ತಿನಲ್ಲಿ ಈ ಪಟ್ಟಿ ಪ್ರಕಟವಾಗುವುದರಿಂದ ಪೋಷಕರಿಗೆ ದಿಕ್ಕು ತಪ್ಪಿದಂತಾಗುತ್ತದೆ. ಬೇರೆ ಶಾಲೆಗೆ ಸೇರಿಸಲು ಅವಧಿ ಮೀರಿರುತ್ತದೆ ಈಶಾಲೆ ಅನಧಿಕೃತ. ಇಂತಹ ಸಂದರ್ಭದಲ್ಲಿ ಇಂತಹ ಶಾಲೆಯವರ ಪೋಷಕರಿಂದ ಶಾಲೆಗೆ ಶಿಕ್ಷಣ ಇಲಾಖೆಯಿಂದ ಅನುಮತಿ ದೊರಕಿಸಿ ಕೊಳ್ಳಲು ಹಣ ಬೇಕೆಂದು ಮತ್ತಷ್ಟು ವಸೂಲಿ ಮಾಡುತ್ತಾರೆ. ಪೋಷಕರು ತಮ್ಮ ಮಕ್ಕಳ ಭವಿಷ್ಯದ ಯೋಚನೆಯಿಂದ ಅನಿವಾರ್ಯ ವಾಗಿ ಸಾಲ ಸೋಲ ಮಾಡಿ ಮತ್ತಷ್ಟು ಹಣ ನೀಡಲೇ ಬೇಕಾಗುತ್ತದೆ.

ಅಮ್ಮ ಅಪ್ಪನಿಗೆ ಇಂಟರ್ ವ್ಯೂ

ಈ ಖಾಸಗೀ ಶಾಲೆಗಳ ಪ್ರವೇಶ ಪ್ರಕ್ರಿಯೆ ಡಿಸೆಂಬರ್ ತಿಂಗಳಿನಲ್ಲಿ ಆರಂಭ. ಅರ್ಜಿ ವೊಂದರ ಶುಲ್ಕ ಕನಿಷ್ಟ 50 ರೂಪಾಯಿ ಯಿಂದ 500 ರೂ ವರೆಗೆ ಕೆಲವು ಶಾಲೆಗಳಲ್ಲಿ ಅರ್ಜಿ ಫಾರಂ ಹಾಗೂ ಪರಿಚಯ ಪುಸ್ತಿಕೆಗಾಗಿ 1000 ರೂ ಪಡೆಯುವುದು ಉಂಟು. ನಂತರ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಅಪ್ಪ- ಅಮ್ಮನಿಗೆ ಮಗುವಿಗೆ ಇಂಟರ್ ವ್ಯೂ ಎಂಬ ಪ್ರಹಸನ. ಮಗು ಶಾಲೆಗೆ ಸೇರುವ ಮೊದಲೇ ಇಂಗ್ಲೀಷ್ ಬಾಷೆ ತಿಳಿದಿರಬೇಕು. ಏಕೆಂದರೆ ಬಹು[illegible]ಲೂ ಇಲ್ಲಿ ಸಂದರ್ಶನಗಳು ನಡೆಯುವುದು ಇಂಗ್ಲೀಷಿನಲ್ಲಿ, ಇಂಗ್ಲಿಷ್ ಬಾರದ ಅಪ್ಪ- ಅಮ್ಮ ಅವರ ತಾತ್ಸಾರಕ್ಕೆ ಗುರಿಯಾಗುತ್ತಾರೆ. ಆದರೆ ಅಯ್ಕೆಗೆ ಇದೇನೂ ಮಾನದಂಡವಲ್ಲ. ಈ ಸಂದರ್ಶನಕ್ಕೆ 100 ಅಂಕ ನಿಗದಿಯಾಗಿದ್ದಲ್ಲಿ ಅದರಲ್ಲಿ ಅಪ್ಪ ಅಮ್ಮ ಪದವೀಧರರಾಗಿದ್ದರೆ 10 ಅಂಕ. ಇಬ್ಬರೂ ಉದ್ಯೋಗಿಗಳಾಗಿದ್ದಲ್ಲಿ 10 ಅಂಕ. ಇನ್ನುಳಿದ 80 ಅಂಕ ನೀವು ಎಷ್ಟು ಡೊನೇಷನ್ ಕೊಡುತ್ತೀರಿ ಅದನ್ನು ಅವಲಂಬಿಸಿರುತ್ತದೆ. ಡೊನೇಷನ್ ಹೆಚ್ಚು ಕೊಟ್ಟರೆ ಹೆಚ್ಚು ಅಂಕ. ಅಂತಿಮವಾಗಿ ಡೊನೇಷನ್ ಹೆಚ್ಚು ಕೊಟ್ಟ ಮಗುವಿಗೆ ಎಲ್.ಕೆ.ಜಿ.ಗೆ ಪ್ರವೇಶ.

ಶಿಕ್ಷಕರ ಗುಣ ಮಟ್ಟ

ಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಣದ ಮಹತ್ವ ಬಹಳ ಹೆಚ್ಚಿನದು. ವಿಶಾಲವಾದ ಮನೆಯೊಂದಕ್ಕೆ ಭದ್ರ ಅಡಿಪಾಯದಂತೆ. ಉನ್ನತ ಶಿಕ್ಷಣಕ್ಕೆ ಅಡಿಪಾಯವಾದದ್ದು ಪ್ರಾಥಮಿಕ ಹಂತದ ಶಿಕ್ಷಣ. ಹಾಗಾಗಿ ಪ್ರಾಥಮಿಕ ಶಿಕ್ಷಣದ ಶಿಕ್ಷಕರು ಅಷ್ಟು ಮಹತ್ವದ ಪಾತ್ರ ಇಲ್ಲಿ ವಹಿಸಬೇಕಾಗುತ್ತದೆ. ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕ ರೀತಿಯಲ್ಲಿ ಶಿಕ್ಷಕ ಇಲ್ಲಿ ತನ್ನ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಶಿಕ್ಷಕರಿಗೆ ವಿಶೇಷ ತರಬೇತಿ ಅಗತ್ಯ. ಆದ್ದರಿಂದಲೇ ಪ್ರಾಥಮಿಕ ಶಿಕ್ಷಕರಿಗೆ ಟಿ.ಸಿ.ಎಚ್ ಪ್ರೌಢಶಾಲಾ ಹಂತದಲ್ಲಿ ಬಿ.ಎಡ್. ಶಿಕ್ಷಕ ತರಬೇತಿ ಪಡೆದ ಶಿಕ್ಷಕರಿರುತ್ತಾರೆ. ಆದರೆ ಈ ಖಾಸಗಿ ಕಾನ್ವೆಂಟ್‌ಗಳಲ್ಲಿ ಶಿಕ್ಷಕರಾಗಿರು ವವರು ನಿಗದಿತ ಅರ್ಹತೆ, ತರಬೇತಿ ಪಡೆದ ಶಿಕ್ಷಕರಲ್ಲ. ಬಹುಪಾಲು ಖಾಸಗಿ ಕಾನ್ವೆಂಟ್‌ಗಳು ತಮ್ಮ ಮನಸ್ಸಿಗೆ ಬಂದಂತೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಾರೆ. ಎಸ್.ಎಸ್.ಎಲ್.ಸಿ. ಫೇಲಾದ ಎಷ್ಟೊ ಜನ ಕೆಲವು ಕಾನ್ವೆಂಟ್‌ಗಳಲ್ಲಿ ಶಿಕ್ಷಕರಾಗಿರುವುದನ್ನು ನಾನು ಕಂಡಿದ್ದೇನೆ. ಅತ್ಯಂತ ಹೆಚ್ಚಿನ ಡೊನೇಷನ್ ತೆಗೆದುಕೊಳ್ಳುವ ಪ್ರತಿಷ್ಠಿತ ಕಾನ್ವೆಂಟ್‌ಗಳು ಇದಕ್ಕೆ ಹೊರತಲ್ಲ. ಇಲ್ಲಿನ ಶಿಕ್ಷಕರಿಗೆ ವಿಧಿಸುವ ಏಕೈಕ ಮಾನದಂಡ ಚೆನ್ನಾಗಿ ಇಂಗ್ಲೀಷ್ ಮಾತನಾಡಲು ಬರಬೇಕು ಎಂಬುದಷ್ಟೇ ಆಗಿದೆ ಹಾಗೂ ಈ ಶಿಕ್ಷಕರನ್ನು ಆಡಳಿತ ಮಂಡಳಿ ನಡೆಸಿಕೊಳ್ಳುವ ರೀತಿಯೂ ಅತ್ಯಂತ ಹೇಯಕರ. ಯಾವುದೇ ರೀತಿಯ ಉದ್ಯೋಗ ಭದ್ರತೆ ಈ ಶಿಕ್ಷರಿಗೆ ಇಲ್ಲ. ಆಡಳಿತ ಮಂಡಳಿ ತಮಗಿಷ್ಟ ಬಂದಂತೆ ನೇಮಕ ಮಾಡಿಕೊಳ್ಳವುದು ಇಲ್ಲವೆ ಕೆಲಸದಿಂದ ತೆಗೆದು ಹಾಕುವುದೂ ಮಾಡುತ್ತವೆ. ಈ ಶಿಕ್ಷಕರಿಗೆ ನೀಡುವ ವೇತನವೂ ಕನಿಷ್ಟ ಜೀವನ ನಡೆಸಲಿಕ್ಕೂ ಸಾಕಾಗದು. ಬಹುಪಾಲು ಕಡೆ ಮಹಿಳೆಯರನ್ನೇ ಹೆಚ್ಚಾಗಿ ನೇಮಕ ಮಾಡಿಕೊಂಡಿರುತ್ತಾರೆ.

ಈ ಶಿಕ್ಷಕರಿಂದ ಎಲ್ಲಾ ರೀತಿಯ ಕೆಲಸಗಳನ್ನು ಮಾಡಿಸಲಾಗುತ್ತದೆ. ಕೆಲವು ಕಡೆ ತಿಂಗಳು ಗಟ್ಟಲೇ ಸಂಬಳವೇ ಇಲ್ಲ. ಸಂಬಳ ಕೇಳಿದರೆ ದೈಹಿಕ ಹಲ್ಲೆ ಅತ್ಯಾಚಾರ ಇವೆಲ್ಲವುಗಳಿಂದಾಗಿ ಈ ಶಿಕ್ಷಕರುಗಳಿಗೆ ತಮ್ಮ ವೃತ್ತಿಯ ಬಗ್ಗೆ ಗೌರವವೇ ಹೊರಟು ಹೋಗಿರುತ್ತದೆ. ತಮ್ಮ ಮೇಲಿನ ಶೋಷಣೆಯ ಅಸಹನೆಯನ್ನು ಎಷ್ಟೋ ಬಾರಿ ವಿದ್ಯಾರ್ಥಿಗಳ ಮೇಲೆ ಪ್ರದರ್ಶಿಸುವುದು ಉಂಟು. ಕೆಲವು ತಿಂಗಳುಗಳ ಹಿಂದೆ ಶಿಕ್ಷಕಿಯೊಬ್ಬರ ಇಂತಹ ಅಸಹನೆಯ ಫಲವಾಗಿ ವಿದ್ಯಾರ್ಥಿಯೊಬ್ಬ ಕಣ್ಣನ್ನು ಕಳೆದು ಕೊಂಡ ಘಟನೆ ನಡೆದ ಉದಾಹರಣೆ ಇದೆ. ಮಕ್ಕಳ ಮನಸ್ಸು ಅರಿತುಕೊಳ್ಳದ ಇಂತಹ ಶಿಕ್ಷಕರಿಂದ, ಆಡಳಿತ ಮಂಡಳಿಗಳಿಂದ ಉತ್ತಮ ಶಿಕ್ಷಣ ಸಿಗುತ್ತದೆಂಬ ಭರವಸೆ ಬರೀ ಭ್ರಮೆ.

ಕನ್ನಡ ಮಾತನಾಡಿದರೆ ದಂಡ

ಶಿಕ್ಷಣವನ್ನು ವ್ಯಾಪಾರ ಮಾಡಿ ಕೊಂಡಿರುವ ವ್ಯಾಪಾರಿಗಳು ವೃತ್ತಿ ಗೌರವ ವಿಲ್ಲದ ಶಿಕ್ಷಕರು, ಅಪಾರ ಹಣ ನೀಡಿ ಶಾಲೆಗೆ ಸೇರಿಸುವುದನ್ನು ಪ್ರತಿಷ್ಟೆಯ ವಿಷಯವನ್ನಾಗಿ ಮಾಡಿಕೊಂಡಿರುವ ಪೋಷಕರ ಮಕ್ಕಳು ಈ ಮೂರು ವರ್ಗ ಸೇರಿ ಈ ಕಾನ್ವೆಂಟ್‌ಗಳಲ್ಲಿ ಈ ನೆಲದ ಮಣ್ಣಿಗೆ ಬೇರೆಯಾದ ಹುಸಿ ಸಂಸ್ಕೃತಿಯೊಂದನ್ನು ಪೋಷಿಸುತ್ತಿದ್ದಾರೆ.

ತರಗತಿಗಳಲ್ಲಿ ಕನ್ನಡ ಮಾತಾನಾಡಿದರೆ ದಂಡ, ಮಕ್ಕಳು ತಮ್ಮ ಹುಟ್ಟಿದ ಹಬ್ಬದಂದು ಶಿಕ್ಷರಿಗೆ ಕಾಣಿಕೆಗಳನ್ನು ತಂದು ಕೊಡಬೇಕು. ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಶಾಲೆಗೆ ಕಾಣಿಕೆ ನೀಡಬೇಕಾದ ಮುಂತಾದ ಅಲಿಖಿತ ನಿಯಮಗಳ ಮೂಲಕವು ಸುಲಿಗೆ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಕನ್ನಡ ಕಡ್ಡಾಯ ಎಂಬುದಕ್ಕೆ ಇಲ್ಲಿ ಬೆಲೆಯೇ ಇಲ್ಲ. ಕನ್ನಡ ವನ್ನು ಅತ್ಯಂತ ನಿಕೃಷ್ಟವಾಗಿ ಕಾಣಲಾಗು ತ್ತದೆ. ಕೆಲವು ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿಯೂ ಕಲಿಸುವುದೇ ಇಲ್ಲ. ವಿದ್ಯಾರ್ಥಿಗಳೆಲ್ಲಾ ಸಂಸ್ಕೃತ ಅಥವಾ ಹಿಂದಿಯನ್ನು ಪ್ರಥಮ ಬಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು. ಕನ್ನಡ ಬಳಸುವುದೇ ಅತ್ಯಂತ ಅವಮಾನಕರ ವಾದದ್ದು ಎಂಬ ಭಾವನೆಯನ್ನು ಇಲ್ಲಿ ವಿದ್ಯಾರ್ಥಿಗಳಲ್ಲಿ ಬಿತ್ತಲಾಗುತ್ತದೆ. ಹಾಗಾಗಿ ತರಗತಿಗಳಲ್ಲಿ ಶಾಲೆಯ ಆವರಣದಲ್ಲಿ ಕನ್ನಡ ಮಾತನಾಡಿದರೆ ದಂಡ.

ಈ ವಂತಿಗೆ ವಸೂಲಿಗೆ ಕೊನೆ ಇದೆಯೆ?:

1983 ಶಿಕ್ಷಣ ಕಾಯ್ದೆಯ ಮೂಲಕ ಖಾಸಗಿ ಶಾಲೆಗಳಲ್ಲಿ ವಂತಿಗೆ ಪಡೆಯುವು ದನ್ನು ನಿಷೇಧಿಸಲಾಗಿದ್ದರೂ ಈ ಕಾಯಿದೆಗೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ. ಯಾವ ಹಿಂಜರಿಕೆಯು ಇಲ್ಲದೆ ಬಹಿರಂಗವಾಗಿ ಎಲ್ಲಾ ಶಾಲೆಗಳಲ್ಲಿ ವಂತಿಗೆ ವಸೂಲಿ ಮಾಡಲಾಗುತ್ತಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾದ ಸಾರ್ವಜನಿಕ ಶಿಕ್ಷಣ ಇಲಾಖೆ ಕುರುಡನಂತೆ ವರ್ತಿಸುತ್ತಿದೆ. ಪ್ರಾಥಮಿಕ ಶಿಕ್ಷಣ ಸಚಿವ ಗೋವಿಂದೇ ಗೌಡರ ಮೊಮ್ಮಗು ಓದುತ್ತಿರುವ ಅರಬಿಂದೂ ಶಾಲೆಯಲ್ಲಿಯೇ ಅಪಾರ ಮೊತ್ತದ ವಂತಿಗೆ ವಸೂಲಿ ಮಾಡುತ್ತಿರುವುದು ಅವರ ಗಮನಕ್ಕೆ ಬಂದಿಲ್ಲವೆ? ಪೋಷಕರು ದಾಖಲೆ ಸಮೇತ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಹಾಗೂ ಅಧಿಕಾರಿಗಳು ಹೇಳುತ್ತಾರೆ. ಆದರೆ ದಾಖಲೆ ತರುವುದು ಎಲ್ಲಿಂದ? ಯಾವ ಶಾಲೆಗಳವರೂ ತಾವು ಪಡೆದ ವಂತಿಗೆಗೆ ರಸೀದಿ ನೀಡುವುದಿಲ್ಲ. ಪೋಷಕರು ವಿದ್ಯಾರ್ಥಿ ಸಂಘಟನೆಗಳು ಸೇರಿ ಈ ಡೊನೇಷನ್ ಪಿಡುಗಿನ ವಿರುದ್ಧ ಪ್ರಬಲ ಹೋರಾಟವೊಂದನ್ನು ರೂಪಿಸುವುದೊಂದೇ ದಾರಿ. ಆದರೆ ಇಲ್ಲಿಯವರೆಗೆ ಅಂತಹ ಹೋರಾಟ ನಡೆದಿಲ್ಲ. ಕಳೆದ ವರ್ಷ ಎಸ್.ಎಫ್.ಐ. ಕೆಲವು ಶಾಲೆಗಳ ಮುಂದೆ ಪ್ರತಿಭಟನಾ ಧರಣಿ ನಡೆಸಿದ್ದು ಬಿಟ್ಟರೆ ವಂತಿಗೆಯನ್ನು ಮುಕ್ಕುವ ಈ ಖಾಸಗಿ ಶಾಲೆಗಳೆಂಬ ಬಕಾಸುರರಿಗೆ ಗದಾ ಪ್ರಹಾರ ಮಾಡುವಂತ ಹೋರಾಟ ನಡೆದಿಲ್ಲ. ಇದಕ್ಕೆ ಮುಖ್ಯ ಕಾರಣ ಪೋಷಕರು ವ್ಯವಸ್ಥೆಯ ಜೊತೆ ರಾಜಿ ಮಾಡಿಕೊಂಡು ಈ ಬಕಾಸು ರರಿಗೆ ವಂತಿಗೆಯೆಂಬ ಮೃಷ್ಟಾನವನ್ನು ಬಡಿಸಿಕೊಂಡು ಬರುತ್ತಿರುವುದೇ ಆಗಿದೆ.. ಕೆಲವು ಶ್ರೀಮಂತ ಪೋಷಕರಿಗೆ ಇದು ಪ್ರತಿಷ್ಟೆಯ ವಿಷಯವು ಆಗಿದೆ. ಮುಂದಿನ ದಿನಗಳಲ್ಲಿ ವ್ಯಾಪಕ ಹೋರಾಟವೊಂದನ್ನು ರೂಪಿಸದಿದ್ದಲ್ಲಿ ಈ ವಂತಿಗೆ ಬಕಾಸುರ ಸಮಾಜದ ಸ್ವಾಸ್ಥ್ಯ ಕಬಳಿಸುವುದಲ್ಲಿ ಸಂದೇಹವಿಲ್ಲ ಇದಕ್ಕೆ ತಡೆಯೊಡ್ಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

[illegible]

...ಸೆನೆಟ್ ಸದಸ್ಯೆಯಾಗಿ

ಪುಟ 7 ರಿಂದ

ಸಾಮಾನ್ಯವಾಗಿ ನಮ್ಮ ಸೆನೆಟ್ ಸಭೆಯು ಶಾಂತಿಯುತವಾಗಿ ನಡೆದಿದ್ದೇ ಇಲ್ಲಾ. ಗದ್ದಲವೇ ಗದ್ದಲ, ಅನಗತ್ಯ ಆವೇಶ, ಕೋಪ, ಕೂಗಾಟಗಳ ಮಧ್ಯೆ ಏನಾರ ಮಾಡಿ ಮಾತನಾಡಲೇ ಬೇಕೆಂದು ಕೊಂಡರೆ ಮಾತ್ರ ಮಾತನಾಡಬಹುದು ಇಲ್ಲದಿದ್ದರೆ ಇಲ್ಲ. ಪತ್ರಕರ್ತರು ಇರುವವರೆಗೂ ಈ ಅಬ್ಬರ ನಂತರ ಸದ್ದೇ ಇರುವುದಿಲ್ಲ. ಊಟದ ನಂತರ ಕೆಲವು ಸದಸ್ಯರಂತೂ ಜಾಗ ಖಾಲಿ. ನಂತರದ ಸಭೆಯಲ್ಲಿ ನಾವಿದ್ದರೆ "ಪ್ರೊಫೆಸರ್ಸ್ ವಯಸ್ಸಾದವರ ಚರ್ಚೆ ಅಂತಿರ್‍ತಾರೆ" ಸೆನೆಟ್ ಸದಸ್ಯಳಾಗಿ ನಾನು ಕಾಲೇಜುಗಳ (ಸ್ಥಳೀಯ ವಿಚಾರಣಾ ಸಮಿತಿ ಎಲ್.ಐ.ಸಿ) ತನಿಖಾ ತಂಡವನ್ನು ಪ್ರತಿನಿಧಿಸುತ್ತಿದ್ದೆ. ಮೊದಲ ವರ್ಷ ಕೋಲಾರ ಜಿಲ್ಲೆಯ ಎಲ್ಲಾ ಬಿ.ಎ., ಬಿ.ಎಸ್.ಸಿ., ಬಿ.ಕಾಂ, ಕಾಲೇಜುಗಳಿಗೆ ಹೋದೆವು. ತಂಡದಲ್ಲಿ ನಾನೇ ಕಿರಿಯಳು, ಇಬ್ಬರು ಸೆನೆಟ್ ಸದಸ್ಯರು, ಇಬ್ಬರು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ಇಬ್ಬರು ಸಿಂಡಿಕೇಟ್ ಸದಸ್ಯರು ಕಾಲೇಜುಗಳಿಗೆ ಭೇಟಿ ಮಾಡಿ ಪ್ರಾಂಶುಪಾಲರು/ ಆಡಳಿತ ಮಂಡಳಿ ನೀಡುವ ವರದಿ ಅಲ್ಲದೆ ನಾನು ಸೀನಿಯರ್ ಸೆನೆಟ್ ಮತ್ತು ಅಕಾಡಮಿಕ್ ಸದಸ್ಯರು ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು ಖುದ್ದು ಭೇಟಿ ಮಾಡಿ ಕಾಲೇಜಿನ ಬಗ್ಗೆ ವಿಚಾರಿಸುತ್ತಿದ್ದೆವು. ಸಹಿಸದ ಇತರ ಸದಸ್ಯರು ಏನಮ್ಮ ನೀನು ಇಲ್ಲಿ ತನಿಖೆ ಮಾಡೋದು ಅಂದ್ರೆ ಏನು? ಈ ಕಾಲೇಜನ್ನು ಹುಟ್ಟಿದಾಗಿನಿಂದಾ ನೋಡ್ತಿದ್ದೀವಿ ಎಂದು ಆಡಳಿತ ಮಂಡಳಿಯ ಬೆಂಬಲಕ್ಕೆ ನಿಂತು ನಮ್ಮನ್ನೇ ಪರಕೀಯರನ್ನಾಗಿ ಮಾಡ್ತಿದ್ರು. ಇವರ ಮಧ್ಯೆ ಇನ್ನು 40 ಕಾಲೇಜ್ ತನಿಖೆ ಮಾಡಬೇಕಲ್ಲಾ ಎಂದೆನಿಸಿದರೂ. ಅವರನ್ನ ಲೆಕ್ಕಿಸದೇ ನಮ್ಮ ವಿಧಾನವನ್ನು ಬಳಿಸಿ ಕೆಲವು ನೈಜ ವಿಷಯಗಳತ್ತ ವಿಶ್ವವಿದ್ಯಾಲಯದ ಗಮನ ಸೆಳೆದೆ. ಹೆಣ್ಣುಮಕ್ಕಳನ್ನು ಎಲ್.ಐ.ಸಿ. ಗಳಿಗೆ ಕಳುಹಿಸುತ್ತಿರುವುದು ಇತ್ತೀಚಿನ ವರ್ಷಗಳಿಂದ ಮಾತ್ರವಾಗಿದ್ದು ತಂಡದ ಸದಸ್ಯರಿಗೆ ನುಂಗಲಾರದ ತುತ್ತಾಗುತ್ತಿದ್ದೆವು. ಎಲ್.ಐ.ಸಿ. ಓಡಾಟಕ್ಕೆಂದು ವಿಶ್ವ ವಿದ್ಯಾಲಯದಿಂದ ಹಣ ಮಂಜೂರು ಮಾಡುತ್ತಿದ್ದು ಅದರ ಸಂಪೂರ್ಣ ಬಳಕೆ ಆಗುತ್ತಿರಲಿಲ್ಲ. ಈ ಹೆಣ್ಣು ಮಕ್ಕಳನ್ನಾ ಯಾಕಾರ ಕಳಿಸ್ತಾರೊ drinks ತಗೊಳ್ಳಕೇ ಆಗೊಲ್ಲಾ ಎಂದು ಕೆಲವರು ಗೊಣಗಿ ಕೊಂಡದ್ದೂ ಉಂಟು.

ಎರಡನೆ ವರ್ಷ ತಂಡದ ಅಧ್ಯಕ್ಷರಿಂದ ಹಿಡಿದು ಸದಸ್ಯರೆಲ್ಲರೂ ಒಮ್ಮತ ಅಭಿಪ್ರಾಯ ಉಳ್ಳವರಾಗಿದ್ದು ಕೆಲವಾರು ಖಾಸಗಿ ಬಿ.ಎಡ್. ಕಳಪೆ ಕಾಲೇಜುಗಳನ್ನು ರದ್ದು ಮಾಡುವಂತಾ ತೀರ್ಮಾನವನ್ನು ಕೈಗೊಂಡೆವು. ಮತ್ತೆ ಇದೆಯಲ್ಲಾ ಸಿಂಡಿಕೇಟ್ one man Committe ಕಳುಹಿಸಿ ಅನುಮೋದನೆ ನೀಡಿದರು ಸೆನೆಟ್ ಅಕಾಡಮಿಕ್ ಕೌನ್ಸಿಲ್ ನಿರ್ಧಾರಗಳನ್ನು ತಲೆಕೆಳಗು ಮಾಡುವ ಸಿಂಡಿಕೇಟ್ ಮತ್ತು ಅದರ ಅಧಿಕಾರಗಳು ಬಹಳವೇಳೆ ದುರುಪಯೋಗವಾಗುತ್ತಿರುತ್ತದೆ.

ಇವೆಲ್ಲದರ ನಡುವೆಯೂ ಕೆಲವು ನಿರ್ಣಯಗಳನ್ನು ಜಾರಿಮಾಡಿ ಹಲವು ಪ್ರಶ್ನೆಗಳನ್ನು ಎತ್ತಲು ಸಾಧ್ಯವಾದದ್ದು ಸಂಘಟನೆಯ ಹಿನ್ನೆಲೆಯಿಂದ ಮಾತ್ರ.

1. ಅದರಲ್ಲೂ ಮುಖ್ಯವಾಗಿ ಅಂಚೆತೆರಪಿನ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಗ್ರಂಥಾಲಯ,
2. ವಿದ್ಯಾರ್ಥಿಗಳಿಗೆ ಸೆನೆಟ್‌ನಲ್ಲಿ ಪ್ರಾತಿನಿಧ್ಯತರಲು ತೀರ್ಮಾನವಾದದ್ದು.
3. ಕೋಲಾರ ಜಿಲ್ಲೆಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪುರುಷ ಮತ್ತು ಮಹಿಳೆಯರ ಹಾಸ್ಟೆಲ್ಸ್ ಆದದ್ದು.
4. ಸ್ನಾತಕೋತ್ತರ ಕೇಂದ್ರದ 4 ವಿಭಾಗಗಳ ಗ್ರಂಥಾಲಯಗಳಿಗೆ 80,000 ಹಣ ಮಂಜೂರು ಮಾಡಿಸಿದ್ದು,
4. ಸ್ನಾತಕೊತ್ತರ ಕೇಂದ್ರಗಳಲ್ಲಿ ಸೂಪರ್ ನ್ಯೂಮರಿ Seats ಗೆ ಒತ್ತಾಯಿಸಿ ಜಾರಿ ಮಾಡಿಸಿದ್ದು,
5. ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಜೆರಾಕ್ಸ್ ಕಾಫಿ ವಿದ್ಯಾರ್ಥಿಗಳಿಗೆ ಸಿಗುವ ಹಾಗೆ ಒತ್ತಾಯಿಸಿ ಗೆದ್ದದ್ದು.
6. ಪಕ್ಕಾ ಖಾಸಗಿ ಲಾಭಿಯ ಮೂಲಕ ವಿದ್ಯಾರ್ಥಿ ಪೋಷಕರನ್ನು ಲೂಟಿ ಮಾಡುತ್ತಿದ್ದ ಕೃಪಾನಿಧಿ ಕಾಲೇಜಿನ ಹೋರಾಟ ಗೆಲ್ಲಲು ಸಾಧ್ಯವಾದದ್ದು.
7. ಜ್ಞಾನಭಾರತಿ ಮಹಿಳಾ ಹಾಸ್ಟೆಲ್‌ಗೆ ಮೂಲಭೂತ ಸೌಲಭ್ಯಗಳನ್ನು ಒತ್ತಾಯಿಸಿ ಯಶಸ್ವಿಯಾದದ್ದು.
8. ಪರೀಕ್ಷಾ ವಿಭಾಗದಲ್ಲಿ ಮೌಲ್ಯಮಾಪನದಲ್ಲಿ ಅಂಕಪಟ್ಟಿ ಗಳಲ್ಲಾದ ವಿ.ವಿ. ತಪ್ಪುಗಳಿಗೆ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುತ್ತಿದ್ದುದನ್ನು ಪ್ರಶ್ನಿಸಿದ್ದರಿಂದಾಗಿ ವಿ.ವಿ. ತಪ್ಪುಗಳಿದ್ದ ಪಕ್ಷದಲ್ಲಿ ಭಾಗಶ: ಹಣ ವಾಪಸ್ಸು ಮಾಡಲು ಸೆನೆಟ್ ಒಪ್ಪಿಗೆ ಸೂಚಿಸಿದ್ದು, ಆದರೆ ವಿಶ್ವವಿದ್ಯಾಲಯದ ಬಗ್ಗೆ ಅಲ್ಲಿಯ ವಿಚಾರಗಳ ಬಗ್ಗೆ ಜನರ ಮದ್ಯೆ ಹೆಚ್ಚು ಚರ್ಚೆ ನಡೆಯುವುದೇ ಇಲ್ಲ. ಇಂದಿಗೂ ಪದವೀಧರರು ಮತ ಚಲಾಯಿಸುವುದು ಬಿಟ್ಟರೆ ವಿ.ವಿ.ಯ ಯಾವುದೇ ವಿಚಾರದಲ್ಲಿ ಭಾಗವಹಿಸದಂತ ವ್ಯವಸ್ಥೆ "ನಿಮ್ಮನ್ನು ಗೆಲ್ಲಿದ್ದೀವಿ ಹೇಗಾದರೂ ಪಾಸ್ ಮಾಡಿಸಿ, ಕೆಲಸ ಕೊಡಿಸಿ, ಕಾಲೇಜುಗಳಲ್ಲಿ Seat ಕೊಡಿಸಿ, ಎಷ್ಟು ಹಣ ಮಾಡಿದ್ರಿ" ಎಂದೇ ಮಾತು ಶುರು ಮಾಡ್ತಿರ್‍ತಾರೆ. ಇವೆಲ್ಲಾ ಮಾಡಿದ್ರೇನೆ ಸೆನೆಟ್ ಮೆಂಬರ್ ಎಂಬುದು ಬಹಳ ಮಂದಿಯ ಭಾವನೆ.

ಕಳೆದ ಸೆನೆಟ್ ಚುನಾವಣೆಯಲ್ಲಿ ನನ್ನ ಪರ ಸಾಕಷ್ಟು ಕೆಲಸ ಮಾಡಿದಂತ ವಿದ್ಯಾರ್ಥಿ ಈಗ ಹೇಳ್ತಾನೆ ನಿಮಗೆ Support ಮಾಡುವ ಬದಲು ಗೋಪಾಲಕಷ್ಣನಿಗ ಸಪೋರ್ಟ್ ಮಾಡಿದ್ರೆ ನನ್ನ ಮೂರು ವರ್ಷದ English subjects ಆದ್ರೂ pass ಆಗ್ತಿತ್ತು. ಅವರ ತಾಯಿ ಅಂತಾರೆ ಏನಮ್ಮ ಒಂದು ಸಹಿ ಲಕ್ಷಗಳು ಬೆಲೆ ಬಾಳ್ತಾವಂತೆ ನೀನು ನೋಡಿದ್ರೆ ಹಿಂಗಿದ್ದೀ ಎಂದು ಪದೇ ಪದೇ ಹೇಳ್ತಾನೆ ಇರ್‍ತಾರೆ. ನಾನು ಕುತೂಹಲದಿಂದ ಹೇಳಿದೆ ಅಮ್ಮ ಎಷ್ಟಾದ್ರು Sign ಹಾಕ್ತಿನಿ Sign ಗೆ ಹತ್ತುರೂಪಾಯಿ ಕೊಡಲಿ ಸಾಕು ಎಂದು. ಇಷ್ಟಾದರೂ ಇತರ ಸೆನೆಟ್ ಸದಸ್ಯರಂತೆಯೇ ನನ್ನ ಕುರಿತು ಹೇಳ್ತಿರ್‍ತಾರೆ ಲಕ್ಷ್ಮಿ ಎಲ್ಲಾ ಕೂಡಿಡ್ತಾ ಇದ್ದಾರಪ್ಪಾ. ಬೆಂಗಳೂರಿನಲ್ಲಿ ಸೈಟ್ ತಗೊಂಡ್ರಂತೆ, ಹೋರಾಟಗಳಲ್ಲಿ ರಾಜಿ ಯಾಗ್ತಾರಂತೆ ಎಂದು. ಮತ್ತೆ ಕೆಲವರು ಕೇಳ್ತಾರೆ ಏನು ಮೇಡಂ ನೀವು ಸೆನೆಟ್ ಮೆಂಬರ್‌ಗೆ ಕೆ.ಪಿ.ಎಸ್.ಸಿ. ಕಾಲ್ ಮಾಡ್ಸಿ ಉದ್ಯೋಗಗಳ ಕೊಡಿಸಿ ಹಣ ಸಂಪಾದಿಸಿ ನಮಗೂ ಸಹಾಯ ಮಾಡಿ. ನೀವು ಹಣಾನೂ ತಗೋಳಲ್ಲ, ಈ ಕೆಲ್ಸಾನೂ ಮಾಡಲ್ಲ ಸುಮ್ನೆ ಯಾಕೆ Election ಗೆ ನಿಲ್ತೀರಿ ಎನ್ನುವಾಗ ಮೊದ ಮೊದಲು ತಲೆ ಸಿಡಿದಂತಾಗಿ Election ನ್ನೂ ಬೇಡ ಈ ಮಾತುಗಳೂ ಬೇಡ ಇಂಥಾ ಜನರಿಗಾಗಿ ನಾನು ಕೆಲ್ಸ ಮಾಡಬೇಕೆ ಎಂದೆನಿಸಿತ್ತು.

ಒಳ್ಳೆಯದನ್ನು ಒಳ್ಳೆಯದು ಕೆಟ್ಟದ್ದನ್ನು ಕೆಟ್ಟದ್ದು ಎಂದು ಗುರುತಿಸ ಬೇಕಾದಂತ ವಿದ್ಯಾವಂತ ವಿಚಾರವಂತ ಮನಸುಗಳೇ ದೃಷ್ಟಿಯನ್ನು ಕಳಕೊಂಡ್ರೆ ವಿಶ್ವವಿದ್ಯಾಲಯದಲ್ಲಿ ಮತ್ಯಾರಿಂದ ಪ್ರಗತಿಪರ ಬದಲಾವಣೆ ನಿರೀಕ್ಷಿಸಬೇಕೆಂದೆನಿಸಿದರೂ ಆ ವ್ಯವಸ್ಥೆಯ ಬದಲಾವಣೆಯ ಪ್ರಕ್ರಿಯೆಯಲ್ಲಿ ನಾವು ಹೆಚ್ಚು ತೊಡಗಿಸಿಕೊಂಡು ನಿರಂತರತೆಯನ್ನು ಕಾಪಾಡಿಕೊಂಡಾಗ ಮಾತ್ರ ಬದಲಾವಣೆಯನ್ನು ಕಾಣಬಹುದೆಂಬ ಸಂಘಟನಾ ವಿಶ್ವಾಸವೇ ನನ್ನ ನಿಲುವಿಗೆ ಬಹು ಮುಖ್ಯ ಕಾರಣವಾಗಿದೆ.

ಇಂಡೋನೇಶ್ಯಾದ ಚುನಾವಣೆಗಳು ಏಕೆ ಮಹತ್ವದ್ದು?

ಇಂಡೋನೇಶ್ಯಾ ಮತ್ತೆ ಸುದ್ದಿಯಲ್ಲಿದೆ. ಇನ್ನು ಮುಂದಿನ ಕೆಲವು ವಾರಗಳ ಸುದ್ದಿಯಲ್ಲಿರುತ್ತದೆ. ಹಾಗೆ ನೋಡಿದರೆ ಕಳೆದ ಎರಡು ವರ್ಷಗಳಿಂದ ಇಂಡೋನೇಶ್ಯಾ ಆಗಾಗ ಸುದ್ದಿಯಲ್ಲಿತ್ತು. ಒಂದು ವರ್ಷದ ಹಿಂದೆ ಕೊಲೆಗಡುಕ ಸುಹಾರ್ತೋ ಜನಾಂದೋಲನದಲ್ಲಿ ಕೆಲವೇ ದಿನಗಳಲ್ಲಿ ಕೊಚ್ಚಿಹೋಗಿದ್ದ. ಆದರ ಹಿಂದಿನ ಒಂದು ವರ್ಷ, ಮತ್ತಿನ ಒಂದು ವರ್ಷ ಇಂಡೋನೇಶ್ಯಾ ಮಾತ್ರವಲ್ಲ ಜಗತ್ತಿನ ಚರಿತ್ರೆಯಲ್ಲೇ ಹೊಸ ಅಧ್ಯಾಯ ಬರೆಯಲಿದೆ.

ಜಗತ್ತಿನ ನಾಲ್ಕನೇ ಅತಿ ಹೆಚ್ಚಿನ ಜನಸಂಖ್ಯೆಯ ದೇಶವಾದ ಇಂಡೋನೇಶ್ಯಾದಲ್ಲಿ 33 ವರ್ಷಗಳ ಸರ್ವಾಧಿಕಾರದ ನಂತರ ಬೆಳಕು ಕಂಡಿದೆ. ಬಹು-ಪಕ್ಷೀಯ ಚುನಾವಣೆ ನಡೆಯಲಿದೆ. ಕಳೆದ ಎರಡು ವರ್ಷಗಳಲ್ಲಿ ಜನಶಕ್ತಿ ತಂದ ಭಾರೀ ಪ್ರಜಾಸತ್ತಾತ್ಮಕ ಬದಲಾವಣೆಗಳನ್ನು ಮುಂದಿನ ಎತ್ತರದ ಹಂತಕ್ಕೆ ತೆಗೆದುಕೊಂಡು ಹೋಗುತ್ತದೋ ಎಂದು ಜಗತ್ತಿನ ಜನ ಕುತೂಹಲ, ಆಶಾಭಾವನೆಯಿಂದ ನೋಡುತ್ತಿದ್ದಾರೆ. ಇಂಡೋನೇಶ್ಯಾದ ಈ ಚುನಾವಣೆಗಳು ಏಕೆ ಈ ಮಹತ್ವ ಪಡೆದಿದೆ? ಎಂದು ವಿವರಿಸುತ್ತದೆ ಈ ಲೇಖನ. ಆ ದೇಶದ ಅರ್ಧ ಶತಮಾನದ ಸ್ವತಂತ್ರ ಚರಿತ್ರೆಯ ಸ್ಥೂಲ ಅವಲೋಕನದೊಂದಿಗೆ ಕಳೆದ ಎರಡು ವರ್ಷಗಳ ಜನಾಂದೋಲನದ ಮಹತ್ವದ ಪರಿಚಯ ಮಾಡುತ್ತದೆ. ಮುಂದಿನ ವಾರದಲ್ಲಿ ಇನ್ನೊಂದು ಲೇಖನ ಈಗಿನ ಚುನಾವಣಾ ಹೋರಾಟದ ಚಿತ್ರಣ ನೀಡುತ್ತದೆ - ಅದರಲ್ಲಿ ಭಾಗವಹಿಸುತ್ತಿರುವ ಪಕ್ಷಗಳು, ವ್ಯಕ್ತಿಗಳು, ಚುನಾವಣಾ ವಿಷಯಗಳ ಬಗ್ಗೆ.

ಮೇ 21, 1999. ಸುಹಾರ್ತೋ-ಇಂಡೋನೇಶ್ಯಾವನ್ನು ಮೂರು ದಶಕಗಳಿಗೂ ಹೆಚ್ಚು ಕಾಲ ಆಳಿದ ಮಿಲಿಟರಿ ಸರ್ವಾಧಿಕಾರಿ, ಜನಾಂದೋಲನದ ಪ್ರವಾಹದಲ್ಲಿ ಬಿದ್ದು ಹೋದ ಮೊದಲನೇ ವಾರ್ಷಿಕ. ಆ ದಿನ ಇತ್ತೀಚಿನ ತಿಂಗಳುಗಳಲ್ಲಿ ಅತ್ಯಂತ ತೀವ್ರ ದಂಗೆ ನಡೆಯಿತು. ಸಾವಿರಾರು ಜನ ಸುಹಾರ್ತೋ ಮನೆ ಪಾರ್ಲಿಮೆಂಟು ಮತ್ತು ಪ್ರಸ್ತುತ ಅಧ್ಯಕ್ಷ. ಹಬೀಬಿಯವರ ಮನೆಗೆ ಮುತ್ತಿಗೆ ಹಾಕಿದರು. ಸುಹಾರ್ತೋನನ್ನು ಬಂಧಿಸಿ ವಿಚಾರಣೆಗೊಳಪಡಿಸುವ, ಹಬೀಬಿ ರಾಜೀನಾಮೆಗೆ ಒತ್ತಾಯದ ಘೋಷಣೆಗಳು ಕೇಳಿಬಂದವು. ವಿಶೇಷ ಪೋಲೀಸ್ ಪಡೆ ಜನ ಈ ಮನೆಯ ಹತ್ತಿರ ಹೋಗದಂತೆ ಅಶ್ರುವಾಯು, ಹುಸಿಗುಂಡು ಹಾರಿಸುತ್ತಾ ಪ್ರಯತ್ನಿಸುತ್ತಿದ್ದರು. ಆ ದಿನದ ರಾಷ್ಟ್ರೀಯ ದೂರದರ್ಶನ ಕಾರ್ಯಕ್ರಮವೊಂದರಲ್ಲಿ ಟೈಂ ಪತ್ರಿಕೆಯಲ್ಲಿ ಸುಹಾರ್ತೋ ವಿದೇಶಿ ಬ್ಯಾಂಕುಗಳಲ್ಲಿ 15 ಶತಕೋಟಿ ಡಾಲರುಗಳನ್ನು ಇಟ್ಟಿದ್ದಾನೆ ಎಂಬ ಲೇಖನವೊಂದನ್ನು ಟೀಕಿಸಿದ್ದ. ನನ್ನ ಹೆಸರಲ್ಲಿ ಯಾರೋ ಅಲ್ಲಿ ಇಟ್ಟಿರಬೇಕು ಎಂಬ ಕೆಟ್ಟ ಜೋಕು ಮಾಡಿದ್ದ. ಅವರ ವಿರುದ್ಧ ಕೋರ್ಟಿಗೆ ಹೋಗುತ್ತೇನೆ ಎಂದಿದ್ದ, ಇಂತಹ ಸರ್ವಾಧಿಕಾರಿಯನ್ನು ಶಿಕ್ಷೆಗೊಳಪಡಿಸುವ ಬದಲು, ಈತ ಟಿ.ವಿ.ಯಲ್ಲಿ ಜೋಕು ಮಾಡಿಕೊಂಡು ತಿರುಗುತ್ತಿರುವುದನ್ನು ಕಂಡು ಜನ ರೊಚ್ಚಿಗೆದ್ದರು.

ಎರಡು ದಿನಗಳ ನಂತರ ಸುಮಾರು ನಾಲ್ಕು ದಶಕಗಳ ನಂತರ ಈ ದೇಶದಲ್ಲಿ ನಡೆಯಲಿರುವ ಚುನಾವಣೆಗಾಗಿ ಮೂರು ವಾರಗಳ ಚುನಾವಣಾ ಪ್ರಚಾರ ಪ್ರಾರಂಭವಾಯಿತು. ಇಲ್ಲೂ ಜನ ತಮ್ಮ ಸಿಟ್ಟು ಪ್ರದರ್ಶಿಸಿದರು. ಸುಹಾರ್ತೋ -ಗ್ಯಾಂಗ್‌ನ ಮಿಲಿಟರಿ ಸರ್ವಾಧಿಕಾರಿಗಳ ಪಕ್ಷ - ಆಳುವ ಪಕ್ಷ ಗೋಲ್ಕರ್‌ನ ಚುನಾವಣಾ ರ್‍ಯಾಲಿಗೆ ಸಾವಿರದಷ್ಟೇ ಜನ. ಈಗಿನ ಅಧ್ಯಕ್ಷ ಹಬೀಬಿ ವಿರುದ್ಧ ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿಯಾಗಿ ಹೊಮ್ಮುತ್ತಿರುವ ಇಂಡೋನೇಶ್ಯಾದ ಸ್ಥಾಪಕ ಅಧ್ಯಕ್ಷ ಸುಕಾರ್ನೊ ಪುತ್ರಿ ಮೇಘವತಿ ಯ ಪಕ್ಷದ ರ್‍ಯಾಲಿಗೆ ಲಕ್ಷಕೂ ಹೆಚ್ಚು ಜನ ಸೇರಿದ್ದರು. ಅವರ ಪಕ್ಷದ ಬಾವುಟ ಕೆಂಬಣ್ಣದ್ದು. ಜಕಾರ್ತಾ ಕೆಂಪು ಬಾವುಟ, ಟೀ-ಶರ್ಟ್, ಬ್ಯಾನರುಗಳಿಂದ ತುಂಬಿಹೋಗಿತ್ತು. ಮುಂದಿನ ಮೂರು ವಾರಗಳಲ್ಲಿ ಇಂಡೋನೇಶ್ಯಾ ಅಭೂತಪೂರ್ವ ಪ್ರಜಾಸತ್ತಾತ್ಮಕ ಪ್ರಯೋಗದಲ್ಲಿ ತೊಡಗಲಿದೆ.

ಹಿನ್ನೆಲೆ

ಇಂಡೋನೇಶ್ಯಾದ ಕಳೆದ ಅರ್ಧ ಶತಕದ ಚರಿತ್ರೆ ತಿಳಿದುಕೊಳ್ಳದೆ ಈ ಚುನಾವಣೆಯ ಮಹತ್ವ ಅರಿತುಕೊಳ್ಳುವುದು ಕಷ್ಟ. (ಕಳೆದ 50 ವರ್ಷಗಳಲ್ಲಿ ಇಂಡೋನೇಶ್ಯಾ ಹಾದು ಬಂದ ಮುಖ್ಯ ರಾಜಕೀಯ ಘಟ್ಟಗಳನ್ನು ಬಾಕ್ಸ್‌ನಲ್ಲಿ ಕೊಡಲಾಗಿದೆ) 1945-49 ಸಶಸ್ತ್ರ ಸ್ವಾತಂತ್ರ್ಯ ಹೋರಾಟ, 1949-59 ರವರೆಗೆ ತೀವ್ರವಾದ ಪ್ರಜಾಸತ್ತಾತ್ಮಕ ಹಂತ ದಾಟಿ 1959-65 ರವರೆಗಿನ 'ಮಾರ್ಗದರ್ಶಿತ ಪ್ರಜಾಸತ್ತೆ' ಯ ಹಂತಕ್ಕೆ ತಲುಪಿತು. 1965-66 ರ ಸಿಐಎ ಬೆಂಬಲಿತ ಜನರಲ್ ಸುಹಾರ್ತೋ ನಾಯಕತ್ವದ ಮಿಲಿಟರಿ ಕ್ಷಿಪ್ರಕ್ರಾಂತಿ ಇಂಡೋನೇಶ್ಯಾದ ಚರಿತ್ರೆಯ ಕರಾಳ ಅಧ್ಯಾಯ. ಜಗತ್ತಿನ ಎರಡನೇ ಅತಿ ದೊಡ್ಡ ಮಾರಣಹೋಮ ಎಂದು ಕುಪ್ರಸಿದ್ಧವಾದದ್ದು. (ಎರಡನೇ ಅತಿ ದೊಡ್ಡ ಮಾರಣಹೋಮ -ಬಾಕ್ಸ್ ನೋಡಿ). ಆಮೇಲೆ ಬಂದದ್ದು 1965-1998 ರವರೆಗಿನ 'ಹೊಸ ವ್ಯವಸ್ಥೆ'ಯ ಹೆಸರಿನ ಮಿಲಿಟರಿ ಸರ್ವಾಧಿಕಾರ.


ಮೇಘವತಿ ಪಕ್ಷದ ಮೇಲೆ ಧಾಳಿ

ಕಳೆದ ಒಂದುವರ್ಷದಲ್ಲಿ ಹೊಸ ವ್ಯವಸ್ಥೆ ಯನ್ನು ಕಿತ್ತೊಗೆದು ನಿಜವಾದ ಪ್ರಜಾಪ್ರಭುತ್ವ ಸ್ಥಾಪಿಸಲು ಜನಾಂದೋಲನದ ಅಲೆ. ಕಳೆದ ಒಂದು ವರ್ಷದಲ್ಲಿ ಸುಹಾರ್ತೋ ಹೊಸ ವ್ಯವಸ್ಥೆ ಯನ್ನು ಬಹಳಮಟ್ಟಿಗೆ ಹಿಮ್ಮೆಟ್ಟಿಸಿದ ಈ ಜನಾಂದೋಲನದ ಮೊದಲ ಅಲೆ ಆರಂಭವಾದದ್ದು ಮೂರು ವರ್ಷಗಳ ಹಿಂದೆ. 27 ಜುಲೈ 1996 ರಂದು. ಅಂದು ಮೇಘವತಿ ಅಧ್ಯಕ್ಷೆಯಾಗಿರುವ PDI ಎಂಬ ಪ್ರಮುಖ ವಿರೋಧ ಪಕ್ಷದ ಮೂಲ ಕಛೇರಿಯನ್ನು PDI ನ ಒಂದು ಗುಂಪಿನ ನಾಯಕನ ಜತೆ 800 ಜನ ಗೂಂಡಾಗಳು ಬಂದು ದಾಳಿ ಮಾಡಿ ವಶಪಡಿಸಿಕೊಂಡರು. ಮೇಘವತಿಯ ಬೆಂಬಲಿಗರನ್ನು ಹೊಡೆದೋಡಿಸಿದರು. ಆ ಮೇಲೆ ನಡೆದ ಘರ್ಷಣೆ, ಗಲಭೆಯನ್ನು ಹತ್ತಿಕ್ಕಲು ಸೈನ್ಯ ಗುಂಡು ಹಾರಿಸಿತು. ನೂರಾರು ಜನ ಸತ್ತರು. ಗಾಯಗೊಂಡರು. ಕಾಣೆಯಾದರು, ದಾಂಧಲೆ ನಡೆಸಿ ಗಲಭೆಗೆ ಕಾರಣರಾದ PDI ನ ಆ ನಾಯಕ ಹಾಗೂ ಗುಂಪಿನವರನ್ನು ಬಂಧಿಸುವ ಬದಲು ಮೇಘವತಿಯ ಬೆಂಬಲಿಗರ ಮೇಲೆ ಕೇಸು ಹಾಕಲಾಯಿತು. ಇದ್ಯಾವುದಕ್ಕೂ ಸಂಬಂಧವಿರದ ಎಡಪಕ್ಷವಾದ PDR ನ ಹಲವಾರು, ನಾಯಕರು, ಕಾರ್ಯಕರ್ತರನ್ನು ಬಂಧಿಸಿ ಹಿಂಸಿಸಲಾಯಿತು. ಇವೆಲ್ಲಾ ಆಗಲೇ ಸುಹಾರ್ತೋ ಆಡಳಿತದ ದಬ್ಬಾಳಿಕೆ, ಆರ್ಥಿಕ ಶೋಷಣೆ ದುಸ್ಥಿತಿಗಳಿಂದ ರೋಸಿಹೋಗಿದ್ದ ಜನ ದಂಗೆ ಎದ್ದರು. ಹಲವು ವಾರಗಳ ಕಾಲ ರಾಜಧಾನಿ ಜಕಾರ್ತ ಮಾತ್ರವಲ್ಲ ಇಂಡೋನೇಶ್ಯಾ ಹತ್ತಿ ಉರಿಯಿತು. ಅಸಂಖ್ಯ ಪ್ರದರ್ಶನಗಳು, ಪ್ರತಿಭಟನೆಗಳು ನಡೆದವು. ಇದು ಸುಹಾರ್ತೋ ಮಿಲಿಟರಿ ಸರ್ವಾಧಿಕಾರಿ ಕಿತ್ತೊಗೆಯುವ ಮಹಾನ್ ಜನತಾ ಚಳುವಳಿಯ ಆರಂಭವಾಗಿತ್ತು. ಎರಡು ವರ್ಷಗಳಲ್ಲೇ ಈ ಜನಾಂದೋಲನ ಸುಹಾರ್ತೋ ಹೊಸ ವ್ಯವಸ್ಥೆ ಗೆ ಮರಣಾಂತಿಕ ಏಟುಕೊಟ್ಟಿದೆ.

ಹರಡುತ್ತಿರುವ ಕಾಡ್ಗಿಚ್ಚು

ಸುಹಾರ್ತೋ ಮೇಘವತಿಯ ಪಕ್ಷದ ಮೇಲೆ ಧಾಳಿ ನಡೆಸಿದ್ದು ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು. ಮೇ 97 ರ ಪಾರ್ಲಿಮೆಂಟು ಚುನಾವಣೆಯಲ್ಲಿ ಹಿಂದಿನ ಆರು ಬಾರಿಯಂತೆ ಸುಹಾರ್ತೋ ಗೋಲ್ಕರ್ ಪಕ್ಷ ಶೇಕಡಾ70 ಮತ ಗಳಿಸಿ ಆರಿಸಿ ಬಂತು. ಆದರೆ ಹಿಂದೆಂದೂ ಗೋಲ್ಕರ್ ಪಕ್ಷದ ಗೆಲವು ಇಷ್ಟು ಟೊಳ್ಳು, ಜನರ ಕೋಪಕ್ಕೆ ತುತ್ತಾಗಿರಲಿಲ್ಲ. ಹಲವು ವಿರೋಧ ಪಕ್ಷಗಳು ಚುನಾವಣೆ ಬಹಿಷ್ಕರಿಸುವ ಕರೆ ನೀಡಿದವು. ಚುನಾವಣಾ ಕಾಲದಲ್ಲಿ ಬಹಿಷ್ಕಾರದ ಹಂತವಾಗಿ ಬಿಳಿ ಬಾವುಟ ಹಾರಿಸುವುದು ಸಾಮೂಹಿಕ ಚಳುವಳಿಯಾಯಿತು. ವಿಶ್ವವಿದ್ಯಾಲಯ, ಶಾಲಾ ಕಾಲೇಜು, ಕಾರ್ಮಿಕರ, ರೈತರ ಜಂಟಿ ಸಮಿತಿಗಳು ಇಂತಹ ಚಳುವಳಿ ಸಂಘಟಿಸಿದವು. ಆರು ತಿಂಗಳ ಕಾಲ ದೇಶದ ಎರಡು ಪ್ರಮುಖ ದ್ವೀಪಗಳಾದ ಸುಮಾತ್ರಾ, ಕಾಳಿ ಮಂಥನೆಗಳಲ್ಲಿ ಹದಿನೈದು ಲಕ್ಷ ಹೆಕ್ಟೇರ್ ವಿಸ್ತೀರ್ಣದ ಹಸಿರಾದ ಕಾಡುಗಳು ಕಾಡ್ಗಿಚ್ಚಿಗೆ ಸಿಕ್ಕಿ ಹತ್ತಿ ಉರಿದು ಇಂಡೋನೇಶ್ಯಾ ಮತ್ತು ನೆರೆಯ ಪ್ರಾಂತ್ಯಗಳಲ್ಲಿ ಮಬ್ಬು ಕವಿದವು. ಈ ಕಾಡ್ಗಿಚ್ಚಿಗೆ ಕಾರಣವಾದ ಮರಮಟ್ಟಿನ ದೊಡ್ಡ ಕಂಪನಿ ಸುಹಾರ್ತೋನ ಆಪ್ತಮಿತ್ರ ಬಾಬ್ ಹಸನ್ ಎಂಬುವನದ್ದೇ! ಈ ವ್ಯಾಪಾರದಲ್ಲಿ ಸುಹೋರ್ತೋ ಮಗ ಒಬ್ಬ ಸಹಭಾಗಿ. ಆದ್ದರಿಂದ ಅವರ ಮೇಲೆ ಯಾವುದೇ ಕ್ರಮವಿಲ್ಲ. ಇದರಿಂದ ನೊಂದ ಲಕ್ಷಾಂತರ ಜನರಿಗೆ ಯಾವುದೇ ಪರಿಹಾರ

ಪುಟ 11ಕ್ಕೆ



ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿ ಮೇಘವತಿಯ PDI ಪಕ್ಷದ ಚಿಹ್ನೆ ರ್‍ಯಾಲಿಯಲ್ಲಿ

ಸ್ವತಂತ್ರ ಇಂಡೋನೇಶ್ಯಾದ ನಡೆದು ಬಂದ ದಾರಿ

1942-49 ಸ್ವಾತಂತ್ರ್ಯಕ್ಕಾಗಿ ಸಶಸ್ತ್ರ ಹೋರಾಟ

ಮುನ್ನೂರು ವರ್ಷಗಳ ಡಚ್ ವಸಾಹತುವಾಗಿದ್ದ ಇಂಡೋನೇಶ್ಯಾ ಸ್ವತಂತ್ರ ದೇಶವೆಂದು ಘೋಷಿಸಿಕೊಂಡಿದ್ದು 1945 ಆಗಸ್ಟ್ 17 ರಂದು. ಜಪಾನು ಶರಣಾಗತವಾದ ಕೆಲವೇ ದಿನಗಳಲ್ಲಿ. 1942 ರಲ್ಲಿ ಜಪಾನು ಈ ದೇಶವನ್ನು ಆಕ್ರಮಿಸಿಕೊಂಡು ಡಚ್ಚರನ್ನು ಹೊರಗಟ್ಟಿತ್ತು. ಬಂಧನದಲ್ಲಿದ್ದ ಸ್ವಾತಂತ್ರ್ಯ ಚಳುವಳಿಗಳ ನಾಯಕರು (ಸುಕಾರ್ನೋ ಮುಂತಾದವರನ್ನು) ಬಿಡುಗಡೆ ಮಾಡಿದರು. ಸುಕಾರ್ನೋರ PNI ಪಕ್ಷ ಮತ್ತು ಕಮ್ಯುನಿಸ್ಟ್ ಪಕ್ಷ ರಾಷ್ಟ್ರೀಯ ವಿಮೋಚನೆಗೆ ರಾಷ್ಟ್ರೀಯ ಸೈನ್ಯ ಕಟ್ಟಿದರು.



ಸುಕಾರ್ನೋ

ಜಪಾನು ಶರಣಾಗತವಾದಂತೆ ದೇಶವನ್ನು ಬ್ರಿಟಿಷ್ ಪಡೆಗಳ ಬೆಂಬಲದಿಂದ ಪುನಃ ಆಕ್ರಮಿಸಿಕೊಂಡ ಡಚ್ ಸೈನ್ಯದ ಜತೆ ಗೆರಿಲ್ಲಾ ಯುದ್ಧ ಮುಂದುವರಿಯಿತು. 1949 ರಲ್ಲಿ ಡಚ್ಚರು ಸ್ವಾತಂತ್ರ್ಯ ಒಪ್ಪಿಕೊಂಡು ಕಾಲ್ತೆಗೆಯಬೇಕಾಯಿತು.

1949-1965 ಪ್ರಜಾಸತ್ತಾತ್ಮಕ ಯುಗ

ಸುಕಾರ್ನೋರ ಅಧ್ಯಕ್ಷ ಅವಧಿಯ ಕಾಲದಲ್ಲಿ ಪ್ರಜಾಸತ್ತೆ ಬೆಳೆಯಿತು. ಹಲವು ಪಕ್ಷಗಳು ಪ್ರಬಲವಾದ್ದರಿಂದ ರಾಜಕೀಯ ಅಸ್ಥಿರತೆಗೆ ಎಡೆ ಮಾಡಿಕೊಟ್ಟಿತು. 1949-57 ರ ನಡುವೆ ಆರು ಪ್ರಧಾನ ಮಂತ್ರಿಗಳು, ಮಂತ್ರಿಮಂಡಲಗಳು ಸರಾಸರಿ ಒಂದು ವರ್ಷಮಾತ್ರ ಬಾಳಿದ್ದವು. ಆದರೂ ಇಂಡೋನೇಶ್ಯಾ ಮೂರನೇ ಜಗತ್ತಿನಲ್ಲಿ ಇಂಡಿಯಾದ ನಂತರ ಅತಿದೊಡ್ಡ ಪಾರ್ಲಿಮೆಂಟಿನ ಪ್ರಜಾಸತ್ತೆಯಾಗಿ ಹೊಮ್ಮಿತ್ತು. ದೇಶದ ರೈತರು, ಕಾರ್ಮಿಕರು, ಆದಿವಾಸಿಗಳು ತಮ್ಮ ಹಕ್ಕು ಚಲಾಯಿಸಲು ಸಂಘಟಿತರಾಗಿದ್ದರು. ಭೂಸುಧಾರಣೆ, ಇತ್ಯಾದಿ ಸಮಸ್ಯೆಗಳಿಗೆ ಹೋರಾಡುತ್ತಿದ್ದರು. 1955 ರ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಮುಖ ನಾಲ್ಕು ರಾಜಕೀಯ ಶಕ್ತಿಗಳಲ್ಲಿ ಒಂದಾಗಿ ಹೊಮ್ಮಿತ್ತು. 1959-1965 ರ ವರೆಗೆ ಪಾರ್ಲಿಮೆಂಟಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆ ಬದಲಾಗಿ 'ಮಾರ್ಗದರ್ಶಿತ ಪ್ರಜಾಸತ್ತೆ' ಜಾರಿಗೆ ಬಂದರೂ ಜನರ ಮೂಲಭೂತ ಹಕ್ಕುಗಳಿಗೆ ಯಾವುದೂ ಧಕ್ಕೆ ಇರಲಿಲ್ಲ. 1965 ಅಕ್ಟೋಬರ್ ಕ್ಷಿಪ್ರಕ್ರಾಂತಿ ಇವೆಲ್ಲವನ್ನು ಬದಲಿಸಿತು.

1966-1998 'ಹೊಸ ವ್ಯವಸ್ಥೆ'

1965 ರ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಅಧಿಕಾರಕ್ಕೆ ಬಂದ ಜನರಲ್ ಸುಹಾರ್ತೋ ಸಿಐಎ ಬೆಂಬಲದಿಂದ ಅಧಿಕಾರ ವಹಿಸಿಕೊಂಡ. ಈ ಮಿಲಿಟರಿ ಸರ್ವಾಧಿಕಾರಕ್ಕೆ ಬೇಗನೆ ಪ್ರಜಾಪ್ರಭುತ್ವ ಮುಖವಾಡ ತೊಡಲು 'ಹೊಸ ವ್ಯವಸ್ಥೆ' ಎಂಬ ರಾಜಕೀಯ ವ್ಯವಸ್ಥೆ ತಂದ. 1970 ರಲ್ಲಿ ಮಿಲಿಟರಿಯ ಮೂಗಿನಡಿಯಲ್ಲಿ ನಡೆದ ಚುನಾವಣೆಯಲ್ಲಿ (ಭಾರಿ ಅಕ್ರಮಗಳಿಂದಾಗಿ) ಆತನ ಗೋಲ್ಕರ್ ಪಕ್ಷ ಶೇಕಡಾ 70 ರ ಭಾರಿ ಬಹುಮತ ಗಳಿಸಿತು. ಅಂದಿನಿಂದ ಇಂದಿನವರೆಗೆ ಪ್ರತಿ ಚುನಾವಣೆಯಲ್ಲಿ ಗಳಿಸುತ್ತಾ ಬಂದಿದೆ. ಚುನಾವಣೆಯಿಂದ ಚುನಾವಣೆಗೆ ಅಕ್ರಮ, ಇತರ ಪಕ್ಷಗಳ ಮೇಲೆ ಹಿಂಸಾಚಾರ, ಒತ್ತಡ ಹೆಚ್ಚುತ್ತಾ ಬಂದಿದೆ. 1973 ರಲ್ಲಿ ಆಗ ಇದ್ದ 10 ಪಕ್ಷಗಳನ್ನು ಮೂರು ಪಕ್ಷಗಳಾಗಿ ಬಲವಂತವಾಗಿ ಒಗ್ಗೂಡಿಸಲಾಯಿತು. ಆಳುವ ಗೋಲ್ಕರ್, PPP, PDI ಎಂಬ ಮೂರು ಪಕ್ಷಗಳು ಉಗಮವಾದವು. ಉಳಿದ ಯಾವುದೇ ಪಕ್ಷಗಳಿಗೆ ಅವಕಾಶವಿರಲಿಲ್ಲ. ಇವುಗಳ ಸಂವಿಧಾನವನ್ನು ಸರ್ಕಾರ ಮಂಜೂರು ಮಾಡಬೇಕಾಗಿತ್ತು. ಚುನಾವಣೆಗೆ ಬೇರೆ ಯಾವುದೇ ಪಕ್ಷ ಸ್ಪರ್ಧಿಸುವಂತಿರಲಿಲ್ಲ. 1985 ರಲ್ಲಿ ಮಂಜೂರು ಮಾಡಿದ ರಾಜಕೀಯ ಕಾನೂನು ಪ್ರಕಾರ ಮಿಲಿಟರಿಗೆ ದೈನಂದಿನ ಆಡಳಿತದಲ್ಲಿ ಅವಕಾಶ ಕೊಡಲಾಯಿತು. ಪಾರ್ಲಿಮೆಂಟಿನಲ್ಲಿ 15% ಸೀಟುಗಳನ್ನು ಮಿಲಿಟರಿಗೆ ಕಾದಿರಿಸಲಾಯಿತು. ಪಾರ್ಲಿಮೆಂಟು ಅಧ್ಯಕ್ಷರನ್ನು ಆರಿಸುತ್ತದೆ. ಯಾವಾಗಲೂ ಇದು ಏಕಮಾತ್ರ ಅಭ್ಯರ್ಥಿ ಸುಹಾರ್ತೋ ಆಗಿರುತ್ತಿದ್ದ. ಸುಹಾರ್ತೋ ಮಿಲಿಟರಿ ಸರ್ವಾಧಿಕಾರಿ ನೆರಳಲ್ಲಿ ಅಮೇರಿಕನ್ ಹಾಗೂ ಇತರ ಬಹುರಾಷ್ಟ್ರೀಯ ಕಂಪನಿಗಳಿಗೆ ಇಂಡೋನೇಶ್ಯಾ ಪೂರ್ಣ ಬಾಗಿಲು ತೆರೆಯಿತು. ಸುಹಾರ್ತೋ ಮತ್ತು ಇತರ ಬಾಲಬಡುಕರು ಈ ಕಂಪನಿಗಳ ಸ್ಥಳೀಯ ಏಜೆಂಟರಾಗಿ ಶ್ರೀಮಂತರಾದರು. ಈ ದೇಶದಲ್ಲಿ 'ಬಾಲಬಡುಕ ಬಂಡವಾಳ ಶಾಹಿ' 'ಹೊಸ ಶ್ರೀಮಂತರ' ಬೆಳವಣಿಗೆಯಾಯಿತು.

ಠಾಗೋರ್, ನಜರುಲ್, ಮೆಟ್ರೊಗಳನ್ನು ಚುನಾವಣೆಗೆಳೆದ ವಾಜಪೇಯಿ

ಇತ್ತೀಚೆಗೆ ಪ್ರಧಾನಿ ವಾಜಪೇಯಿಯವರ ಒಂದು ದಿನದ ಪಶ್ಚಿಮ ಬಂಗಾಳ ಭೇಟಿ ವಿವಾದ, ವ್ಯಾಪಕ ಟೀಕೆಗೆ ಒಳಗಾಗಿದೆ. ಠಾಗೋರ್, ನಜರುಲ್, ಮೆಟ್ರೊ ರೈಲ್ವೇಗಳನ್ನೆಲ್ಲಾ ಚುನಾವಣಾ ರಾಜಕೀಯಕ್ಕೆ ಎಳೆಯುವ ವಾಜಪೇಯಿ ಮಮತಾ ಜೋಡಿಯ ಪ್ರಯತ್ನ ಜನರಿಗೆ ಅಸಹ್ಯ ಉಂಟುಮಾಡಿದೆ. ವಾಜಪೇಯಿಯವರು ಒಂದೇ ದಿನದಲ್ಲಿ ಠಾಗೋರರ ಸಂಗೀತದ ಸೀಡಿ ಬಿಡುಗಡೆ ಮಾಡಿರು. ಬಂಗಾಳದ ಪ್ರಸಿದ್ಧ ಕವಿ ನಜರುಲ್ ಇಸ್ಲಾಮ್ ಶತಮಾನೋತ್ಸವದಲ್ಲಿ ಪಾಲುಗೊಂಡರು. ಮತ್ತು ರೈಲು ವಿಸ್ತರಿಸುವ ಪ್ರಾಜೆಕ್ಟ್‌ಗೆ ಅಡಿಗಲ್ಲು ಹಾಕಿದರು. ಈ ಮೂರು ಸಮಾರಂಭಗಳನ್ನು ಸಂಘಟಿಸಿದ್ದು ಕೇಂದ್ರ ಸರ್ಕಾರ. ಆದರೆ ಯಾರನ್ನು ಆಹ್ವಾನಿಸಬೇಕು ಎಂದು ನಿರ್ಧರಿಸಿದ್ದು ತೃಣಮೂಲನಾಯಕಿ ಮಮತಾಬ್ಯಾನರ್ಜಿ ಮತ್ತು ಬಿಜೆಪಿ ನಾಯಕ ತಪನ್ ಸಿಕ್‌ದರ್. ಈ ಮೂರು ಸಮಾರಂಭಗಳಲ್ಲಿ ಮಮತಾ, ತಪನ್, ವಾಜಪೇಯಿ ಜತೆ ಭಾಗವಹಿಸಿದರು. ಈ ಮೂರು ಸರ್ಕಾರಿ ಸಮಾರಂಭಗಳನ್ನು ರಾಜಕೀಯ ಸಭೆಗಳಾಗಿ ಪರಿವರ್ತಿಸಿ, ಚುನಾವಣೆಯ ಬೇಳೆ ಬೇಯಿಸಲು ಖುಲ್ಲಮ್ ಖುಲ್ಲಾ ಬಳಸಲಾಯಿತು.

ಮೆಟ್ರೋ ರೈಲನ್ನು ವಿಸ್ತರಿಸಬೇಕು ಎಂಬ ಒತ್ತಾಯವನ್ನು ಎಡರಂಗ ಹಲವು ವರ್ಷಗಳಿಂದ ಮಾಡುತ್ತಾ ಬಂದಿದೆ. ಕೇಂದ್ರ ಸರ್ಕಾರ ಈ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಚುನಾವಣೆಗಾಗಿ ಈ ಅಡಿಗಲ್ಲು ಹಾಕಲಾಗಿದೆ. ಸಾಲದ್ದಕ್ಕೆ ವಾಜಪೇಯಿ ಈ ಸಮಾರಂಭದಲ್ಲಿ ಇದು ಸಾಧ್ಯ ಮಾಡಿದ್ದರೆ ಮಮತಾರನ್ನು ಹೊಗಳಿದರು. ಸರ್ಕಾರದಿಂದ ಹೇಗೆ ಕೆಲಸ ಮಾಡಿಸಬೇಕೆಂಬುದನ್ನು ಮಮತಾರಿಂದ ಕಲಿಯಬೇಕು ಎಂದು ವಾಜಪೇಯಿ ಅಪ್ಪಣೆ ಕೊಡಿಸಿದರು ರವೀಂದ್ರ ನಾಥ್ ಠಾಗೋರ್ ಸಂಗೀತದ ಸೀಡಿ ಬಿಡುಗಡೆ ಮಾಡುವ ಸಮಾರಂಭದಲ್ಲಿ, ವಾಜಪೇಯಿ ಠಾಗೋರ್‌ಗಿಂತ ಹೆಚ್ಚಿಗೆ ಮಾತನಾಡಿದ್ದು 'ಕಮಲ'ದ ಬಗ್ಗೆ. ಕೋಮುಸೌಹಾರ್ದತೆ, ಏಕತೆ, ಜಾತ್ಯಾತೀತತೆ ಪ್ರತೀಕವಾಗಿದ್ದ ಠಾಗೋರ್, ನಿಜರುಲ್‌ರನ್ನು ತಮ್ಮ ಕೋಮುವಾದಿ ಚುನಾವಣಾ ರಾಜಕೀಯಕ್ಕೆ ಬಳಸಲು ವಾಜಪೇಯಿ, ಮಮತಾರಿಗೆ ನಾಚಿಕೆ ಸಹ ಇಲ್ಲವೇ?

ಸಿಲಿಗುರಿ ಮುನಿಸಿಪಲ್ ಚುನಾವಣೆಯಲ್ಲಿ ಎಡರಂಗ ವಿಜಯ

ಎಡರಂಗ ಪಶ್ಚಿಮ ಬಂಗಾಳದ 10 ಮುನಿಸಿಪಾಲಿಟಿಗಳಿಗೆ ಮೇ 14 ರಂದು ನಡೆದ ಚುನಾವಣೆಗಳಲ್ಲಿ ಮುನ್ನಡೆ ಸಾಧಿಸಿದೆ. ಇದರಲ್ಲಿ ಸಿಲಿಗುರಿ ಮುನಿಸಿಪಾಲಿಟಿಯಲ್ಲಿ ಎಡರಂಗ ವಿಜಯ ಮಹತ್ವವಾದದ್ದು. ಸಿಲಿಗುರಿಯಲ್ಲಿ ಎಡರಂಗ ತನ್ನ ಸ್ಥಾನಗಳನ್ನು 31 ರಿಂದ 36 ಕ್ಕೆ ಹೆಚ್ಚಿಸಿಕೊಂಡಿದೆ. ಸಿಪಿಐ(ಎಂ) ಒಂದೇ 29 ಸೀಟುಗಳಿಸಿದೆ. ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ತಲಾ 5 ಸೀಟುಗಳನ್ನು ಗಳಿಸಿವೆ. ಬಿಜೆಪಿ ತನ್ನ ಇದ್ದ ಎರಡೂ ಸೀಟುಗಳನ್ನು ಕಳೆದು ಕೊಂಡಿದೆ.

ರಾಜಪುರ - ಸೋನಾರ್‌ಪುರದ ಮುನಿಸಿಪಾಲಿಟಿಯಲ್ಲಿ 33 ರಲ್ಲಿ 27 ಸೀಟುಗಳನ್ನು ಎಡರಂಗ ಗೆದ್ದಿದೆ. ಹತ್ತು ಮುನಿಸಿಪಾಲಿಟಿಗಳಲ್ಲಿ 9 ಮುನಿಸಿಪಾಲಿಟಿಗಳ ಫಲಿತಾಂಶ ಪ್ರಕಟಿಸಿದ್ದು 3 [illegible] ಎಡರಂಗ ಸ್ಪಷ್ಟ ಬಹುಮತ ಪಡೆದಿದೆ. ಕಾಂಗ್ರೆಸ್ ಎರಡರಲ್ಲಿ ಬಹುಮತ ಪಡೆದಿದೆ. ನಾಲ್ಕರಲ್ಲಿ ಯಾರಿಗೂ ಸ್ಪಷ್ಟ ಬಹುಮತ ಬಂದಿಲ್ಲ.

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ನೆಟ್

ಪಶ್ಚಿಮ ಬಂಗಾಳ ಎಡರಂಗ ಸರ್ಕಾರ ತನ್ನ ಜನ-ಪರ ಕಾರ್ಯಕ್ರಮಗಳಲ್ಲಿ ಇನ್ನೊಂದು ಹೆಜ್ಜೆ ಇಟ್ಟಿದೆ. ಆಯ್ದ 300 ಗ್ರಾಮ ಪಂಚಾಯತುಗಳಲ್ಲಿ ಸಮುದಾಯ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇಂಟರ್‌ನೆಟ್ ಕನೆಕ್ಷನ್ ಹೊಂದಿರುವ ಈ ಸಮುದಾಯ ಮಾಹಿತಿ ಕೇಂದ್ರಗಳು ಗ್ರಾಮೀಣ ಪ್ರದೇಶಗಳಿಗೆ ಹೊರ ಜಗತಿಗೆ ಕಿಂಡಿಯಂತೆ ಕೆಲಸ ಮಾಡುತ್ತವೆ. ಇಂಟರ್‌ನೆಟ್‌ನ್ನು ಹಳ್ಳಿಗಳಿಗೆ ತೆಗೆದುಕೊಂಡು ಹೋಗಿ ಮಾಹಿತಿ ತಂತ್ರಜ್ಞಾನವನ್ನು ಗ್ರಾಮೀಣ ಬೆಳವಣಿಗೆಗೆ ಪೂರಕಗೊಳಿಸುವ ಎಡರಂಗ ಸರ್ಕಾರದ ಈ ಪ್ರಯತ್ನ ದೇಶದಲ್ಲೇ ಪ್ರಥಮ ಎಂಬ ಹೆಗ್ಗಳಿಕೆಯದು.

ಈಗಾಗಲೇ ಇರುವ ಗ್ರಾಮೀಣ ಲೈಬ್ರರಿಗಳನ್ನೇ ಸಮುದಾಯ ಮಾಹಿತಿ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸಲಾಗುವುದು. ಈ ಕೇಂದ್ರಗಳು ಅಧ್ಯಯನಕ್ಕೆ ಅವಕಾಶ ಮಾಡಿಕೊಡುವುದು ಮಾತ್ರವಲ್ಲದೆ, ಗ್ರಾಮೀಣ ಉತ್ಪಾದನೆ ಅಗತ್ಯಗಳಿಗೆ ಬೇಕಾದ ತಾಂತ್ರಿಕ, ವೈಜ್ಞಾನಿಕ ವಿಜ್ಞಾನ ಬಿತ್ತರಿಸುವ ಕೇಂದ್ರಗಳಾಗಿ ಕೆಲಸ ಮಾಡಲಿವೆ. ಗ್ರಾಮೀಣ ಮಾಹಿತಿಯ ಅಗತ್ಯಗಳ ಬಗ್ಗೆ ಸರ್ಕಾರ ಈಗಾಗಲೇ ಸರ್ವೆ ಸಿದ್ಧಪಡಿಸಿದೆ. ರೇಷ್ಮೆ ಮೀನುಗಾರಿಕೆ, ಅರಣ್ಯರಕ್ಷಣೆ, ಸ್ವಯಂ ಉದ್ಯೋಗ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗುವುದು. ಈ ಕೇಂದ್ರಗಳನ್ನು ಗ್ರಾಮ ಪಂಚಾಯತ್ ನಂತರ ಸ್ಥಳೀಯ ಸಂಸ್ಥೆಗಳೇ ನಡೆಸುವುದು. ಈ ಕೇಂದ್ರಗಳಿಗೆ ಜಿಲ್ಲಾ ಯೋಜನಾ ಸಮಿತಿಗಳ ಮೂಲಕ ಸಂಪನ್ಮೂಲಗಳನ್ನು ಒದಗಿಸಲಾಗುವುದು.

ಎರಡನೇ ಹಂತದಲ್ಲಿ ಅಂದರೆ ಐದು ವರ್ಷಗಳೊಳಗೆ 1500 ಇಂತಹ ಕೇಂದ್ರಗಳನ್ನು ಸ್ಥಾಪಿಸುವುದು, ಅವುಗಳನ್ನೆಲ್ಲಾ ಜೋಡಿಸುವ ರಾಷ್ಟ್ರವ್ಯಾಪಿ ನೆಟ್ ರಚಿಸುವುದು, ಇದನ್ನು ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಲೈಬ್ರರಿಗಳಿಗೆ ಜೋಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯದ ಲೈಬ್ರರಿ ಮಂತ್ರಿ ಹೇಳಿದ್ದಾರೆ. ಮುಂದಿನ ಜನವರಿ 26 ರೊಳಗೆ ರಾಜ್ಯ ಮತ್ತು ಜಿಲ್ಲಾ ಲೈಬ್ರರಿಗಳನ್ನು ಕಂಪ್ಯೂಟರೀಕರಿಸುವುದು, ಅವುಗಳ ಜಾಲ ಹೆಣೆಯುವುದು ಮಾಡಲಾಗುವುದು.

ಮಾಹಿತಿ ತಂತ್ರಜ್ಞಾನವನ್ನು ಸಾಮಾನ್ಯ ಗ್ರಾಮೀಣ ಜನರಿಗಾಗಿ ಬಳಸುವ ಎಡರಂಗದ ಪ್ರಯತ್ನ ಶ್ಲಾಘನೀಯ, ಅನುಕರಣೀಯ.

ಮಧ್ಯ ಬಿಹಾರದಲ್ಲಿ ಸೇನೆಗಳ ಭಯೋತ್ಪಾದನೆ ಬದಲು ಸಾಮೂಹಿಕ ಚಳುವಳಿ

ಮಧ್ಯ ಬಿಹಾರದಲ್ಲಿ 'ಸೇನೆ'ಗಳ ಆಟಾಟೋಪ ವಿಪರೀತ. ರಣಬೀರ ಸೇನಾ, ನಕ್ಸಲೀಯರ, ಪೋಲೀಸರ ಹಿಂಸಾಚಾರ ಅಲ್ಲಿ ನಿತ್ಯದ ಸುದ್ದಿ. ಈ ಎಲ್ಲಾ ಸುದ್ದಿಗಳ ಮಧ್ಯೆ ನಿಜವಾದ ಸುದ್ದಿ, ಸುದ್ದಿಯಾಗದೆ ಹೋಯಿತು.

ಸಿಪಿಐ(ಎಂ), ಎಐಕೆಎಸ್, ಎಐಎಡಬ್ಲ್ಯುಎ, ಜಂಟಿಯಾಗಿ ಸಂಘಟಿಸಿದ್ದ ಎರಡು ಸೆಮಿನಾರು 'ಸುದ್ದಿ' ಮಾಡದ ಸುದ್ದಿಗಳು. ಆದರೆ ಮಧ್ಯ ಬಿಹಾರದ ರಾಜಕೀಯ ಬೆಳವಣಿಗೆಯ ದೃಷ್ಟಿಯಿಂದ ಅವು ನಿಜವಾದ ಸುದ್ದಿಗಳು. ಈ ಸೆಮಿನಾರನ್ನು ಮೇ 22 ರಂದು ಅರಾದಲ್ಲಿ ಮತ್ತು ಮರುದಿನ ಗಯಾದಲ್ಲಿ ಏರ್ಪಡಿಸಲಾಗಿತ್ತು. ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರಾದ ಸುನೀತ್ ಚೋಪ್ರಾ ಮತ್ತು ಗಣೇಶ ಶಂಕರ ವಿದ್ಯಾರ್ಥಿ ಇದರಲ್ಲಿ ಭಾಗವಹಿಸಿ ತಮ್ಮ ವಿಚಾರ ಮಂಡಿಸಿದರು. ಈ ಮಂಡನೆಯ ಲೇಖನಗಳಲ್ಲಿ ವಿವಿಧ ಹಂತಗಳ ಮಧ್ಯ ಬಿಹಾರದ ಸಮಸ್ಯೆಗಳ ಬಗ್ಗೆ ಕೂಲಂಕುಷ ವಿವರ ಇರುವ ಈ ಲೇಖನಗಳು ನಕ್ಸಲೀಯ, ಭೂಮಾಲಕ ಭಯೋತ್ಪಾದನೆ ರಾಜಕೀಯ ಖಂಡಿಸಿ, ಸಾಮೂಹಿಕ ಚಳುವಳಿಯ ದಾರಿಯನ್ನು ಪ್ರತಿಪಾದಿಸುತ್ತವೆ. ಈ ಸೆಮಿನಾರುಗಳಲ್ಲಿ ಮಧ್ಯ ಬಿಹಾರವನ್ನು ವ್ಯಾಪಕವಾಗಿ ಮುಟ್ಟುವ ಎರಡು ಜಾಥಾಗಳನ್ನು ಮಾಡಬೇಕೆಂದು ನಿರ್ಧರಿಸಲಾಯಿತು. ಒಂದು ಜಾಥಾ ಅರಾದಿಂದ ಹೊರಟರೆ, ಇನ್ನೊಂದು ನೂಡದಿಂದ ಹೊರಟು ಜೂನ್ 10 ರಿಂದ 17 ವರೆಗೆ ನಡೆಯಲಿದೆ. ಈ ಜಾಥಾ ಶಾಂತಿ, ಭಯೋತ್ಪಾದಕ ಜಾತಿ ಹಿಂಸೆ ನಿಲ್ಲಿಸಲು, ಉಳುವವನೇ ಹೊಲದೊಡೆಯ, ರಸ್ತೆಗಳು ಕಾಲುವೆಗಳನ್ನು ರಿಪೇರಿಗೆ ತಕ್ಷಣ ಕ್ರಮ ಕೈಗೊಳ್ಳುವುದು, ಇತ್ಯಾದಿ ವಿಷಯಗಳ ಪ್ರಸ್ತಾವ ಮಾಡಲಿದೆ. ಜೂನ್ 18 ರಂದು ಪೇಟೆಂಟ್ ಮಸೂದೆ ವಿರುದ್ಧ ಬಿಹಾರ ಬಂದ್‌ಗೂ ಕರೆ ನೀಡಲಾಗುವುದು ಎಂದು ನಿರ್ಧರಿಸಿದೆ.

ಹತ್ತು ಲಕ್ಷ ಟನ್ ಗೋಧಿ ರಫ್ತಿಗೆ ಕಿಸಾನ್ ಸಭಾ ವಿರೋಧ

ಹತ್ತು ಲಕ್ಷ ಟನ್ ಗೋಧಿಯನ್ನು ರಫ್ತು ಮಾಡುವ ಕೇಂದ್ರ ಸರ್ಕಾರದ ನಿರ್ಧಾರನ್ನು ಕಿಸಾನ್ ಸಭಾ 'ಜನ-ವಿರೋಧಿ' ಎಂದು ಕಟುವಾಗಿ ಟೀಕಿಸಿದೆ. ಇದು ವ್ಯಾಪಾರಿಗಳ ಒಂದು ವಿಭಾಗವನ್ನು ಕೊಬ್ಬಿಸಲು ಮಾತ್ರ ಎಂದಿದೆ ಕಿಸಾನ್ ಸಭಾ. ಸರ್ಕಾರದ ಅಂದಾಜು ಪ್ರಕಾರವೇ, ತುರ್ತು ಪರಿಸ್ಥಿತಿ ಎದುರಿಸುವಷ್ಟು ಸ್ಟಾಕು ಇಲ್ಲಾ. ಗೋಧಿ ಉತ್ಪಾದನೆ ಮಳೆಯ ಮೇಲೆ ಅವಲಂಬಿಸಿದ್ದು, ವರ್ಷದಿಂದ ವರ್ಷಕ್ಕೆ, ಏರುಪೇರಾಗಬಹುದು. ಈ ರೀತಿ ಮುಂದಿನ ವರ್ಷಗಳಲ್ಲಿ ಗೋಧಿ ಉತ್ಪಾದನೆಯಲ್ಲಿ ಕೊರತೆ ಬಿದ್ದರೆ ನಾವು ಸ್ಟಾಕು ಸಾಕಾಗದೆ, ಗೋಧಿಯನ್ನು ಆಮದು ಮಾಡಬೇಕಾದೀತು. ಇದು ಊಹಾಪೋಹವಲ್ಲ. ಇದು ಹಿಂದೆ ಆಗಿದೆ ಎಂದಿದೆ ಕಿಸಾನ್ ಸಭಾ ಹೇಳಿಕೆ. ಸರ್ಕಾರ ಹೇಳುವಂತೆ ಇದು ರೈತರಿಗೆ ಪ್ರಯೋಜನಕಾರಿ ಎಂಬುದು ಸತ್ಯಕ್ಕೆ ದೂರವಾದದ್ದು. ರೈತರು ಈಗಾಗಲೇ ತಮ್ಮ ಬೆಳೆ ಮಾರಿರುವುದರಿಂದ ಯಾವ ಲಾಭವೂ ರೈತರಿಗೆ ಆಗುವುದಿಲ್ಲ. ಈ ನಿರ್ಧಾರದಿಂದ ಕೊರತೆ ಉಂಟಾಗಿ, ಬೆಲೆ ಏರಿಕೆಯಾಗಿ ಬಳಕೆದಾರರಿಗೆ ಸಂಕಷ್ಟ ಎದುರಾಗಬಹುದು ಎಂದಿದೆ ಕಿಸಾನ್ ಸಭಾ.

ಪುಟ 8 ರಿಂದ

..............ಜೇಬುಗಳು ಜೋಪಾನ

ಅವನ ಸ್ನೇಹಿತರು, ಅವನು ಬರೆದ ಕಾಗದ ಸುಳ್ಳು, ಅವನ ಸಾವಿಗೆ ಅವನ ತಾಯಿಯೇ ಕಾರಣ. ಅವನಿಗೆ ಓದುವಂತೆ ತುಂಬಾ ಹಿಂಸೆ ನೀಡುತ್ತಿದ್ದರು ಕಡಿಮೆ ಅಂಕಗಳನ್ನು ತೆಗೆದರೆ ಬಾಸುಂಡೆ ಬರುವಂತೆ ಹೊಡೆಯುತ್ತಿದ್ದರು. ಅವನು ತುಂಬಾ ಮೃದು ಸ್ವಭಾವದವನು ಅಮ್ಮನಿಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡನೆಂದು ಹೇಳತೊಡಗಿದರು.

ಈಗ ಹೇಳಿ ಆ ತಾಯಿಗೆ ಮಗನ ಮೇಲೆ ಒತ್ತಡ ಹೇರಲು ಪ್ರೇರೇಪಣೆ ನೀಡಿದ್ದು ಯಾರು? ಅನಗತ್ಯ ಪೈಪೋಟಿಗೆ ದೂಡಿದ್ದು ಯಾರು? ಆತನ ಸಾವಿನ ಹಿಂದಿರುವ ಸತ್ಯ ಯಾವುದು.

ಕಟ್ಟಿದ ಅಥವಾ ಮುಂದೆ ಕಟ್ಟುವ ಸಾವಿರಾರು ರೂಪಾಯಿ ಫೀ...ಲಾಭ ಮಾಡಬೇಕೆನ್ನುವ ಉದ್ವೇಗದಲ್ಲಿ ರ್‍ಯಾಂಕೇ ಬರಬೇಕು, ಫಸ್ಟ್ ಕ್ಲಾಸೇ ಬರಬೇಕೆಂದು ಕಟ್ಟುಪಾಡು ವಿಧಿಸಿ ಇಂತಹ ಎಷ್ಟು ಮಕ್ಕಳನ್ನು ಬಲಿಕೊಡುವುದು.

ಅನಗತ್ಯ ಪೈಪೋಟಿ ಸೃಷ್ಟಿಸುವ ಖಾಸಗಿ ಸಂಸ್ಥೆಗಳು ಅನಿವಾರ್ಯವೆ?:

ಇಂತಹ ಮಕ್ಕಳ ಕಥೆಗಳನ್ನು ಕೇಳುವಾಗ ನನ್ನ ಓದಿನ ಬಗ್ಗೆ ನನಗೆ ಖುಷಿಯೆನಿಸುತ್ತದೆ. ನಾನೊಂದು ಸರ್ಕಾರಿ ಶಾಲೆಯಲ್ಲಿ ಕಲಿತವಳು. ನಾಲ್ಕನೆ ತರಗತಿ ತನಕ ಉಚಿತ ಓದಿದೆ. ಐದರಿಂದ ಏಳನೆಯ ತರಗತಿವರೆಗೆ 5 ರಿಂದ 10 ರೂಪಾಯಿಗಳಷ್ಟು ಫೀ ಕಟ್ಟಿದೆ. ಹಾಗೆಯೇ ಹೈಸ್ಕೂಲ್ ತರಗತಿಗಳು 20 ರಿಂದ 30 ರೂಪಾಯಿ ಫೀಸ್‌ನಲ್ಲಿ ಮುಗಿಯಿತು. (ಇಷ್ಟನ್ನೂ ಕಟ್ಟಲಾಗದೆ ಶಾಲೆ ಬಿಟ್ಟ ನನ್ನ ಸಹಪಾಠಿಗಳೂ ಇರುವುದು ವಾಸ್ತವ)

ಇಷ್ಟೇ ಓದಬೇಕು, ಫಸ್ಟ್‌ಕ್ಲಾಸ್ ಬರಬೇಕು ಮುಂತಾದ ಕಟ್ಟಳೆಗಳೇನೂ ನನ್ನ ಮೇಲಿರಲಿಲ್ಲ. ಪ್ರತಿದಿನ ಸಂಜೆ ಕೊನೆಯ ಪಿರಿಯಡ್‌ನಲ್ಲಿ ಆಟವಾಡಲು ಅವಕಾಶವಿರುತ್ತಿತ್ತು. ಹಳ್ಳಿಯಾದರೂ ಎಲ್ಲಾ ರೀತಿಯ ಆಟಗಳನ್ನು ಆಡಿಸುತ್ತಿದ್ದರು. ಮನೆಗೆ ಮರಳಿದ ನಂತರವೂ ಗೆಳತಿಯರೆಲ್ಲಾ ಸೇರಿ ಆಟವಾಡುತ್ತಿದ್ದೆವು. ಟ್ಯೂಷನ್ನಿನ ಯಾವ ಟೆನ್ಷನ್ನೂ ಇರುತ್ತಿರಲಿಲ್ಲ. ಓದುವ ಉತ್ಸಾಹ ನಮಗೇ ಬರುತ್ತಿತ್ತು. ಬಲವಂತಕ್ಕೆ ಓದುತ್ತಿರಲಿಲ್ಲ. ನಾನು ಓದಿದ ಶಾಲೆಯಲ್ಲಿ ರಾಜ್ಯಮಟ್ಟದ ಕ್ರೀಡಾಪಟುಗಳಿದ್ದರು, ಉತ್ತಮ ಚರ್ಚಾಪಟುಗಳಿದ್ದರು, ಹಾಡುಗಾರರಿದ್ದರು, ಪ್ರತಿಭಾವಂತ ವಿದ್ಯಾರ್ಥಿಗಳಿದ್ದರು. ಅನಗತ್ಯ ಪೈಪೋಟಿ ಯಾರ ಮಧ್ಯೆಯೂ ಇರದೆ ಆರೋಗ್ಯವಂತ ಸ್ಪರ್ಧೆಯಿತ್ತು.

ನನ್ನ ಸಹಪಾಠಿಗಳಲ್ಲೆ ಅನೇಕರು ಇಂದು ವೈದ್ಯರಾಗಿದ್ದರೆ. ಇಂಜಿನಿಯರೂ, ವಕೀಲರೂ ಆಗಿದ್ದಾರೆ, ಉಪಾಧ್ಯಾಯರು, ಉಪನ್ಯಾಸಕರು ದೇಶ ಕಾಯುವ ಸೈನಿಕರೂ ಇದ್ದಾರೆ. ಇಂಗ್ಲಿಷ್ ಶಾಲೆಯ ದುಬಾರಿ ಓದು ಕಲಿತ ಯಾರಿಗಿಂತ ಇವರೇನು ಕಡಿಮೆಯಿಲ್ಲ.

ಈಗ ನೀವೇ ಹೇಳಿ? ಹಣ ಸುಲಿಯುವ ಖಾಸಗಿ ಶಾಲೆಗಳಿಗೆ ಆಂಗ್ಲ ಶಾಲೆಗಳಿಗೆ ಪರ್ಯಾಯವಿಲ್ಲವೆ?

ಬದುಕಿನ ಅನಿವಾರ್ಯತೆಯನ್ನು ಎದುರಿಸುವ ಧೈರ್ಯ ಎಲ್ಲೂ ಇಲ್ಲ:

ನಾನು ಹೈಸ್ಕೂಲ್ ಮುಗಿಸಿ ಬೆಂಗಳೂರಿನ ಕಾಲೇಜೊಂದರಲ್ಲಿ ಪಿಯುಸಿ ಸೇರಿದೆ ಒಂದೇ ಕೋಣೆಯಲ್ಲಿ 200 ಜನ ವಿದ್ಯಾರ್ಥಿನಿಯರನ್ನು ಕೂಡಿ ಹಾಕಿ ಪಾಠಮಾಡುವ ಹೊಸ 'ವಾತಾವರಣ ನೋಡಿ ವಿದ್ಯಾರ್ಥಿ-ಅಧ್ಯಾಪಕರ ಸಂಬಂಧಗಳು ಕೃತಕ ಮತ್ತು ತಾಂತ್ರಿಕವೆನಿಸಿ ಅಳು ಬಂದಂತಾಗುತ್ತಿತ್ತು.

ನಾನು ಕಲಿತ ಶಾಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಪರಿಚಯವೂ ನಮ್ಮ ಉಪಾಧ್ಯಯರಿಗಿರುತ್ತಿತ್ತು. ಮಾತ್ರವಲ್ಲ ನಮ್ಮ ಕುಟುಂಬದ ಹಿನ್ನೆಲೆಗಳ ಬಗ್ಗೆಯೂ ತಿಳಿದಿರುತ್ತಿತ್ತು. ಕಾಲೇಜು ವಿದ್ಯಾಭ್ಯಾಸದಲ್ಲಿ ಅಟೆಂಡೆನ್ಸ್ ಕರೆಯುವಾಗ ಮಾತ್ರ ಹೆಸರುಗಳನ್ನು ಉಚ್ಚರಿಸುತ್ತಿದ್ದರು. ಕೆಲವರ ಹೆಸರುಗಳಷ್ಟೇ ಉಪನ್ಯಾಸಕರಿಗೆ ಪರಿಚಯವಿದ್ದವು.

ನಾನು 10ನೇ ತರಗತಿಯಲ್ಲಿರುವಾಗಲೆ ಎಸ್.ಎಫ್.ಐ. ವಿದ್ಯಾರ್ಥಿ ಸಂಘಟನೆಯ ಪರಿಚಯವಾಗಿತ್ತು. ಬೆಂಗಳೂರಿಗೆ ಬಂದ ನಂತರ ಅದರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ ಹೀಗಾಗಿ ನನ್ನ ತರಗತಿಯಲ್ಲಿ ಚಟುವಟಿಕೆಗಳ ಬಗ್ಗೆ ಹೇಳುವಾಗ ಸದಸ್ಯತ್ವ ಮಾಡುವಾಗ ನಾನು ಎಲ್ಲರಿಗೂ ಪರಿಚಯವಾದೆ. ಕ್ಲಾಸಿಗೆ ತಡವಾದರೂ ಅನುಮತಿ ಕೇಳಿ ಧೈರ್ಯದಿಂದ ಕ್ಲಾಸಿನ ಒಳಗೆ ಹೋಗುತ್ತಿದ್ದೆ. ಅಧ್ಯಾಪಕರ ಪ್ರಶ್ನೆಗಳಿಗೆ ಸರಿಯೋ ತಪ್ಪೋ ಉತ್ತರಿಸುವ ಪ್ರಯತ್ನ ಮಾಡುತ್ತಿದ್ದೆ ಹೀಗಾಗಿ, ಅಧ್ಯಾಪಕರಿಗೆ ಪರಿಚಯವಾದೆ. ಸ್ವಲ್ಪ ಸಮಾಧಾನವಾಯಿತೆಂದು ಅನಿಸಿತು.

ಎರಡು ಮೂರು ವಿಭಾಗಗಳನ್ನು ಸೇರಿಸಿಕೊಂಡು ಭಾಷಾ ವಿಷಯಗಳ ಪಾಠ ಮಾಡುತ್ತಿದ್ದರು. ಆಗ ಆಂಗ್ಲ ಮಾಧ್ಯಮದಲ್ಲಿ ಖಾಸಗಿ ಶಾಲೆಗಳಲ್ಲಿ ಓದಿದ ಗೆಳತಿಯರೂ ಬರುತ್ತಿದ್ದರು. ನಾನು ಅವರ ಪರಿಚಯವನ್ನು ಮಾಡಿಕೊಂಡೆ ಸ್ವಲ್ಪ ತಡವಾದರೆ ತರಗತಿಯೊಳಗೆ ಬರುವ ಧೈರ್ಯ ಅವರಿಗಿರುತ್ತಿರಲಿಲ್ಲ. ಗೊತ್ತಿರುವ ಉತ್ತರಗಳನ್ನೂ ಸಹ ಅವರು ಹೇಳುತ್ತಿರಲಿಲ್ಲ. ಎದ್ದು ನಿಂತು ಇಷ್ಟು ಜನರ ಮುಂದೆ ಹೇಳಲು ಭಯ ಎನ್ನುತ್ತಿದ್ದರು. ತಮ್ಮವರೇ ಸಹಪಾಠಿಗಳ ಮುಂದೆ ನಿಂತು ಮಾತನಾಡುವ, ಉತ್ತರ ಹೇಳುವ ಧೈರ್ಯವನ್ನೇ ತುಂಬದ ಶಾಲೆಗಳು (ಎಲ್ಲ ಸರ್ಕಾರಿ ಶಾಲೆಗಳು ಇದಕ್ಕೆ ಹೊರತೆಂದು ನಾನು ಹೇಳುತ್ತಿಲ್ಲ- ಶಿಕ್ಷಣ ಪದ್ಧತಿಯಿರುವುದೇ ಹೀಗೆ) ಬದುಕಿಗೆ ಭದ್ರ ಬುನಾದಿ ಹಾಕುತ್ತವೆಯೆನ್ನುವುದು ಎಷ್ಟು ಸರಿ? ಅಂದರೆ ಸರ್ಕಾರಿ ಶಾಲೆಗಳಿಗಿಂತ ಭಿನ್ನವಾಗಿ, ವ್ಯಕ್ತಿತ್ವವನ್ನು ಧೈರ್ಯವನ್ನು, ಬದುಕನ್ನು ಎದುರಿಸುವ ಛಲಗಾರಿಕೆಯನ್ನು ಖಾಸಗೀ ಶಿಕ್ಷಣ ಸಂಸ್ಥೆಗಳೂ ಸಹ ನೀಡಲಾರವೆಂದೇ ಇದರ ಅರ್ಥ.

ನಾನು ಕಾನೂನು ಪರೀಕ್ಷೆಗಳನ್ನೂ ಸಹ ಕನ್ನಡದಲ್ಲೇ ಪಾಸುಮಾಡಿದೆ. ಸರ್ಕಾರಿ-ಶಾಲಾ ಕಾಲೇಜುಗಳಲ್ಲಿ ಓದಿದ ನನ್ನಂತಹ ಸಾಕಷ್ಟು ವಿದ್ಯಾರ್ಥಿಗಳು ಕಾನೂನು ವಿಷಯಗಳನ್ನು ಕನ್ನಡದಲ್ಲೇ ಬರೆದು ಒಂದೇ ಬಾರಿ ಕ್ಲಾಸುಗಳನ್ನು ಪಡೆದು ಉತ್ತೀರ್ಣರಾದದ್ದನ್ನು ನೋಡಿ ಖಾಸಗಿ ಶಾಲೆಗಳು, ಆಂಗ್ಲಶಾಲೆಗಳು ಅನಿವಾರ್ಯವಲ್ಲವೇ ಅಲ್ಲ ಎಂದು ತೀರ್ಮಾನಿಸಿದೆ.

ಪಿಯುಸಿಯಿಂದ ಹಿಡಿದು ಪದವಿಯತನಕ ನನ್ನ ಸಹಪಾಠಿಗಳ ನೇಕರ ಪರೀಕ್ಷಾ ಅರ್ಜಿಗಳನ್ನು ಪ್ರವೇಶದ ಅರ್ಜಿಗಳನ್ನು ನಾನು ತುಂಬಿಕೊಟ್ಟಿದ್ದೇನೆ. ನಮ್ಮ ಅಗತ್ಯಕ್ಕೆ ಬೇಕಾದ ಒಂದು ಅರ್ಜಿಯನ್ನು ತುಂಬಿಸುವ ಪರಿಪೂರ್ಣತೆಯನ್ನು ಖಾಸಗೀ ಶಾಲೆಗಳೂ ಸಹ ಕಲಿಸಿಲ್ಲವೆನ್ನುವುದು ವಾಸ್ತವ ಸಂಗತಿ ಹಾಗಿದ್ದ ಮೇಲೆ ಖಾಸಗೀ ಶಾಲೆಗಳ ಬಗ್ಗೆ ಭ್ರಮೆ ಏಕೆ.

ನಾನು ಎಸ್‌ಎಫ್‌ಐ ನಂತ ವಿದ್ಯಾರ್ಥಿ ಚಳುವಳಿಯಲ್ಲಿದ್ದ ಕಾರಣ ಇಂತಹ ವಿಷಯಗಳು ಕಷ್ಟವಾಗುತ್ತಿರಲಿಲ್ಲ.

ಸರ್ಕಾರಿ ಶಾಲಾ ಕಾಲೇಜುಗಳ ಕಲಿಸಬೇಕು, ಸರ್ಕಾರಿ ಶಾಲಾ-ಕಾಲೇಜುಗಳ ಓದು ಬೇಡವೆನ್ನುವ ನಾವುಗಳು ಹೆಚ್ಚೆಚ್ಚು ಸರ್ಕಾರಿ ಶಾಲೆಗಳನ್ನು ಹುಟ್ಟಿಹಾಕಲು ಅವುಗಳನ್ನು ಅಭಿವೃದ್ಧಿ ಪಡಿಸಲು ಒತ್ತಡ ತಂದರೆ ಖಾಸಗಿ ಶಾಲೆಗಳಿಗೆ ನೀಡುವ ಆದ್ಯತೆಯನ್ನು ಸರ್ಕಾರಿ ಶಾಲೆಗಳಿಗೆ ನೀಡಿ ಆ ಶಾಲೆಗಳಿಗೆ ನಮ್ಮ ಮಕ್ಕಳನ್ನು ಸೇರಿಸಿದರೆ 'ಖಾಸಗಿ' ಎನ್ನುವ ಲಾಭಕೋರ ವ್ಯಾಪಾರೀ ಶಿಕ್ಷಣ ಸಂಸ್ಥೆಗಳಿಗೆ ಸರಿಯಾದ ಪಾಠ ಕಲಿಸಿದ್ದೇ ಆದರೆ ಯಾವ ಮಕ್ಕಳಿಗೂ ಶಿಕ್ಷಣ ಶಾಪವಾಗುವುದಿಲ್ಲ ಶಿಕ್ಷಣ ಶಿಕ್ಷೆಯಾಗುವುದಿಲ್ಲ.

ಪೋಷಕರು ಪ್ರತಿ ವರ್ಷ ಪ್ರತಿ ತಿಂಗಳೂ ಯಾತನೆಗೆ ಗುರಿಯಾಗುವಂತಿಲ್ಲ. ಆದರೆ ಬೆಕ್ಕಿಗೆ ಗಂಟೆ ಕಟ್ಟುವುದೇ ಮುಖ್ಯಪ್ರಶ್ನೆ.

ಈ ಸಮಾಜದ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕರೂ ಸಹ ಈ ಕುರಿತು ಯೋಚಿಸಿದಾಗ ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗಕ್ಕಾಗಿ ಪ್ರತಿಜ್ಞೆಗೈದು ಹೋರಾಡಿದಾಗಷ್ಟೇ ಖಾಸಗಿಯೆನ್ನುವ ಪಿಡುಗನ್ನು ಓಡಿಸಲು ಸಾಧ್ಯ.

ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಕೇರಳ, ಪ. ಬಂಗಾಳ ವಿದ್ಯಾರ್ಥಿಗಳು, ಯುವಜನರು, ನಾಗರಿಕರು ನಡೆಸುವ ಹೋರಾಟಗಳನ್ನು ಆ ರಾಜ್ಯಗಳ ಎಡರಂಗ ಸರ್ಕಾರಗಳ ಮಾದರಿ ಶಿಕ್ಷಣ ನೀತಿಗಳನ್ನು ನಾವೆಲ್ಲರೂ ಅನುಸರಿಸುವುದು ಸೂಕ್ತ.

ಹೊರನೋಟದ ಆಡಂಬರಕ್ಕೆ ಬದಲಾಗಿ ಮಕ್ಕಳಲ್ಲಿ ಸೃಜನ ಶೀಲತೆಯನ್ನು ಹೆಕ್ಕಿ ತೆಗೆಯುವ ಅವರ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವ ಸಮಾನ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಲು ಎಲ್ಲರೂ ಒಂದಾಗಬೇಕು ಎಲ್ಲರೂ ಮುಂದಾಗಬೇಕು.

ಇಂಡೋನೇಶ್ಯಾ ಚುನಾವಣೆಗಳು..............

ಪುಟ 9 ರಿಂದ

1997 ರಲ್ಲಿ ಈಗ ಕುಪ್ರಸಿದ್ಧರಾಗಿರುವ ದಕ್ಷಿಣ-ಪೂರ್ವ ಏಶ್ಯಾದ ದೇಶಗಳನ್ನು ಕಾಡುತ್ತಿರುವ ಆರ್ಥಿಕ ಬಿಕ್ಕಟ್ಟು ಆರಂಭವಾಗಿದ್ದು, ಜುಲೈ 97 ರಲ್ಲಿ ಹಣಕಾಸಿನ ಸಟ್ಟಾ ವ್ಯಾಪಾರಿಗಳ ಕೈಯಲ್ಲಿ ಸಿಕ್ಕು ಇಂಡೋನೇಶ್ಯಾದ ರೂಪಯ್ಯದ ಬೆಲೆ ಅರ್ಧಕ್ಕಿಂತ ಹೆಚ್ಚು ಕುಸಿಯಿತು. ಹಲವಾರು ಕೈಗಾರಿಕೆಗಳು, ವ್ಯಾಪಾರಗಳು ಮುಚ್ಚಿದವು. ಬ್ಯಾಂಕುಗಳ ಮೇಲೆ ಬ್ಯಾಂಕುಗಳು ದಿವಾಳಿ ಏಳಲು ಆರಂಭಿಸಿದವು. ಈಗಾಗಲೇ ಹಸಿವಿನ ಅಂಚಿನಲ್ಲಿ ಬದುಕುತ್ತಿದ್ದ ಬಡಜನ ಕಂಗಾಲಾದರು. ಕೈಗಾರಿಕಾ ಕಾರ್ಮಿಕರ ಮುಷ್ಕರ ವಿದ್ಯಾರ್ಥಿಗಳ ಪ್ರತಿಭಟನೆ, ಪ್ರದರ್ಶನ ಸಾಮೂಹಿಕ ಸ್ಫೋಟ ದೇಶದ ದಿನನಿತ್ಯದ ಸೀನ್ ಆಯಿತು. 1997 ರಲ್ಲಿ ಪ್ರತಿದಿನ ಸರಾಸರಿ ಮೂರು ಮುಷ್ಕರಗಳು ನಡೆದ್ದವು.

ಐಎಂಎಫ್ ಔಷಧಿ

ಆದರೂ ಸುಹಾರ್ತೋ ಈ ಬಗ್ಗೆ ಏನೂ ಮಾಡುವ, ಜನರಿಗೆ ಪರಿಹಾರ ಒದಗಿಸುವ ಪ್ರಯತ್ನ ಸಹ ಮಾಡಲಿಲ್ಲ. ಅದರ ಬದಲು ಸರ್ಕಾರ ಐಎಂಎಫ್‌ಗೆ ಮೊರೆ ಹೋಯಿತು. ಐಎಂಎಫ್‌ನ 38 ಶತಕೋಟಿ ಡಾಲರುಗಳ ಸಹಾಯ ಬಿಟ್ಟಿ ಬರುವುದಿಲ್ಲ ಎಂದು ಜನರಿಗೆ ಮನವರಿಕೆಯಾಯಿತು. ಅಲ್ಲದೆ ಈ ಸಾಲ ದೀವಾಳಿಯಾಗಿರುವ ಇಂಡೋನೇಶ್ಯಾದ ಬ ೕ ಜ ವ ಾ ಬ ್ದ ಾ ರಿ ಬಂಡವಾಳಶಾಹಿ (ಅದರಲ್ಲೂ ಸುಹಾರ್ತೋನ ಕುಟುಂಬ, ಸಂಬಂಧಿಗಳು ಆಪ್ತರು)ಯ ನಷ್ಟ ತುಂಬಿಕೊಡಲು ಮಾತ್ರ. ಅದನ್ನು ತುಂಬಿಕೊಡಬೇಕಾದ್ದು ಜನ ಎಂದು ತಿಳಿಯಲು ಬಹಳ ಕಾಲ ಹಿಡಿಯಲಿಲ್ಲ. ಅಗತ್ಯ ವಸ್ತುಗಳೆಲ್ಲಾ, ಆಹಾರ ವಸ್ತುಗಳ ಬೆಲೆಗಳು ಗಗನಕ್ಕೇರಿದವು. ಆಹಾರ ವಸ್ತುಗಳು ಕೈಗೆಟುಕುವಾಗಲೇ ಖರೀದಿ ಮಾಡುವ ಎಂಬ ಮನೋಭಾವದಿಂದ ಜನ ಖರೀದಿಸಲು ಆರಂಭಿಸಿದಾಗ ಅಗತ್ಯ ವಸ್ತುಗಳೆಲ್ಲಾ ಕಾಣೆಯಾದವು. ಹಲವು ಕಡೆ ಕಾಳಸಂತೆಕೋರರು ಈ ಕೆಲಸ ಮಾಡಿದರು. ಆದರೂ ಸರ್ಕಾರ ಏನೂ ಮಾಡದೆ ಕುಳಿತಿತ್ತು. ತೀವ್ರ ದಂಗೆ, ಅಂಗಡಿಗಳ ಲೂಟಿ ಆರಂಭವಾದವು- ಅಗತ್ಯ ವಸ್ತುಗಳನ್ನು ಪಡೆಯಲು. ಮಿಲಿಟರಿ ದಬ್ಬಾಳಿಕೆ ಬಿಟ್ಟರೆ ಇನ್ನೇನು ಮಾಡಲಿಲ್ಲ ಸರ್ಕಾರ. ಈ ನಡುವೆ ಮಾರ್ಚ್ 1998 ರಲ್ಲಿ ಸುಹಾರ್ತೋನನ್ನು ಏಳನೇ ಅವಧಿಗೆ ಆತನ 'ರಬ್ಬರ್ ಸ್ಟ್ಯಾಂಪ್' ಪಾರ್ಲಿಮೆಂಟು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆ ಮಾಡಿತು. ಆತನ ಭಟ್ಟಂಗಿಯೆಂದೇ ಪ್ರಸಿದ್ಧನಾದ ಹಬೀಬಿ ಎಂಬುವವನನ್ನು ಉಪಾಧ್ಯಕ್ಷ ಮಾಡಿತು. ಆಗ ಜನರ ಕೋಪ ಮುಗಿಲು ಮುಟ್ಟಿತು. ಕಾರ್ಮಿಕರ ಮುಷ್ಕರ, ವಿದ್ಯಾರ್ಥಿಗಳ ಪ್ರದರ್ಶನ, ಅಂಗಡಿಗಳ ಲೂಟಿ ವ್ಯಾಪಕವಾದವು. ಹಲವು ಕಡೆ ಸಾಮಾಜಿಕ ಅತೃಪ್ತಿ ಚೀನೀ ವ್ಯಾಪಾರಿ-ವಿರೋಧಿ ದ ಂ ಗ ೆ ಗ ಳಾ ದ ವು (ಇಂಡೋನೇಶ್ಯಾ-ವ್ಯಾಪಾರದ ಬಹುಭಾಗ ವಲಸೆಗಾರ ಚೀನೀಯರ ಕೈಯಲ್ಲಿದೆ. ಆದ್ದರಿಂದ ಅವರ ಮೇಲೆ ಜನರ ವಿಶೇಷ ಕೋಪ). ಇಂಡೋನೇಶ್ಯಾದ ಹಲವು ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ದಂಗೆ ಎದ್ದರು. ವಿದ್ಯಾರ್ಥಿಗಳು -ಕಾರ್ಮಿಕರು - ಬುದ್ಧಿಜೀವಿಗಳು ಒಕ್ಕೊರಲಿನಿಂದ ಸುಹಾರ್ತೋ ರಾಜೀನಾಮೆ ಕೇಳಿದರು. ಅವರಿಗೆ ನೇರ ಫಿರಂಗಿ, ಏಟು, ಕೊಲೆ, ಗೋಲಿಬಾರುಗಳಿಂದ ಪೋಲೀಸರು, ಸೈನ್ಯ ಉತ್ತರಿಸಿದರು. ಹಲವು ಕಡೆ ಜನರ - ಪೋಲೀಸರ ನಡುವೆ ಕಾಳಗ ನಡೆಯಿತು.

ಭುಗಿಲೆದ್ದ ಜ್ವಾಲಾಮುಖಿ

ಮೇ ತಿಂಗಳಲ್ಲಿ ಹಲವು ದಿನಗಳ ಕಾಲ ಸುಹಾರ್ತೋ ರಾಜೀನಾಮೆ ಕೊಡಬೇಕು. ಪಾರ್ಲಿಮೆಂಟು ವಿಸರ್ಜಿಸಿ ಬಹುಪಕ್ಷೀಯ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಲು ಸಾವಿರಾರು ವಿದ್ಯಾರ್ಥಿಗಳು ಪಾರ್ಲಿಮೆಂಟು ಭವನವನ್ನು ಸುತ್ತುವರಿದರು. ಹೆಚ್ಚು ಕಡಿಮೆ ವಶಪಡಿಸಿಕೊಂಡರು. ಸುಹಾರ್ತೋ ಮಿಲಿಟರಿ 'ಹೊಸ ವ್ಯವಸ್ಥೆ' ಅಲ್ಲಾಡತೊಡಗಿತು. ಸಾಂಕೇತಿಕವಾಗಿಯೂ ಏನೂ ಮಾಡದಿದ್ದರೆ, ಜನ ಇಡೀ ಆಡಳಿತವನ್ನು ಬುಡಸಮೇತ ಕಿತ್ತು ಬಿಸಾಡುತ್ತಾರೆ ಎಂದು ಆಳುವ ವಲಯಗಳಲ್ಲಿ ಮನವರಿಕೆಯಾಯಿತು. ಸೇನಾ ಮುಖ್ಯಸ್ಥನ ಸಲಹೆ ಮೇರೆಗೆ ಅಧ್ಯಕ್ಷ ಸುಹಾರ್ತೋ ರಾಜಿನಾಮೆ ನೀಡಿದ. ಉಪಾಧ್ಯಕ್ಷ ಹಬೀಬಿಯನ್ನು ರಬ್ಬರ್ ಸ್ಟ್ಯಾಂಪ್ ಪಾರ್ಲಿಮೆಂಟು ಅಧ್ಯಕ್ಷರಾಗಿ ಆರಿಸಿತು. ಅಷ್ಟು ಹೊತ್ತಿಗೆ ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ದ ವ್ಯಾಪಕ ಜನಾಂದೋಲನ ಸ್ಪಷ್ಟ ಹಕ್ಕೊತ್ತಾಯಗಳನ್ನು ಹಾಕಿಕೊಂಡಿತ್ತು. ಇಡೀ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ, ಸುಹಾರ್ತೋ, ಅವನ ಬಾಲಬಡುಕರಿಗೆ ತಕ್ಕ ಶಿಕ್ಷೆ ಸೇರಿದ ಹಲವು ಅಂಶಗಳ ಸ್ಪಷ್ಟ ಕಾರ್ಯಕ್ರಮ ಮೂಡಿಬಂದಿತು.

ಸುಹಾರ್ತೋ ನಂತರ

ಸುಹಾರ್ತೋ ರಾಜಿನಾಮೆ ಜತೆ ಜನಾಂದೋಲನದ ಭರ ಇಳಿದಂತೆ ಕಂಡಾಗ ಹಬೀಬಿ ಸರ್ಕಾರ ಪುನಃ ಸುಹಾರ್ತೋನ ಗೊಂಬೆ ಆಟ ಮುಂದುವರೆಸಿತು. ಜನಾಂದೋಲನ ಪುನಃ ತೀವ್ರವಾಯಿತು. ಪ್ರಜಾಸತ್ತಾತ್ಮಕ ಸುಧಾರಣೆಗಳೂ ತರದಿದ್ದರೂ ಬಹುಪಕ್ಷೀಯ ವ್ಯವಸ್ಥೆ ಜಾರಿಗೆ ತರುವ, ಸ್ವತಂತ್ರ ಚುನಾವಣಾ ಕಮಿಷನ್, ಪಾರ್ಲಿಮೆಂಟು ವ್ಯವಸ್ಥೆಯಲ್ಲಿ ಬದಲಾವಣೆ ತರುವ, 1999 ರಲ್ಲಿ ಚುನಾವಣೆಗಳನ್ನು ನಡೆಸುವ ಕ್ರಮಗಳನ್ನು ಹಬೀಬಿ ಕೈಗೊಳ್ಳಬೇಕಾಯಿತು. ಸುಹಾರ್ತೋ ಮತ್ತವರ ಬಾಲಬಡುಕರನ್ನು ಅವರ ಸ್ವಜನಪಕ್ಷಪಾತ, ಸಾರ್ವಜನಿಕ ಆಸ್ತಿ, ಲೂಟಿ, ಭ್ರಷ್ಟಾಚಾರ ವಿಚಾರಣೆಗೆ ಗುರಿಪಡಿಸುವ ಮುಖ್ಯ ಒತ್ತಾಯ ಮಾತ್ರ ಹಾಗೇ ಉಳಿದಿದೆ. ಜನವರಿಯಲ್ಲಿ ಮಂಜೂರಾದ ಚುನಾವಣಾ ಕಾನೂನು ಪ್ರಕಾರ ಜೂನ್ 7 ರಂದು ಚುನಾವಣೆ ಹಮ್ಮಿಕೊಳ್ಳಲಾಗಿದೆ. 48 ಪಕ್ಷಗಳು ಇದರಲ್ಲಿ ಭಾಗವಹಿಸಲಿವೆ. ಈಗ ನಡೆಯಲಿರುವುದು ಪಾರ್ಲಿಮೆಂಟಿಗೆ ಪ್ರತಿನಿಧಿಕ ವ್ಯವಸ್ಥೆಯ ಆಧಾರದ ಮೇಲೆ ಚುನಾವಣೆಗಳು. ಆಮೇಲೆ ಪಾರ್ಲಿಮೆಂಟು ಅಧ್ಯಕ್ಷರ ಚುನಾವಣೆ ನಡೆಯಲಿದೆ. ಆದರೂ ಈ ಒಂದು ವರ್ಷ ನಡೆದ ಜನಾಂದೋಲನದ ವಿದ್ಯಾರ್ಥಿಗಳ ಮುಂಚೂಣಿಯಲ್ಲಿ ಹಲವು ಬೇಡಿಕೆಗಳನ್ನು ಗಮನಾರ್ಹವಾಗಿ ಪೂರೈಸಿದೆ. ಆ ಬಗ್ಗೆ ಒತ್ತಡ ಮುಂದುವರಿಸಿದೆ.

ಆಳುವ ಗೋಲ್ಕರ್ ಪಕ್ಷಕ್ಕೆ ಚುನಾವಣೆಯಲ್ಲಿ ಪರಾಭವವಾಗುವ, ಮಿಲಿಟರಿಯ ರಾಜಕೀಯ ಪಾತ್ರ ಗಮನಾರ್ಹ ಕಡಿಮೆಯಾಗಿರುವ ಸ್ಪಷ್ಟ ಸೂಚನೆಗಳಿವೆ. ಮೇಘವತಿ ಅಧ್ಯಕ್ಷರಾಗಿ ಚುನಾಯಿತರಾಗುವ ಸೂಚನೆಗಳಿವೆ. ಇದು ಆದರೆ ಜನಾಂದೋಲನದ ಇತರ ಒತ್ತಾಯಗಳನ್ನು ಜಾರಿಗೆ ತಂದು ಆಮೂಲಾಗ್ರ ಬದಲಾವಣೆ ಸಾಧ್ಯವಾಗಬಹುದು. ಇಂಡೋನೇಶ್ಯಾದ ಜನಾಂದೋಲನದ ವಿಜಯ ಹೊಸ್ತಿಲಲ್ಲಿ ನಿಂತಂತಿದೆ.

1965-66 ರ ಕಮ್ಯುನಿಸ್ಟರ ಬೇಟೆ ಜಗತ್ತಿನ ಎರಡನೇ ದೊಡ್ಡ ನರಮೇಧ

1965 ರ ಹೊತ್ತಿಗೆ ಇಂಡೋನೇಶ್ಯಾದ ಕಮ್ಯುನಿಸ್ಟ್ ಪಕ್ಷ ಸಮಾಜವಾದಿ ದೇಶಗಳ ಪಕ್ಷಗಳನ್ನು ಬಿಟ್ಟರೆ ಜಗತ್ತಿನ ಅತಿದೊಡ್ಡ ಕಮ್ಯುನಿಸ್ಟ್ ಪಕ್ಷವಾಗಿತ್ತು. 30 ಲಕ್ಷ ಸದಸ್ಯತ್ವ ಇದ್ದ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಸಾಮೂಹಿಕ ಸಂಘಟನೆಗಳ ಸದಸ್ಯತ್ವ 2 ಕೋಟಿಯಷ್ಟಿತ್ತು. ಆಗ ಅದು ಅಧ್ಯಕ್ಷ ಸುಕಾರ್ನೋ ಪಕ್ಷದೊಂದಿಗೆ ಸಮ್ಮಿಶ್ರ ಸರ್ಕಾರ ನಡೆಸುತ್ತಿತ್ತು. ಅಂದರೆ ಅಧಿಕಾರದಲ್ಲಿತ್ತು. ಅಕ್ಟೋಬರ್ 1, 1965 ರಿಂದ ಮುಂದಿನ 7 ತಿಂಗಳು ಇಂಡೋನೇಶ್ಯಾದ ಮಿಲಿಟರಿ ಸಿಐಎ ಬೆಂಬಲ, ಕುಮಕ್ಕಿನಿಂದ ನಡೆಸಿದ ನರಮೇಧ ಅದನ್ನು ಇಂಡೋನೇಶ್ಯಾದ ಭೂಪಟದಿಂದ ಅಳಿಸಿ ಹಾಕಿತು.

ಅಕ್ಟೋಬರ್ 1, 1965 ರಂದು ಆರು ಜನ ಹಿರಿಯ ಮಿಲಿಟರಿ ಅಧಿಕಾರಿಗಳನ್ನು ಕೊಲೆ ಮಾಡಲಾಯಿತು. ಮಿಲಿಟರಿ ಅಧಿಕಾರಿಗಳ ಗುಂಪೊಂದು 'ಕ್ಷಿಪ್ರಕ್ರಾಂತಿ' ನಡೆಸಲು ಪ್ರಯತ್ನಿಸಿತು. ಅದನ್ನು ಹತ್ತಿಕ್ಕಲು ಮಿಲಿಟರಿ ಕ್ರಮಕೈಗೊಳ್ಳಬೇಕು ಎಂಬ ನೆಪದಲ್ಲಿ ಜನರಲ್ ಸುಹಾರ್ತೋ ಮತ್ತು ಇತರ ಕೆಲವು ಮಿಲಿಟರಿ ಕಮಾಂಡರುಗಳ ನಾಯಕತ್ವದಲ್ಲಿ ಮುಂದಿನ 7 ತಿಂಗಳು ಇಂಡೋನೇಶ್ಯಾದ ಉದ್ದಗಲಕ್ಕೂ ಜಗತ್ತಿನ ಅತಿದೊಡ್ಡ ನರಮೇಧ ನಡೆಸಿದರು. ಇಂಡೋನೇಶ್ಯಾದ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ, ಬೆಂಬಲಿಗರ ನರಬೇಟೆ ನಡೆಯಿತು. ಮೂರು ಸಾವಿರ ದ್ವೀಪಗಳಲ್ಲಿ ಮೂರು ಸಾವಿರ ಕಿ.ಮಿ.ಅಗಲದಲ್ಲಿ ಹಂಚಿಹೋಗಿರುವ ದೇಶದ ಹಳ್ಳಿ ಹಳ್ಳಿಗಳಲ್ಲೂ ನರಬೇಟೆ ನಡೆಯಿತು. ಈ 'ಕ್ಷಿಪ್ರಕ್ರಾಂತಿ' ನಡೆಸಿದ ಮಿಲಿಟರಿ ಅಧಿಕಾರಿಗಳು ಆಮೇಲೆ ಸುಕಾರ್ನೋರನ್ನು ರಾಜೀನಾಮೆ ನೀಡುವಂತೆ ಬಲವಂತ ಮಾಡಿ ತಾವೇ ಅಧಿಕಾರ ವಹಿಸಿಕೊಂಡರು. ಆದರೆ ಅವರು ಆಪಾದಿಸಿದ್ದು ಕಮ್ಯುನಿಸ್ಟ್ ಪಕ್ಷ ಅಧಿಕಾರ ಕಸಿದುಕೊಳ್ಳಲು 'ಕ್ಷಿಪ್ರಕ್ರಾಂತಿ' ನಡೆಸಿತು ಎಂದು! ಈಗಾಗಲೇ ಅಧಿಕಾರದಲ್ಲಿದ್ದ ಕಮ್ಯುನಿಸ್ಟ್ ಪಕ್ಷ ಅಧಿಕಾರ ಕಸಿದುಕೊಳ್ಳಲು 'ಕ್ಷಿಪ್ರಕ್ರಾಂತಿ' (ಅದು ಮಿಲಿಟರಿ ಅಧಿಕಾರಿಗಳನ್ನು ಬಳಸಿ) ಎಂಬ ಪ್ರಶ್ನೆಗೆ ಎಲ್ಲೂ ಉತ್ತರ ಸಿಗಲಿಲ್ಲ.

ಇಂಡೋನೇಶ್ಯಾದ ಮೂಲೆ ಮೂಲೆಯ ಹಳ್ಳಿಗಳಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರ, ಬೆಂಬಲಿಗರ ಪಟ್ಟಿಯನ್ನು ಹಿಡಿದಿದ್ದ ಸೈನ್ಯದ ತುಕಡಿಗಳು ಅವರ ಕುಟುಂಬಗಳನ್ನು ಗುಂಡಿಕ್ಕಿ ಕೊಂದರು. ಹಲವಾರು ಕಡೆ ನದಿ, ತೊರೆಗಳಲ್ಲಿ ಹೆಣಗಳ ರಾಶಿ ತುಂಬಿ ಹೋಗಿತ್ತಂತೆ. ಹಲವು ತಿಂಗಳುಗಳ ನಂತರ ಅಮೆರಿಕ ಡೈರಿ, ನ್ಯೂಯಾರ್ಕ್ ಟೈಂಸ್, ಬ್ರಿಟನ್ನಿನ ಗಾರ್ಡಿಯನ್ ಪತ್ರಿಕೆಗಳು ನರಮೇಧದ ಬಗ್ಗೆ ವರದಿ ಮಾಡಿದವು. ಸಿಐಎ ಸುಹಾರ್ತೋ ಮತ್ತು ಇತರ ಜನರಲ್‌ಗಳಿಗೆ ಎಲ್ಲಾ ತರಹದ ಸಹಾಯ ಮಾಡಿದವು. ಸಿಐಎ ಈ ಅಧಿಕಾರಿಗಳನ್ನು ಸಂಘಟಿಸಿ ತರಬೇತಿ ಮಾಡಿ ಈ ಕಾರ್ಯಾಚರಣೆ ನಡೆಸಿದ್ದದು ಎಂದು ಪ್ರಕಟಿಸಿದವು. ಕಮ್ಯುನಿಸ್ಟ್ 'ಅಪಾಯದಿಂದ' ರಕ್ಷಿಸಲು ಇದು ಅಗತ್ಯವಾಗಿತ್ತು ಎಂದು ಹೇಳಲು ಮರೆಯಲಿಲ್ಲ.

ಇದು ಜಗತ್ತಿನ ಎರಡನೇ ಅತಿದೊಡ್ಡ ನರಮೇಧ ಎಂದು ಕುಪ್ರಸಿದ್ಧವಾಗಿದೆ. ಈ ನರಮೇಧದಲ್ಲಿ ಸತ್ತವರು ವಿಯೆಟ್ನಾಂ ಯುದ್ಧದಲ್ಲಿ 15 ವರ್ಷಗಳ ಕಾಲ ಸತ್ತವರಕಿಂತ ಹೆಚ್ಚು. ಹಿರೋಶಿಮಾ ನಾಗಸಾಕಿಯಲ್ಲಿ ಮಡಿದವರಿಗಿಂತಲೂ ಹೆಚ್ಚು. ಹಿಟ್ಲರನ ನರಮೇಧವನ್ನು ಮಾತ್ರ ಸುಹಾರ್ತೋ ಮತ್ತು ಆತನ ಸಿಐಎ ಧಣಿಗಳಿಗೆ ಮೀರಿಸಲಾಗಲಿಲ್ಲ! ಅನಧಿಕೃತ ಅಂದಾಜುಗಳ ಪ್ರಕಾರ 10 ಲಕ್ಷ ಜನರನ್ನು ಮಿಲಿಟರಿ ತುಕಡಿಗಳು ಕೊಲೆ ಮಾಡಿದವು. 5 ಲಕ್ಷದಷ್ಟು ಜನರನ್ನು ದೂರದ ದ್ವೀಪಗಳಲ್ಲಿ ಗಡಿಪಾರು ಜೈಲುಗಳಿಗೆ ಹಾಕಲಾಯಿತು. ಹಲವರು ಇಂದಿಗೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಹಬೀಬರ ಸುಧಾರಣೆಗಳು ಅವರನ್ನು ಮುಟ್ಟಿಲ್ಲ. ಬದುಕುಳಿದ ಕಮ್ಯುನಿಸ್ಟರು, ಬೆಂಬಲಿಗರನ್ನು ಎರಡನೇ ದರ್ಜೆ ಪ್ರಜೆಗಳಾದರು. ಸರ್ಕಾರಿ ಉದ್ಯೋಗಕ್ಕೆ, ಸರ್ಕಾರದ ಕೆಲಸ ಕಾರ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿರಲಿಲ್ಲ ಎಂದು ಇಂದಿಗೂ ಹೇಳಿಕೆ ಕೊಡಬೇಕು. ಇಂದಿಗೂ ಸರ್ಕಾರದ ಹತ್ತಿರ ಕಮ್ಯುನಿಸ್ಟರ ಪಟ್ಟಿಗಳಿವೆ. ಅವರು ಯಾವುದಕ್ಕಾದರೂ ಅಜಿ ಗುಜರಾಯಿಸಿದರೆ ಅವರ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ - ಕಾನೂನುಬದ್ಧವಾಗಿ.

ಮಿಲಿಟರಿ ಸರ್ಕಾರದ ವಿರುದ್ಧ ದಂಗೆಯ ಬೇಡಿಕೆಗಳು

- ಸುಹಾರ್ತೋ ತನ್ನ ಮೂರು ದಶಕಗಳಲ್ಲಿ ಮಾಡಿದ ಅಪರಾಧಗಳಿಗೆ ಆತನನ್ನು ಬಂಧಿಸಿ ಸ್ವತಂತ್ರ ಕೋರ್ಟಿನೆದುರು ವಿಚಾರಣೆ ನಡೆಸಬೇಕು.
- ಸ್ವತಂತ್ರ ಚುನಾವಣಾ ಸಂಸ್ಥೆಯೊಂದು ಬಹು-ಪಕ್ಷೀಯ ಚುನಾವಣೆಯನ್ನು ನಡೆಸಬೇಕು.
- ಸುಹಾರ್ತೋನ ಕುಟುಂಬ, ಬಾಲಬಡುಕರನ್ನು ಮತ್ತು ಅವರ ಕುಟುಂಬದವರಿಗೆ ಸೇರಿದ ಎಲ್ಲಾ ಅಪಾರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ರಾಷ್ಟ್ರೀಕರಿಸಬೇಕು.
- 1985 ರಲ್ಲಿ ರಚಿಸಿದ ಐದು ರಾಜಕೀಯ ಕಾನೂನುಗಳನ್ನು ರದ್ದು ಮಾಡಬೇಕು. ಮಿಲಿಟರಿ ಸರ್ವಾಧಿಕಾರಕ್ಕೆ ಪ್ರಜಾಸತ್ತೆಯ ಮುಖವಾಡಗಳವು.
- ಮಿಲಿಟರಿಗೆ ಆಡಳಿತದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವ ಎರಡು ಜವಾಬ್ದಾರಿ ಗಳನ್ನು ಕೊನೆಗೊಳಿಸಬೇಕು. ಮಿಲಿಟರಿ ದೇಶದ ಭದ್ರತೆಯ ಕೆಲಸಕ್ಕೆ ಸೀಮಿತಗೊಳಿಸಬೇಕು.
- ಸುಹಾರ್ತೋ ಮತ್ತು ಹಬೀಬಿಯ ರಬ್ಬರ್ ಸ್ಟ್ಯಾಂಪ್ ಆದ ಪಾರ್ಲಿಮೆಂಟಿನ ಎರಡೂ ಸದನಗಳನ್ನು ವಿಸರ್ಜಿಸಬೇಕು.
- ಪೂರ್ವ ತೈಮೊರ್‌ನ ಭವಿಷ್ಯವನ್ನು ನಿರ್ಧರಿಸಲು ಅಲ್ಲಿ ಜನಮತ ಸಂಗ್ರಹ ನಡೆಸಬೇಕು.
- 1966 ರ ನಂತರ ಬಂಧಿತರಾದ ಇಂಡೋನೇಶ್ಯನ್ ಕಮ್ಯುನಿಸ್ಟ್ ಪಕ್ಷದ ನಾಯಕರು, ಕಾರ್ಯಕರ್ತರು ಸೇರಿದಂತೆ ಎಲ್ಲಾ ರಾಜಕೀಯ ಕೈದಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು.



ಇ.ಎಂ.ಎಸ್. ಭವನ ನಿಧಿ

ಒಟ್ಟು	12,66,611-50
ಅರಸು - ಮೈಕೋ ನೌಕರರು	500
ಬಸವರಾಜು	201
ಮೈಕೋಚಂದ್ರು(ಮೊದಲ ಕಂತು)	2000
ಹೆಚ್.ಕುಮಾರ ಸ್ವಾಮಿ, ಮೈಕೋ ನಾಗನಾಥಪುರ	150
ಬೆಂಗಳೂರು - ಎಲ್‌ಐಸಿ ಸಂಗಾತಿಗಳಿಂದ ಸಂಗ್ರಹ	
ನಂಬಿಯಾರ್	5001
ಕೃಷ್ಣಮೂರ್ತಿ	250
ಸಿಪಿಐ(ಎಂ) ಬೆಳಗಾವಿ ಪ್ರಾದೇಶಿಕ ಸಮಿತಿ ಮೂಲಕ	
ಬಿ.ಬಿ.ಶಿಕಾಲಿಪುರ	1000
ಎಫ್.ಎಂ.ನದಾಫ	500
ಗೈಬು ಜೈನಖಾನ	500
ಎಲ್.ಎಸ್.ನಾಯಕ	500
ನಾಗಪ್ಪ ಸಂಗೊಳ್ಳಿ	200
ಪಡಿಯಪ್ಪ ಶಾನವಾಡ	200
ಕಾ. ಎಲ್.ಎಸ್.ನಾಯಕ ಮೂಲಕ ಸಂಗ್ರಹ	
ಎಂ.ಎಸ್.ಪಾಟೀಲ	50
ಬಿ.ಎ.ಮುದಕನ ಗೌಡರ	50
ಎಸ್.ಬಿ.ಬಿರಾದಾರ	50
ಜೆ.ಎಚ್.ಕಿರೇಸೂರ	100
ಬಿ.ಎಸ್.ನರಗುಂದ	50
ವಿ.ಎಸ್.ಬಜಂತ್ರಿ	50
ಆರ್.ಕೆ.ಲಮಾಣ	50
ಜಿ.ಎಸ್. ಲಮಾಣ	50
ರಾಜೇಸಾಬ ದ.ಬಾರಿಗಿಡದ	50
ಎಂ.ಜಿ.ಶಿರಪಟ್ಟಿ	50
ಕಾಂ. ಎಂ.ಎಫ್.ನದಾಫ ಮೂಲಕ	
ಎನ್.ವೈದ್ಯ ಸವದತ್ತಿ	1000
ಎಂ.ಸಿ.ಜೈನ	500
ಸಿ.ಬಿ.ದೊಡ್ಡಗೌಡ್ರ	251
ಎ.ಎನ.ಘಂಟಿ	200
ಎಂ.ಎಸ್.ತುರಮರಿ	101
ಎಫ್.ವೈ.ಉಪಾರಟ್ಟಿ	101
ಬಿ.ಸಿ.ಚಂದರಗಿ	101
ಎಸ್.ಹೆಚ್.ಜಾಲಿಕೊಪ್ಪ	100
ಬಿ.ಎಸ್.ಸರದಾರ	100
ಒಟ್ಟು	12,80,617.50

ಚಾಂಪಿಯನ್ನರಿಗೆ 'ಪೆಪ್ಸಿ' ಕುಡಿಸಿದವರು ಚಾಂಪಿಯನ್ ಆಗಬಹುದೆ?

World Cup England 99



"ಯೇ ದಿಲ್ ಮಾಂಗೇ ಮೋರ್"!

ಆರಂಭದ ಭಾರತದ ಟೀಮಿನ ಸೋಲುಗಳಿಂದ ನಿರಾಶರಾಗಿದ್ದ ಭಾರತದ ಜನ ಕೀನ್ಯಾ ಮತ್ತು ಶ್ರೀಲಂಕಾದ ಮೇಲಿನ ಭಾರಿ ವಿಜಯದಿಂದ ರೋಮಾಂಚಿತರಾಗಿದ್ದಾರೆ. ಇದೇ ರೀತಿ ಆಡಿದರೆ ಸೂಪರ್‌ಸಿಕ್ಸ್ ಯಾಕೆ ವಿಶ್ವಕಪ್ ಸೆಮಿಫೈನಲ್, ಫೈನಲ್ ತಲುಪುವ ಸಾಧ್ಯತೆ ಇದೆ. ದಕ್ಷಿಣ ಆಫ್ರಿಕಾ, ರನ್ ರೇಟಿನಿಂದಾಗಿ ಭಾರತ ಸೂಪರ್ ಸಿಕ್ಸ್‌ಗೆ ಹೋಗಬಹುದು.

'ಎ'ಗುಂಪಿನಲ್ಲಿ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಭಾರತ; 'ಬಿ' ಗುಂಪಿನಲ್ಲಿ ಪಾಕಿಸ್ತಾನ, ವೆಸ್ಟ್‌ಇಂಡಿಸ್, ಆಸ್ಟ್ರೇಲಿಯ ಸೂಪರ್ ಸಿಕ್ಸ್‌ಗೆ ಹೋಗಬಹುದಾದ ಆರು ಟೀಮುಗಳು. ಈ ಆರು ಟೀಮುಗಳು ಒಟ್ಟು 9 ಮ್ಯಾಚು ಆಡಲಿದ್ದು. ಅದರಲ್ಲಿ ಮೊದಲ ನಾಲ್ಕು ಟೀಮುಗಳು ಸೆಮಿಫೈನಲ್ ತಲುಪುತ್ತವೆ.



ಈಗ ಕ್ರಿಕೆಟ್ ಪ್ರೇಮಿಗಳ ಅಂದಾಜಿನ ಪ್ರಕಾರ ದಕ್ಷಿಣ ಆಫ್ರಿಕಾ, ಪಾಕಿಸ್ತಾನ ವಿಶ್ವಕಪ್ ಗೆದ್ದುಕೊಳ್ಳುವ ರೇಸ್‌ನಲ್ಲಿ ಮೊದಲ ಎರಡು ಸ್ಥಾನಗಳಿಸಿದ್ದಾರೆ. ಉಳಿದ ಎರಡು ಸ್ಥಾನಗಳಲ್ಲಿ ಭಾರತವೂ ಸ್ಪರ್ಧೆಯಲ್ಲಿದೆ. ಆದರೆ ಕ್ರಿಕೆಟ್‌ನಲ್ಲಿ (ಯಾವುದೇ ಆಟದಲ್ಲಿ) ಏನೂ ಆಗಬಹುದು. ಕಳೆದ ವಿಶ್ವಕಪ್‌ನಲ್ಲಿ ಯಾರೂ ನಿರೀಕ್ಷಿಸದ ಶ್ರೀಲಂಕಾ ಎಲ್ಲಾ 'ಭವಿಷ್ಯವಾಣಿ' ಹುಸಿ ಮಾಡಿ ಚಾಂಪಿಯನ್ ಆಗಿರಲಿಲ್ಲವೇ? ಅಲ್ಲದೆ ಭಾರತ ಈ ಬಾರಿಯ ವಿಶ್ವಕಪ್ ಪಂದ್ಯದಲ್ಲಿ ಅತ್ಯಂತ ಹೆಚ್ಚಿನ ಸ್ಕೋರ್ ಗಳಿಸಿದ, 3ನೇ ವಿಕೆಟ್‌ಗೆ ಅತ್ಯಂತ ಹೆಚ್ಚು ರನ್ ಮುಂತಾದ ಹಲವು ರೆಕಾರ್ಡ್ ಸ್ಥಾಪಿಸಿದೆ. ರನ್‌ರೇಟ್‌ನಲ್ಲಿ ಎರಡೂ ಗುಂಪುಗಳನ್ನು ಸೇರಿಸಿ ಎರಡನೇ ಸ್ಥಾನದಲ್ಲಿದೆ. 'ಬಿ' ಗುಂಪಿನಲ್ಲಿ ಮೊದಲ ಸ್ಥಾನದಲ್ಲಿಯ ಪಾಕಿಸ್ತಾನಕ್ಕಿಂತ ಹೆಚ್ಚು. ಶ್ರೀಲಂಕಾದ ಮ್ಯಾಚ್‌ನಲ್ಲಂತೂ ರೆಕಾರ್ಡುಗಳ ಮಹಾಪೂರ ಇತ್ತು. ಅತ್ಯಂತ ಉತ್ತಮ ಬ್ಯಾಟಿಂಗ್ ಸೈಡ್ ಎಂದು ಖ್ಯಾತಿ ಗಳಿಸಿದೆ. ತಾವು 'ಪೆಪ್ಸಿ' ಕುಡಿಯದೆ ಇತರರಿಗೆ 'ಪೆಪ್ಸಿ' ಕುಡಿಸುವುದರಲ್ಲಿ ಅಜರ್ ಮತ್ತು ತಂಡ ಸಫಲರಾದಾರೆ?

ವಿಶ್ವಕಪ್ ರೇಸ್ ತಂಡಗಳ ಸ್ಥಾನಮಾನ

(ಮೇ 29, ಶನಿವಾರ)

ತಂಡ	ಪಂದ್ಯಗಳು	ಗೆದ್ದ ಪಂದ್ಯ	ಸೋತ ಪಂದ್ಯ	ಅಂಕ	ರನ್ ರೇಟ್
'ಎ' ಗುಂಪು					
ದಕ್ಷಿಣ ಆಫ್ರಿಕಾ	5	4	1	8	0.856
ಜಿಂಬಾಬ್ವೆ	5	3	2	6	0.017
ಇಂಗ್ಲೆಂಡ್	4	3	1	6	-0.083
ಇಂಡಿಯಾ	4	2	2	4	1.293
ಶ್ರೀಲಂಕಾ	4	1	3	2	-1.244
ಕೀನ್ಯಾ	4	0	4	0	- 1.268
'ಬಿ' ಗುಂಪು					
ಪಾಕಿಸ್ತಾನ	4	4	0	8	0.965
ವೆಸ್ಟ್ ಇಂಡಿಸ್	4	3	1	6	0.885
ಆಸ್ಟ್ರೇಲಿಯ	4	2	2	4	0.766
ನ್ಯೂಝಿಲ್ಯಾಂಡ್	4	2	2	4	0.001
ಬಾಂಗ್ಲಾದೇಶ4	1	3	2-1.008		
ಸ್ಕಾಟ್‌ಲ್ಯಾಂಡ್	4	0	4	0	-1.608

ಜಿಂಬಾಬ್ವೆ ಎದುರು ಸೋತಾಗ 'ಮುಗಿಯಿತು ಬಿಡು' ಎಂದು ಕೈ ಚೆಲ್ಲಿದರು, ತಂದೆಯ ಹಠಾತ್ ವಿಯೋಗದಿಂದ ಭಾರತಕ್ಕೆ ಸಚಿನ್ ಹಿಂತಿರುಗಬೇಕಾದಾಗಲಂತೂ ನಿರಾಶೆಯ ಅಲೆ ಹರಡಿತ್ತು. ಲಂಡನ್‌ಗೆ ಮ್ಯಾಚ್ ನೋಡಲು ಸಾವಿರಾರು ರೂಪಾಯಿ ಖರ್ಚು ಮಾಡಿ ಹೋಗಿದ್ದ ಭಾರತೀಯರು ಎಲ್ಲಾ ಟಿಕೇಟುಗಳನ್ನು ಮಾರಿ ಬಿಟ್ಟರಂತೆ.

ಈ ಪತ್ರಿಕೆ ಮುದ್ರಣಕ್ಕೆ ಹೋಗುತ್ತಿರುವಾಗ (ಶನಿವಾರ ಮೇ 29 ಮಧ್ಯಾಹ್ನ) 'ಎ' ಗುಂಪಿನಲ್ಲಿ ಇನ್ನು ಒಂದೇ ಒಂದು ಮ್ಯಾಚ್ ಬಾಕಿ ಇರುವ ಭಾರತ ಮೂರನೇ ಸ್ಥಾನದಲ್ಲಿದೆ. ಭಾರತ-ಇಂಗ್ಲೆಂಡ್)ಮೇ 29 ರ) ಮ್ಯಾಚ್ ಸೇರಿದಂತೆ ನಾಲ್ಕು ಮ್ಯಾಚ್‌ಗಳು ಆಗಬೇಕಾಗಿದ್ದು ಅದರ ನಂತರವೂ ಮೊದಲ ಮೂರು ಸ್ಥಾನದಲ್ಲಿದ್ದವರು 'ಸೂಪರ್ ಸಿಕ್ಸ್' ರೌಂಡ್‌ಗೆ ಹೋಗುತ್ತಾರೆ. ಅಂದರೆ ಇತರ ಆರು ಟೀಮುಗಳು (ಎರಡೂ ಗುಂಪಿನ) ಮನೆಗೆ ಹೋಗಬೇಕು. ಭಾರತ ಇಂಗ್ಲೆಂಡಿನ ಮೇಲೇ ಇಂದಿನ (ಮೇ 29) ಮ್ಯಾಚ್ ಗೆದ್ದರೆ ಸೂಪರ್‌ಸಿಕ್ಸ್‌ಗೆ ಹೋಗುವುದು ಖಚಿತ. ಸೋತರೂ ಭಾರತ ಈಗ ಗಳಿಸಿರುವ ಬಲಾಢ್ಯ

ಚಾಂಪಿಯನ್ ಶ್ರೀಲಂಕಾಕ್ಕೆ 'ಪೆಪ್ಸಿ' ಕುಡಿಸಿ ಭಾರಿ ವಿಜಯ ಗಳಿಸಿದ ಭಾರತ ವಿಶ್ವಕಪ್ ಕಣದಲ್ಲಿ ವಾಪಸಾಗಿದೆ. ತಂದೆಯ ವಿಯೋಗವಾದರೂ ದೇಶದ ಕರೆಗೆ ಓಗೊಟ್ಟು ಬೇಗನೇ ಮರಳಿದ ಸಚಿನ್ ಟೀಮಿನಲ್ಲಿ ಆತ್ಮವಿಶ್ವಾಸ ತುಂಬಿದ್ದಾರೆ. ಸೂಪರ್ ಸಿಕ್ಸ್‌ಗೆ ಹೋಗುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಈಗ ಭಾರತದ ಕ್ರಿಕೆಟ್ ಪ್ರೇಮಿಗಳು ಇನ್ನೂ ಹೆಚ್ಚಿನದನ್ನು ಬಯಸುತ್ತಾರೆ. ಇದೇ ರೀತಿಯ ಆಟ ಮುಂದುವರಿಸಿದರೆ ಸೆಮಿಫೈನಲ್, ಫೈನಲ್ ತಲುಪಿ ಕಪ್ 16 ವರ್ಷಗಳ ನಂತರ ಮತ್ತೆ ಗಳಿಸಬೇಕು ಎಂದು ಬಯಸುತ್ತದೆ. ಪೆಪ್ಸಿಯ ಈಗಿನ ಜಾಹೀರಾತು ಹೇಳುವಂತೆ ಕ್ರಿಕೆಟ್ ಪ್ರೇಮಿಗಳು 'ಯೆ ದಿಲ್ ಮಾಂಗೆ ಮೋರ್' ಎನ್ನುತ್ತಿದ್ದಾರೆ. ಇನ್ನೂ ಹೆಚ್ಚಿನದನ್ನು ಬಯಸುತ್ತಿದ್ದಾರೆ. 'ಕಮಾನ್ ಇಂಡಿಯಾ! ದಿಖಾದೋ!' ಎನ್ನುತ್ತಿದ್ದಾರೆ



ವರ್ಲ್ಡ್ ಕಪ್ ಕ್ರಿಕೆಟ್ ಜ್ವರ

ಅಸಮಾನ ಸಾಮಾನ್ಯ

ಹುಟ್ಟಿನೊಡನೆಯೆ ಮೈಗಂಟಿಬಂದ ಕರ್ಣಕುಂಡಲ
ದ ಹಾಗೆ ವರ್ಣಶ್ರೇಣಿಯ ಕಿರೀಟ ಸಾಲ
ದೆಂಬಂತೆ ಮತ್ತೆ ಬಾಯಿಗೆ ಚಿನ್ನದ ಚಮಚ
ಕಚ್ಚಿ ಬಂದವ ನೀನು ಕಾಮ್ರೇಡ್ ನಂಬೂದರಿಪಾಡ್

ನಿಮ್ಮ ಪಂಜರದ ಗಿಳಿಗೂ ಗಿಳಿಪಾಠ ವೇದ
ಶಾಸ್ತ್ರ ಪುರಾಣೋಪನಿಷತ್; ಮಡಿ ಮೈಲಿಗೆ
ಪಂಜರದಿಂದ ಹೊರಬಿದ್ದ ಗಿಳಿಯೇ ನೀನು ಗರುಡ
ನಾಗುವ ಪರಿಯೊಂದು ವಿಸ್ಮಯ ಪಾಕ

ಮೊದಮೊದಲು ಗಾಂಧಿಯದೇ ಪಾಠ ಚರಕ ಹಿಡಿದು
ಸ್ವಾತಂತ್ರ್ಯದಗ್ನಿಕುಂಡವ ಹಾಯುವ ತವಕ
ಕಟ್ಟಕಡೆಯವರ ಕೈಗೆ ಕೀಲಿ ಕೊಡುವ ದಿವ್ಯ ವ್ರತ
ಕೈ ತೆರೆದುಕೊಂಡದ್ದು ಮಾರ್ಕ್ಸ್‌ವಾದವೆಂಬ ಕ್ರಾಂತಿಪಥ

ಕೊಯ್ದು ಕಿರೀಟ, ಅರಿದು ಬಂಗಾರದ ಚಮಚ
ರಕ್ತದ ಧಾರೆ ಎರೆದು
ಪಕ್ಷದ ನಿಧಿಗೆ ಕೊಟ್ಟು ಕಡೆವರೆಗೆ
ಸಾಮಾನ್ಯನಂತುಳಿದ ಅಸಮಾನ್ಯ

- ಆರ್.ವಿ.ಭಂಡಾರಿ

ಐಕ್ಯರಂಗ ಪುರವಣಿ

'ಕರ್ನಾಟಕ ಪ್ರಾದೇಶಿಕ ಅಸಮಾನತೆ ಹಾಗೂ ಪ್ರತ್ಯೇಕವಾದ'

ಜೂನ್ 14 ರಂದು 'ಐಕ್ಯ ಕೇರಳ' ದ ಧೀಮಂತ ಹೋರಾಟಗಾರರಾದ ಇ.ಎಂ.ಎಸ್.ನಂಬೂದರಿಪಾಡ್‌ರವರ ಜನ್ಮದಿನದ ಸಂದರ್ಭದಲ್ಲಿ ಐಕ್ಯರಂಗದ ಮೊದಲ ಮಾಸಿಕ ಪುರವಣಿ ಬರಲಿದೆ. ಪ್ರತಿ ತಿಂಗಳೂ ಬರಲಿರುವ ಈ ಮಾಸಿಕ ಪುರವಣಿ ಜನರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆಗಳ ಮೇಲ ಆಳವಾದ ವಿಶ್ಲೇಷಣೆ, ವಿಶೇಷ ಬರಹ ಮಾಹಿತಿಗಳ ಗಣಿ. ಸಂಗ್ರಹಯೋಗ್ಯವಾಗಿ ಪುಸ್ತಿಕೆಯ ರೂಪದಲ್ಲಿ ನಿಮ್ಮಕೈ ಸೇರುತ್ತದೆ. ಪುರವಣಿ ಬರುವ ಐಕ್ಯರಂಗ ಸಂಚಿಕೆಯ ಬೆಲೆ 5 ರೂ.

ಕರ್ನಾಟಕವನ್ನು ಕಾಡುತ್ತಿರುವ ಪ್ರಾದೇಶಿಕ ವಾದ ಅದರ ಹಿನ್ನೆಲೆಯಲ್ಲಿರುವ ಪ್ರಾದೇಶಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆಯ ಕಾರಣ, ಹಿನ್ನೆಲೆಗಳು, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು ಇವುಗಳ ಪ್ರತ್ಯೇಕತಾ ಚಳುವಳಿಗಳ ಬಗ್ಗೆ ಅಪರೂಪದ ಸಂಶೋಧನ, ಆಸಕ್ತಿಕರ ಮಾಹಿತಿಗಾಗಿ ಕಾದು ನೋಡಿ.

ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದವರು ತಕ್ಷಣವೇ ಪ್ರತಿಗಳನ್ನು ಕಾದಿರಿಸಬೇಕು. ಪುರವಣಿಯ ಪ್ರತ್ಯೇಕ ಬೆಲೆ 2 ರೂ.

- ಸಂಪಾದಕರು.

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು:ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಜನ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee, Editor : G.N. NAGARAJ